ಬಿ.ಬಿ.ಎ.

# ಎರಡನೇ ಸೆಮಿಸ್ಟರ್

ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**2021**

ಬಿ.ಬಿ.ಎ.

# ಎರಡನೇ ಸೆಮಿಸ್ಟರ್

# ಪರಿವಿಡಿ

## ಮಾಧ್ಯಮ


1. ವ್ಯಂಗ್ಯ ಚಿತ್ರಕಲೆ – ಎಂ. ವಿಶ್ವನಾಥ್ 123–130
2. ನಾಟಕದ ರಾಜನೂ ಕೋಡಂಗಿಯೂ 133–137
–ಡಾ। ಚಂದ್ರಶೇಖರ ಕಂಬಾರ
3. ತರ್ಕದ ಗೋಣು ಮುರಿದು–ಎನ್.ಎಸ್. ಶಂಕರ್ 131–132
ಓದು ಪಠ್ಯ : ನಾಟಕ ಹಾಗೆಂದರೇನು? – ಕೆ.ವಿ. ಸುಬ್ಬಣ್ಣ 138–143


## ಆಧುನಿಕತೆ


1. ವಸಂತ – ಬಿ.ಎಂ. ಶ್ರೀಕಂಠಯ್ಯ 145–145
2. ಅದ್ವಿತೀಯ ಗಣಿತಜ್ಞೆ ಹಿಪಾಟಿಯ – ನೇಮಿಚಂದ್ರ 146–152
3. ಹಿಂದ್ ಸ್ವರಾಜ್ಯ–ಮೋಹನದಾಸ್ ಕರಮಚಂದ್ ಗಾಂಧಿ 153–157
ಓದು ಪಠ್ಯ : ಹೋರಾಟದ ಹಾದಿಯಲ್ಲಿ 158–164
–ಡಾ। ಎಚ್. ನರಸಿಂಹಯ್ಯ


## ಕ್ರೀಡೆಗಳು


1. ಆಫ್ರಿಕಾದ ಹರಿಣಿ – ಪಿ. ಲಂಕೇಶ್ 167–173
2. ಸವಾಲು ಗೆದ್ದ ಸಿದ್ಧ – ಕಲ್ಕುಳಿ ವಿಠಲ್ ಹೆಗಡೆ 174–179
3. ಕೋ ಕೋ ಕೋ ಕೋಳಿ ಅಂಕ–ಪಿ. ಸಾಯಿನಾಥ್ 180–187
–ಕನ್ನಡಕ್ಕೆ : ಜಿ.ಎನ್. ಮೋಹನ್
ಓದು ಪಠ್ಯ : ಹಾಕಿ ಕ್ರೀಡೆಯ ಸುತ್ತಮುತ್ತ – ಎಂ.ಎ. ಪೊನ್ನಪ್ಪ 188–193


## ಕನ್ನಡಾಭಿಮಾನ


1. ಏಕೀಕರಣ – ನಾಟಕದ ಭಾಗ – ಬೀಚಿ 196–220
2. ಕನ್ನಡ ಸಂವರ್ಧನೆ–ಡಾ। ಡಿ.ಆರ್. ನಾಗರಾಜ್ 221–227
3. ಕನ್ನಡ ಸಂಸ್ಕೃತಿ ಹಿರಿಮೆ ಗರಿಮೆ 228–235
–ಡಾ। ಎಂ. ಚಿದಾನಂದಮೂರ್ತಿ
ಓದು ಪಠ್ಯ : ಕನ್ನಡವೆಂದರೆ ಬರಿ ನುಡಿಯಲ್ಲ 236–237
–ಪ್ರೊ। ಕೆ.ಎಸ್. ನಿಸಾರ್ ಅಹಮದ್

# ಮಾಧ್ಯಮ

ಮನುಷ್ಯ ಮನುಷ್ಯ ನಡುವಿನ ಸಂವಹನದ ಕೊಂಡಿ ಮಾಧ್ಯಮ. ಮೊದಮೊದಲು ಆದಿಮಾನವನ ಸಂಕೇತ ಭಾಷೆಗಳಿಂದ ಕೂಡಿದ ಸಂವಹನ ಪ್ರಕ್ರಿಯೆಯು, ಭಾಷೆಗಳ ಮುಖಾಂತರ ಪರಿವರ್ತನೆಗೊಳ್ಳಲು ಸಹಸ್ರಾರು ವರ್ಷಗಳೇ ಬೇಕಾದವು.

ನಾಗರಿಕತೆಗಳು ವಿಕಾಸಗೊಂಡಂತೆ, ಭಾಷೆಗಳು ಅಭಿವೃದ್ಧಿಯಾದಂತೆ 'ಸಂವಹನ' ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿತು. ಕೃಷಿ ಆಧಾರಿತ ಸಮಾಜದಲ್ಲಿ ಮೌಖಿಕ ಸಂವಹನವೇ ಪ್ರಧಾನವಾಗಿತ್ತು. ಕೈಗಾರಿಕಾ ಕ್ರಾಂತಿಯೊಂದಿಗೆ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಹೊಸ ಅರ್ಥ ಬಂದಿತು, ಮಾಧ್ಯಮಗಳು ಯಂತ್ರಯುಗದ ಹರಿಕಾರರಾದವು.

ಇಬ್ಬರು ವ್ಯಕ್ತಿಗಳ ನಡುವೆ ಮುಖಾಮುಖಿ ನಡೆಯುವ ಸಂವಹನದಿಂದ, ಗುಂಪು ಸಂವಹನಕ್ಕೆ – ಇಲ್ಲಿ ಸಂವಹನವು ಸಮೂಹಗಳೊಂದಿಗೆ ನಡೆಯುವುದರಿಂದ ಮಾಧ್ಯಮಗಳು ಸಮೂಹ ಮಾಧ್ಯಮಗಳಾಗಿ ಪರಿಗಣಿಸಲ್ಪಟ್ಟವು.

ಸಮೂಹ ಮಾಧ್ಯಮಗಳು ಆಧುನಿಕ ತಂತ್ರಜ್ಞಾನದ ಕೊಡುಗೆ. ಮೊದಲು ಜಾನಪದ ಪ್ರಕಾರಗಳು, ಸಾಹಿತ್ಯ, ನಾಟಕಗಳು ಸಮೂಹ ಮಾಧ್ಯಮಗಳೆನಿಸಿದ್ದರೆ, ಈಗ ಇದರ ಜೊತೆಗೆ ಹಲವು ಹೊಸ ಮಾಧ್ಯಮಗಳು ಸೇರಿಕೊಂಡಿವೆ. ಕ್ರಿಶ್ಚಿಯನ್ ಮಿಷನರಿಗಳು ಮುದ್ರಣ ಯಂತ್ರ ಕಂಡುಹಿಡಿದ ಕ್ಷಣವೇ ಆಧುನಿಕ ಸಮೂಹ ಮಾಧ್ಯಮದ ಜನನವಾಯಿತು. ನಂತರ ಇಪ್ಪತ್ತು ಹಾಗೂ ಇಪ್ಪತ್ತೊಂದನೆಯ ಶತಮಾನದಲ್ಲಿ ಅನ್ವೇಷಣೆಗಳು ನಡೆಯುತ್ತಿದ್ದಂತಯೇ ಅಕ್ಷರ ಮಾಧ್ಯಮವಾದ ಪತ್ರಿಕೆಗಳಿಂದ ಹಿಡಿದು ಶ್ರವ್ಯ ಮಾಧ್ಯಮವಾದ ರೇಡಿಯೋ, ದೃಶ್ಯಮಾಧ್ಯಮವಾದ ಸಿನಿಮಾ, ದೂರದರ್ಶನ, ವ್ಯಂಗ್ಯಚಿತ್ರ,

ಚಿತ್ರಕಲೆ, ಜಾಹೀರಾತು, ಸ್ಮಾರ್ಟ್ ಫೋನ್‌ಗಳು, ಅಂತರ್ಜಾಲ ವ್ಯವಸ್ಥೆ, ಫೇಸ್‌ಬುಕ್, ವ್ಯಾಟ್ಸ್ಯಾಪ್, ಟ್ವಿಟರ್, ಇನ್‌ಸ್ಟಾಗ್ರಾಂ ಇತ್ಯಾದಿಗಳು ಬಳಕೆಗೆ ಬಂದಿತು. ಪ್ರಸ್ತುತ ಕೋವಿಡ್–೧೯ರ ಪರಿಣಾಮದಿಂದ ಝೂಮ್, ಗೂಗಲ್ ಡಿಯೋ, ವೆಬೆಕ್ಸ್, ಲೈವ್ ಸ್ಟ್ರೀಮ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಮಾಧ್ಯಮದ ಸದುಪಯೋಗ ಮತ್ತು ದುರುಪಯೋಗಗಳು ನಮ್ಮ ವಿವೇಚನೆಗೆ ಬಿಟ್ಟಿದ್ದು. ಅದನ್ನು ಚಾಕುವಿನಂತೆ ತರಕಾರಿ ಹೆಚ್ಚುವುದಕ್ಕೂ ಬಳಸಬಹುದು, ಕೊಲೆ ಮಾಡಲೂ ಉಪಯೋಗಿಸಬಹುದು. ಸಮಾಜದ ಶಾಂತಿ ಸೌಹಾರ್ದತೆಯನ್ನು ಉಳಿಸಲೂಬಹುದು, ಅಸ್ತವ್ಯಸ್ತಗೊಳಿಸಲೂ ಬಹುದು. ಮೊದಲು ಬರಹಮಾಧ್ಯಮವು ಬಲಶಾಲಿಯಾಗಿದ್ದಾಗ “Pen is mightier than sword” ಎಂದಿತ್ತು. ಈಗ ಅಂತರ್ಜಾಲವು ಎಲ್ಲಕ್ಕಿಂತಲೂ ಬಲಶಾಲಿಯಾಗಿದ್ದು ಪ್ರಧಾನ ಸ್ಥಾನವನ್ನು ಪಡೆದುಕೊಂಡಿದೆ.

ಮಾಧ್ಯಮವನ್ನು ಒಂದು ದೊಡ್ಡ ಆಲದ ಮರವೆಂದು ಪರಿಗಣಿಸಿದರೆ ಅದರ ರೆಂಬೆ, ಕೊಂಬೆ, ಬಿಳಲುಗಳಂತೆ ಅನೇಕ ಹೊಸ ಹೊಸ ಅಂಗ ಮಾಧ್ಯಮಗಳು ದಿನದಿನವೂ ಹುಟ್ಟಿಕೊಳ್ಳುತ್ತಿವೆ. ಮಾಧ್ಯಮ ‘ಜಂಗಮ’ವಾದ್ದರಿಂದ ಅದಕ್ಕೆ ಅಳಿವು ಎನ್ನುವುದೇ ಇಲ್ಲ.

* * *

# ವ್ಯಂಗ್ಯ ಚಿತ್ರ ಕಲೆ

**–ಎಂ. ವಿಶ್ವನಾಥ್**

**ಪೀಠಿಕೆ:**

ಮಾನವನ ಇತಿಹಾಸದಷ್ಟೇ ಪ್ರಾಚೀನವಾಗಿದೆ ರೇಖೆ. ರೇಖೆ ಒಂದು ಕಲ್ಪನೆ. ಚಿತ್ರಕಾರ ರೇಖೆಯ ಮೂಲಕ ವಿವಿಧ ಅಂಶಗಳನ್ನು ಚಿತ್ರಿಸಿ ನಿಜಸ್ಥಿತಿಯ ಕಲ್ಪನೆಯನ್ನು ಉಂಟುಮಾಡುತ್ತಾನೆ. ರೇಖೆಯನ್ನು ಒಂದು ಮಾಧ್ಯಮವೆಂದು ಪರಿಗಣಿಸಿದಾಗ ಅದಕ್ಕಿರುವ ಸತ್ವ, ಮಹತ್ವಗಳು ಅರಿವಾಗುತ್ತವೆ. ನೋಡುವುದಕ್ಕೆ ತುಂಬಾ ಸಾಧಾರಣವೆನಿಸುವ ಒಂದು ರೇಖೆ ನುರಿತ ಕೈಯಲ್ಲಿ ಪರಿಣಾಮಕಾರಿ ಮಾಧ್ಯಮವಾಗುತ್ತದೆ. ಮನಸ್ಸಿನ ಸಮಸ್ತ ಕಲ್ಪನೆಗಳಿಗೆ ಮೂರ್ತ ಸ್ವರೂಪ ನೀಡಬಲ್ಲ ಅಗಾಧ ಶಕ್ತಿಯುಳ್ಳ ರೇಖೆ ವಿಶ್ವದ ಚಿತ್ರಕಲೆಯ ಜೀವಸೆಲೆ.

ಚಿತ್ರಗಳು ಮನುಷ್ಯನ ಮಾನಸಿಕ ವಿಚಾರಗಳನ್ನು ಅಭಿವ್ಯಕ್ತಿಸುವ ಪುರಾತನ ಕಲಾವಿಧಾನ. ಬರವಣಿಗೆಯನ್ನು ಕಲಿಯುವುದಕ್ಕಿಂತಲೂ ಹತ್ತು ಸಹಸ್ರ ವರ್ಷಗಳಷ್ಟು ಮುಂಚೆಯೇ ಮನುಷ್ಯ ತಾನು ವಾಸಿಸುತ್ತಿದ್ದ ಗವಿಯ ಗೋಡೆಗಳ ಮೇಲೆ ಮತ್ತು ಕಲ್ಲಿನ ಮತ್ತು ಎಲುಬಿನ ಉಪಕರಣಗಳ ಮೇಲೆ ಚಿತ್ರಗಳನ್ನು ಕೆತ್ತಿದ. ೨೫,೦೦೦ ವರ್ಷಗಳಿಗಿಂತಲೂ ಹಿಂದಿನ ಅತಿ ಪ್ರಾಚೀನವಾದುದೆಂದೇ ನಂಬಲಾಗಿರುವ ಗುಹಾಚಿತ್ರಗಳು ಫ್ರಾನ್ಸ್‌ನಲ್ಲಿ ಲಭಿಸಿವೆ. ಅದಕ್ಕಿಂತಲೂ ಕೆಲವು ಸಾವಿರ ವರ್ಷಗಳಷ್ಟು ಹಿಂದಿನವೆಂದು ನಂಬಲಾಗಿರುವ ಕೆತ್ತನೆಯ ಚಿತ್ರಗಳೂ ಲಭಿಸಿವೆ. ಬರವಣಿಗೆಯ ಕಲೆ ಮೊದಲಾದದ್ದು ಕ್ರಿ.ಪೂ. ೩೫೦೦ ರಿಂದ ಈಚೆಗೆ. ಇದರ ಉಗಮವಾದದ್ದೂ ಚಿತ್ರಗಳ ಮೂಲಕವೇ. ಆದಿಮಾನವ ಚಿತ್ರಗಳಿಗೆ ಅಪಾರ ಧಾರ್ಮಿಕ ಮಹತ್ವವನ್ನು ನೀಡಿದ್ದ.

## ಚಿತ್ರರಚನೆಯಲ್ಲಿ ಒಂದು ಬಗೆ : ರೇಖಾಚಿತ್ರ

ರೇಖೆಗೆ ಅದರದೇ ಆದ ಮೂಲ ಸತ್ವವಿದೆ, ಸ್ವಂತ ವ್ಯಕ್ತಿತ್ವವಿದೆ. ಸ್ವತಂತ್ರ ಅಭಿವ್ಯಕ್ತಿಯಿದೆ. ಮಧ್ಯಯುಗದಲ್ಲಿ ಪ್ರಸಿದ್ಧ ಕಲಾವಿದರು ರೇಖಾಚಿತ್ರಗಳನ್ನು ಬಿಡಿಸಿದಷ್ಟೇ ಅಲ್ಲದೆ ಅವುಗಳ ವಿವಿಧ ಸಾಧ್ಯತೆಗಳ ಬಗ್ಗೆಯೂ ಚಿಂತಿಸಿದರು. ಹೀಗೆ ಸಾಧ್ಯತೆಗಳ ಅನ್ವೇಷಣೆಯ ಫಲವಾಗಿ ಬೆಳಕಿಗೆ ಬಂದಿದ್ದೇ ವಿಡಂಬನಾತ್ಮಕ ರೇಖಾಚಿತ್ರ ಅಥವಾ ವ್ಯಂಗ್ಯಚಿತ್ರ. ವ್ಯಂಗ್ಯಚಿತ್ರಗಳು ವಿಡಂಬನೆ, ರೇಖಾಚಿತ್ರ ಎರಡರ ವ್ಯಾಪ್ತಿಯನ್ನೂ ಮೀರಿದವು. ನೇರಚಿತ್ರಗಳು, ಎಲ್ಲರಿಗೂ ಕೂಡಲೇ ಅರ್ಥವಾಗುತ್ತವೆ. ಆದರೆ ವ್ಯಂಗ್ಯ ಚಿತ್ರಗಳು ತಮ್ಮ ರೇಖಾಚಿತ್ರದ ಚೌಕಟ್ಟಿನ ವ್ಯಾಪ್ತಿಯಿಂದ ಹೊರಬಂದು ಕೂಡಲೇ, ಕ್ಷಣಕಾಲ ಅಥವಾ ಬಹುಕಾಲ ರಂಜಿಸುತ್ತವೆ. ರೇಖಾಚಿತ್ರ ಕಣ್ಣಿಂದ ದೂರವಾದರೂ ಅದರ ಪ್ರಭಾವ ಬಹುಕಾಲ ದಾಖಲಾಗಿರುತ್ತದೆ. ವಿಶ್ವದಲ್ಲಿ ಅತ್ಯಂತ ಪ್ರಭಾವಿತ ಕಲೆಯಾಗಿರುವ ವ್ಯಂಗ್ಯಚಿತ್ರ ದೇಶ, ಭಾಷೆಗಳ ವ್ಯಾಪ್ತಿಯನ್ನು ಮೀರಿ ವೈಚಾರಿಕ ಕ್ರಾಂತಿ ಉಂಟುಮಾಡುತ್ತಿದ್ದು, ಆಯಾ ಕಾಲದ ಸಾಮಾಜಿಕ, ರಾಜಕೀಯ ಸ್ಥಿತಿಗಳನ್ನು ತಿಳಿದುಕೊಳ್ಳಲು ಒಂದು ಪ್ರಬಲ ವಿಚಾರಾತ್ಮಕ ಮಾಧ್ಯಮವಾಗಿದೆ. ನಿಪುಣ ವ್ಯಂಗ್ಯಚಿತ್ರಕಾರ ಶಬ್ದವಂತಿಕೆಯನ್ನು ಮೀರಿ ತನ್ನ ಕಲಾವಂತಿಕೆ ಮೆರೆಯುತ್ತಾನೆ. ಸಮಕಾಲೀನ ಪ್ರಜ್ಞೆ, ಕ್ರಿಯಾಶೀಲ ವಿಡಂಬನೆ ಮತ್ತು ಸ್ಥಿತಪ್ರಜ್ಞತೆ ಅವನ ಅಸ್ತ್ರಗಳು.

## ಭಾರತ ಮತ್ತು ವ್ಯಂಗ್ಯ ಚಿತ್ರ

ಭಾರತಕ್ಕೆ ಇಂದಿನ ರೂಪದ ವ್ಯಂಗ್ಯಚಿತ್ರ ಬಂದಿದ್ದು ಬ್ರಿಟಿಷರ ಕಾಲದಲ್ಲಿ, ಅದೂ ಕೇವಲ ನೂರು ವರ್ಷಗಳ ಹಿಂದೆ. ಇಂಗ್ಲೆಂಡಿನಿಂದ ಈ ಕಲೆ ಭಾರತಕ್ಕೆ ಬಂತು. ಹಾಗೆ ನೋಡಿದರೆ ಇಂಗ್ಲೆಂಡಿಗೂ ಇದು ಬಂದಿದ್ದು ತುಂಬಾ ತಡವಾಗಿ. ಗದ್ಯ, ಪದ್ಯ, ನಾಟಕಗಳ ಮೂಲಕ ಸಾಮಾಜಿಕ ವಿಡಂಬನೆಯ ಅನಂತರ ಈ ಕಲೆ ಅಲ್ಲಿಗೆ ಬಂತು. ಬ್ರಿಟಿಷರ ದಾಸ್ಯತ್ವದಲ್ಲಿ ನಮಗೆ ಸಿಕ್ಕಿದ್ದು ಇಂಗ್ಲಿಷ್ ಭಾಷೆ. ಈ ಭಾಷೆಯ ವೃತ್ತಪತ್ರಿಕೆ ಮತ್ತು ಮ್ಯಾಗಜ಼ಿನ್‌ಗಳ ಮೂಲಕ ಸಿಕ್ಕಿದ್ದು ವ್ಯಂಗ್ಯ ಮತ್ತು ವ್ಯಕ್ತಿ ರೇಖಾಚಿತ್ರಕಲೆ. ಅದರಲ್ಲೂ ವಿಶೇಷವಾಗಿ ಹಾಸ್ಯಪತ್ರಿಕೆ 'ಪಂಚ್'

ಸಾಪ್ತಾಹಿಕದಿಂದ ಅದರಲ್ಲಿದ್ದ ನಗೆಗೆರೆ ಚಿತ್ರಗಳು, ವಿಶೇಷ ಅತಿಶಯದ ವ್ಯಕ್ತಿಚಿತ್ರಗಳು ಬಹುಬೇಗ ಗಮನ ಸೆಳೆದವು. ೨೦೦ ವರ್ಷ ಬ್ರಿಟಿಷರ ಹಾಸ್ಯಪ್ರಜ್ಞೆಯನ್ನು ತಣಿಸಿದ 'ಪಂಚ್' ಇಂದು ಇಲ್ಲ ಎನ್ನುವುದು ದುರಂತ. 'ಹಾಸ್ಯ ಎಂದರೆ ಪಂಚ್' ಎನ್ನುವಷ್ಟರ ಮಟ್ಟಿಗೆ ಪತ್ರಿಕೆ ಜನಪ್ರಿಯವಾಗಿತ್ತು.

ಭಾರತದ ಬೇರೆ ಬೇರೆ ಭಾಷೆಗಳಲ್ಲಿ ವ್ಯಂಗ್ಯ – ವಿಡಂಬನೆ ಬಹುಕಾಲದಿಂದ ತನ್ನದೇ ಆದ ರೀತಿಯಲ್ಲಿ ಬೆಳೆದಿದ್ದರೂ ಆಯಾ ಭಾಷೆಗೆ ಮಾತ್ರ ಸೀಮಿತವಾಗಿ ಇದ್ದುದರಿಂದ ವ್ಯಂಗ್ಯ ಚಿತ್ರಕಲೆ ಒಂದು ರಾಷ್ಟ್ರೀಯ ಕಲೆಯಾಗಿ ಅರಳಿರಲಿಲ್ಲ. ಜೊತೆಗೆ ವ್ಯಂಗ್ಯ ಸಾರ್ವತ್ರಿಕ ಸಮ್ಮತಿಗೆ ಒಳಪಟ್ಟಿರಲಿಲ್ಲ. ಇದಕ್ಕೆ ಕಾರಣ ಪ್ರತಿಯೊಂದು ಭಾಷೆಗೂ ಇದ್ದ ಪ್ರತ್ಯೇಕ ಸಂಸ್ಕೃತಿ. ಇದರ ಜೊತೆಗಿದ್ದ ಇನ್ನೆರಡು ಅನಾನುಕೂಲತೆಗಳೆಂದರೆ ಪತ್ರಿಕೆಗಳು ಇಲ್ಲದಿದ್ದುದು ಮತ್ತು ಜನ ಹಾಸ್ಯದ ಕ್ರಾಂತಿ ರಾಷ್ಟ್ರಾದ್ಯಂತ ಹರಡುವುದು ಅಸಾಧ್ಯವಾಗಿತ್ತು.

ಇದರಿಂದಾಗಿ ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಹಾಸ್ಯ ಪ್ರಜ್ಞೆಯೇ ಇಲ್ಲವೆಂಬ ತಪ್ಪು ಅಭಿಪ್ರಾಯಕ್ಕೆ ಬಂದುಬಿಟ್ಟಿತು. ಜೊತೆಗೆ ವಿದ್ಯಾವಂತ ಜನ ಬ್ರಿಟಿಷರನ್ನು ಓಲೈಸುವುದೇ ತಮ್ಮ ಪರಮ ಕರ್ತವ್ಯವೆಂದು ಭಾವಿಸಿ ಅವರ ತಪ್ಪಿಗೆ ತುಪ್ಪ ಹಾಕಿದರು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ; ವ್ಯಂಗ್ಯಚಿತ್ರಕಲೆ ಭಾರತಕ್ಕೆ ದಾಪುಗಾಲಿಡುತ್ತಿದ್ದ ಅದೇ ವೇಳೆಯಲ್ಲಿ ದಕ್ಷಿಣ ಏಷ್ಯಾ, ಜಪಾನ್, ಚೀನಾ, ಕೊರಿಯಾ, ಥೈಲ್ಯಾಂಡ್ ಮುಂತಾದ ರಾಷ್ಟ್ರಗಳಲ್ಲಿ ಇದರ ಸುಳಿವೇ ಇರಲಿಲ್ಲ. ರಾಜಕೀಯ ವಿಡಂಬನೆಯ ಚಿತ್ರಗಳು ಇನ್ನೂ ಇಲ್ಲಿ ಬೆಳೆದಿಲ್ಲದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಅಮೆರಿಕಾದ ಸಿಂಡಿಕೇಟ್‌ಗಳಿಂದ ಪಡೆದ ಸುದ್ದಿ, ಸಾಹಿತ್ಯವನ್ನು ಈ ದೇಶದಲ್ಲಿ ಪ್ರಕಟಿಸಲಾಗುತ್ತಿತ್ತೇ ವಿನಾ ದೇಶೀಯ ಪ್ರತಿಭೆಗಳಿಗೆ ಅವಕಾಶವೇ ಇರಲಿಲ್ಲ.

ಮುದ್ರಣಯಂತ್ರ ದೇಶಕ್ಕೆ ಹೆಜ್ಜೆಯಿಡುತ್ತಿದ್ದಂತೆಯೇ ಪತ್ರಿಕೆಗಳ ಪ್ರಕಟಣೆ ಭಾರತದಲ್ಲಿ ಪ್ರಾರಂಭವಾಯಿತು. ಸಮಾಜ ಸುಧಾರಕರು, ರಾಜಕೀಯ ಚಿಂತಕರು, ಸ್ವಾಯತ್ತ ಆಡಳಿತ ಮತ್ತು ಸ್ವಾತಂತ್ರ್ಯ ಬಯಸುವ

ದೇಶಪ್ರೇಮಿಗಳ ಪರವಾಗಿ ನಿಂತ ಪತ್ರಿಕೆಗಳು ಜನರ ಗಮನ ಸೆಳೆಯಲು ಏನೇನು ಮಾಡಬೇಕೋ ಅವುಗಳ ಸಾಧ್ಯಾಸಾಧ್ಯತೆಗಳ ಬಗ್ಗೆ ಅನ್ವೇಷಿಸುತ್ತಾ ನಿಂತವು. ಆಗ ಬೆಳಕಿಗೆ ಬಂತು ವ್ಯಂಗ್ಯ ಚಿತ್ರಕಲೆ. ಪ್ರಾರಂಭದ ಹಂತದಲ್ಲಿ ತುಂಬಾ ಸಾಧಾರಣವೆನಿಸಿದರೂ ದೇಶದ ಅವಿದ್ಯಾವಂತ, ಅನಕ್ಷರಸ್ಥ ಜನಸ್ತೋಮ ಅರ್ಥಮಾಡಿಕೊಳ್ಳಲು ಇದಿಷ್ಟೇ ಸಾಕಾಗಿತ್ತು. ಭಾರತದಲ್ಲಿ ವ್ಯಂಗ್ಯಚಿತ್ರಕಲೆಯ ಉಗಮ ಹೀಗಾಯಿತು.

ಆದರೆ ವ್ಯಂಗ್ಯಚಿತ್ರಕಲೆ ನೇರವಾಗಿ ಅದೇ ರೂಪದಲ್ಲಿ ಪ್ರವೇಶ ಪಡೆಯಲಿಲ್ಲ. ಬಂಗಾಳದ ಆದಿವಾಸಿ ಜಾನಪದ ಕಲಾವಿದರ ವಿಡಂಬನಾತ್ಮಕ ರೇಖಾಚಿತ್ರಗಳು 'ಪಟ್ಟುವಾ' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದ್ದವು. ಸಾಮಾಜಿಕ ಅನಿಷ್ಟಗಳ ವಿಡಂಬನೆ ಮತ್ತು ನಿವಾರಣೆ ಅದರ ಗುರಿಯಾಗಿತ್ತು.

೧೯ನೇ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷ್ ಪತ್ರಿಕೆಗಳಿಂದ ಸ್ಫೂರ್ತಿ ಪಡೆದುಕೊಂಡ ಭಾರತದ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳೂ ಕಾಣಿಸಿಕೊಂಡವು. ಸಿಪಾಯ್ ಎಂಬ ಬ್ರಿಟಿಷ್ ವ್ಯಕ್ತಿ ೧೮೫೯ರಲ್ಲಿ ಸ್ಥಾಪಿಸಿದ 'ಇಂಡಿಯನ್ ಪಂಚ್' ಮಾಸಪತ್ರಿಕೆಯಲ್ಲಿ ಭಾರತದ ಮೊಟ್ಟಮೊದಲನೆಯ ವ್ಯಂಗ್ಯಚಿತ್ರ ಪ್ರಕಟವಾಯಿತು.

ಇದನ್ನು ಬಿಟ್ಟರೆ ಭಾರತೀಯ ಭಾಷೆಗಳಲ್ಲಿ ಮೊದಲ ಪತ್ರಿಕಾ ಪ್ರಕಟಣೆ ಸಿಗುವುದು ಬಂಗಾಲಿ ಭಾಷೆಯಲ್ಲಿ. 'ಬಸಂತ್' ಮತ್ತು 'ಪಂಜಾನಂ' ಮಾಸಪತ್ರಿಕೆಗಳು ಅಲ್ಲಿ ಪ್ರಕಟವಾದವು. ಪ್ರಾಣನಾಥ ದತ್ತ ಮತ್ತು ಗಿರೀಂದ್ರನಾಥ ದತ್ತ ಇದರ ಸಂಪಾದಕರಾಗಿದ್ದರು. ವ್ಯಂಗ್ಯಚಿತ್ರ ಪ್ರಕಟಣೆಗೆ ಸಂಬಂಧಿಸಿದಂತೆ 'ಪಂಚ್' ಪತ್ರಿಕೆಯ ಪ್ರಭಾವ ಪ್ರಬಲವಾಗಿತ್ತು. ಆದ್ದರಿಂದಲೇ ಲಕ್ನೋ ಪಂಚ್ ಮತ್ತು ಹಿಂದಿ ಪಂಚ್ ಪ್ರಸಿದ್ಧವಾಗಿದ್ದವು. ಅವನೀಂದ್ರನಾಥ ಠಾಕೂರರ ಅಣ್ಣ ಗಗನೀಂದ್ರನಾಥ ಠಾಕೂರ್ ಆ ಕಾಲದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರಾಗಿದ್ದರು.

ಭಾರತೀಯ ಪತ್ರಿಕೆಗಳಿಗೆ ಹಂತಹಂತವಾಗಿ ಧೈರ್ಯ ಬಂದ ಪರಿಣಾಮ, ಆಡಳಿತದಲ್ಲಾಗುತ್ತಿದ್ದ ಅನ್ಯಾಯ ಅಕ್ರಮಗಳನ್ನು

ಪ್ರಕಟಿಸಲಾರಂಭಿಸಿದರು. ಸರ್ವಾಧಿಕಾರಿ ಧೋರಣೆಯನ್ನು ಎದುರಿಸಲು ವ್ಯಂಗ್ಯಚಿತ್ರಕಾರರು ಹಲವಾರು ಸಂಕೇತಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ಭಾರತವನ್ನು ದಾರಿದ್ರ್ಯದಿಂದ ಕಂಗೆಟ್ಟಿರುವ ಭರತ ಮಾತೆಯನ್ನಾಗಿ ಚಿತ್ರಿಸಲಾಗುತ್ತಿತ್ತು. ನೈಜವ್ಯಕ್ತಿಗಳನ್ನು ಬಳಸಿಕೊಳ್ಳುವಷ್ಟು ಧೈರ್ಯ ಆಗಿನ್ನೂ ಬಂದಿರಲಿಲ್ಲ.

ಜನತೆಯ ಸಂಘಟನೆ ಬಲವಾದಂತೆ ಪತ್ರಿಕೆಗಳಿಗೂ ಧೈರ್ಯ ಬಂತು. ವ್ಯಂಗ್ಯಚಿತ್ರಗಳಲ್ಲಿ ಇನ್ನಷ್ಟು ಹುಮ್ಮಸ್ಸು ಕಾಣಿಸಿತು. ಭಾರತಮಾತೆ ಈಗ ದಾಸಿಯಾಗಿರಲಿಲ್ಲ. ಬದಲಾಗಿ ಕಿರೀಟ ಧರಿಸಿದ ಮಹಾರಾಣಿ ಯಾಗಿದ್ದಳು. ವಿಕ್ಟೋರಿಯಾ ರಾಣಿಯೂ ಸೇರಿದಂತೆ ಇಲ್ಲಿನ ವೈಸ್‌ರಾಯ್‌ಗಳಾಗಿದ್ದ ಜಾನ್ ಬುಲ್, ಲಾರ್ಡ್ ಇರ್ವಿನ್, ಲಾರ್ಡ್ ವೆಲ್ಲಿಂಗ್ಟನ್, ಲಾರ್ಡ್ ಲಿನ್‌ಲಿತ್‌ಗೋ ಮುಂತಾದವರು, ಮತ್ತವರ ದರ್ಬಾರುಗಳೆಲ್ಲ ರಾಷ್ಟ್ರದ ವ್ಯಂಗ್ಯ ಚಿತ್ರಕಾರರ ಕೈಗೆ ಸಿಕ್ಕಿ ನೂರಾರು ಚಿತ್ರಗಳು ಪರಿಣಾಮಕಾರಿಯಾಗಿ ಮೂಡಿಬಂದವು.

ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಭಾರತದ ವ್ಯಂಗ್ಯಚಿತ್ರಕಾರರು ನಿಜಕ್ಕೂ ಸುಯೋಗಿಗಳು. ನಮ್ಮ ದೇಶದಲ್ಲಿರುವಷ್ಟು ವ್ಯಕ್ತಿ ವೈವಿಧ್ಯ, ಸ್ಥಳ ವೈವಿಧ್ಯ, ಪಾತ್ರ ವೈವಿಧ್ಯ ಬಹುಶಃ ಬೇರೆಲ್ಲೂ ಸಿಕ್ಕಲಾರದು. ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ದುಡಿದ ರಾಷ್ಟ್ರನಾಯಕರು ಒಬ್ಬೊಬ್ಬರದೂ ಒಂದೊಂದು ವೈಶಿಷ್ಟ್ಯ. ವ್ಯಂಗ್ಯ ಚಿತ್ರಕಾರರಿಗೆ ಸುಗ್ಗಿ.

ಪ್ರಾರಂಭದ ದಿನಗಳಲ್ಲಿ ನಮ್ಮ ಕಲಾವಿದರು ಪೌರಾಣಿಕ ಪಾತ್ರಗಳನ್ನಾಧರಿಸಿ ಹೆಚ್ಚು ಹೆಚ್ಚು ಚಿತ್ರ ಬರೆದರು. ಉದಾಹರಣೆಗೆ ರಾವಣ, ಹನುಮಂತ, ಕೃಷ್ಣ ಮುಂತಾದ ಪಾತ್ರಗಳ ಮೂಲಕ ಚಿತ್ರಿಸಿದ ರಾಜಕೀಯ, ಸಾಮಾಜಿಕ ಚಿತ್ರಗಳು ಬಹುಬೇಗ ಜನರಿಗೆ ತಲುಪಿದವು.

ಸ್ವಾತಂತ್ರ್ಯಪೂರ್ವದಲ್ಲಿ ಆಡಳಿತಶಾಹಿಯನ್ನು ತಮ್ಮ ವ್ಯಂಗ್ಯಚಿತ್ರಗಳ ಮೂಲಕ ತರಾಟೆಗೆ ತೆಗೆದುಕೊಳ್ಳುತ್ತಿದ್ದ ಶಂಕರ್ ಪಿಳ್ಳೈ ಮುಂದೆ ಇದೇ ಸಂದೇಶವನ್ನೇ ಪ್ರಮುಖ ಉದ್ದೇಶವಾಗಿಟ್ಟುಕೊಂಡು 'ಶಂಕರ್ಸ್ ವೀಕ್ಲಿ'

ಪ್ರಾರಂಭಿಸಿ ೧೯೭೭ರವರೆಗೂ ನಡೆಸಿಕೊಂಡು ಬಂದರು. ಅವರ ರಾಜಕೀಯ ವಿಡಂಬನೆ ಇಡೀ ಭಾರತದ ಜನತೆಯ ಅನಿಸಿಕೆಯನ್ನೇ ಅಭಿವ್ಯಕ್ತಿಸುತ್ತಿತ್ತು. ಎಂಥೆಂಥಾ ಕ್ಲಿಷ್ಟ ಪರಿಸ್ಥಿತಿಯನ್ನೂ ನಿಭಾಯಿಸಿಕೊಂಡು ಬಂದ ಶಂಕರ್ ತುರ್ತುಪರಿಸ್ಥಿತಿಯ ಸಮಯದಲ್ಲಿ ಬಹುಶಃ ಅದನ್ನು ಪ್ರತಿಭಟಿಸುವುದರ ಪ್ರಬಲ ಸಂಕೇತವಾಗಿ ಪತ್ರಿಕೆಯನ್ನೇ ಮುಚ್ಚಿಬಿಟ್ಟರು. ರಾಜಕೀಯ ಘಟನೆಗಳ ಅಡಿಪಾಯದ ಮೇಲೆ ಭಾರತದಲ್ಲಿ ವ್ಯಂಗ್ಯಚಿತ್ರಕಲೆ ಅರಳಿತು. ರಾಜಕಾರಣಿ ಮತ್ತು ರಾಜಕಾರಣವನ್ನೇ ಆಧರಿಸಿದ ವ್ಯಂಗ್ಯಚಿತ್ರಗಳನ್ನು ಜನ ನಿರೀಕ್ಷಿಸುವಂತಾಯಿತು. ಇವುಗಳನ್ನು ನೋಡಿದ ಜನ ಬಿದ್ದೂ ಬಿದ್ದೂ ನಕ್ಕರು, ನಗುತ್ತಿದ್ದಾರೆ. ಅಷ್ಟರ ಮಟ್ಟಿಗೆ ರಾಜಕಾರಣದಿಂದ ಉಪಕಾರವೇ ಆಗಿದೆ.

ಹಿಂದೆಂದೂ ಕಾಣದಂಥ ಬೆಳವಣಿಗೆ ಕಳೆದ ೬೦ ವರ್ಷಗಳಲ್ಲಿ ಭಾರತವೂ ಸೇರಿದಂತೆ ಏಷ್ಯಾದ ರಾಷ್ಟ್ರಗಳಲ್ಲಾಗಿದೆ. ಪ್ರತಿಯೊಂದು ಪತ್ರಿಕೆಯೂ ಕಡ್ಡಾಯವಾಗಿ ವ್ಯಂಗ್ಯಚಿತ್ರ ಪ್ರಕಟಿಸುವುದು ಸಾಮಾನ್ಯವಾಗಿದೆ. ಬಹುತೇಕ ಎಲ್ಲ ವ್ಯಂಗ್ಯಚಿತ್ರಗಳೂ ಯಾವುದೇ ಘಟನೆಯಾದರೂ ರಾಜಕೀಯದ ಸುತ್ತ ಗಿರಕಿ ಹೊಡೆಯುತ್ತಿವೆ.

ವ್ಯಂಗ್ಯಚಿತ್ರಕಾರನ ಸಾಧನೆಗೆ ಎರಡು ವಿಷಯ ಬಹು ಮುಖ್ಯ. ಜೀವನದ ನಾನಾ ಘಟನೆ, ಪರಿಸರದಿಂದ ವ್ಯವಹಾರಗಳನ್ನು ಬಣ್ಣದ ಕನ್ನಡಕದಿಂದ ನೋಡುವಂತೆ ವ್ಯಂಗ್ಯದೃಷ್ಟಿಯಿಂದಲೇ ಕಾಣುವುದನ್ನು ಅಭ್ಯಸಿಸುವುದು ಮತ್ತು ಉದ್ದುದ್ದ ವಾಕ್ಯಗಳ ವಿವರಣೆಯ ಅವಶ್ಯಕತೆ ಇಲ್ಲದ ರೀತಿಯಲ್ಲಿ ಸಾಧ್ಯವಿದ್ದಷ್ಟೂ ಚಿತ್ರದಿಂದಲೇ ಹಾಸ್ಯ ಪ್ರಚೋದಿಸುವಂತಹ ರೇಖಾಕೌಶಲವನ್ನು ಸಾಧಿಸುವುದು. ಒಬ್ಬ ಉನ್ನತ ಮಟ್ಟದ ವ್ಯಂಗ್ಯಚಿತ್ರಕಾರನ ಅಭ್ಯುದಯಕ್ಕೆ ಇದೇ ತಳಹದಿ ಎಂದು ಬರೆಯುತ್ತಾರೆ ಎಂ.ಟಿ.ವಿ. ಆಚಾರ್ಯ.

ವ್ಯಂಗ್ಯಚಿತ್ರಗಳು ಹೇಗೆ ರಾಜಕೀಯ ಮತ್ತು ಸಾಮಾಜಿಕ ವ್ಯಾಖ್ಯಾನಗಳೋ ಹಾಗೆಯೇ ಅವು ಶಕ್ತಿಯುತವಾದ ಬದಲಾವಣೆಯ ಆಯುಧಗಳು. ಅವು ದೃಶ್ಯವಾಗಿ ಇರುವುದರಿಂದ ಸಾಹಿತ್ಯಕ್ಕಿಂತಲೂ ವೇಗವಾಗಿ ಸಾಮಾಜಿಕ ಪ್ರಭಾವ ಬೀರುತ್ತದೆ. ಪೊಳ್ಳು ನಂಬಿಕೆಗಳನ್ನೂ

ಪರಂಪರೆಗಳನ್ನೂ ಆಷಾಢಭೂತಿ ನಟನೆಗಳನ್ನೂ ಬುಡಸಹಿತ ಅಲುಗಿಸುವ ಶಕ್ತಿ ವ್ಯಂಗ್ಯಚಿತ್ರಗಳಿಗಿದೆ. ಮಾನವನ ಆಷಾಢಭೂತಿತನವನ್ನು ಗಟ್ಟಿ ಕಾಳಿನಿಂದ ತೋರಿಸುವ ಮೂಲಕ ವ್ಯಂಗ್ಯಚಿತ್ರಕಾರ ಬಹುಮುಖ್ಯವಾದ ಕೆಲಸ ಮಾಡುತ್ತಾನೆ. ಆದರೆ, ಅವನು ಸ್ವಾತಂತ್ರ್ಯದ ಪರಿಸರದಲ್ಲಿ ಮಾತ್ರ ಅರ್ಥವುಳ್ಳ ಕೆಲಸ ಮಾಡಬಲ್ಲ. ನಿರಂಕುಶ ಅಧಿಕಾರಕ್ಕೆ ಅವನ ಕಲೆ ವೈರಿ; ನಿರಂಕುಶತೆ ಅವರಿಗೆ ವೈರಿ. ಇದು ಬಹುಮುಖ್ಯವಾದ ಸಂಗತಿ ಎಂದು ಹೇಳುತ್ತಾರೆ ಪಾ.ವೆಂ. ಆಚಾರ್ಯ.

ವ್ಯಂಗ್ಯಚಿತ್ರಕಾರನು ಧೀಮಂತನಾಗಿರಬೇಕು ಹೇಗೋ ಹಾಗೆ ಧೈರ್ಯವಂತನೂ ಆಗಿರಬೇಕು. ಅಧಿಕಾರದಲ್ಲಿ ಮೆರೆಯುವ ರಾಜಕಾರಣಿಗಳಿಗೆ, ಜನಾಭಿಪ್ರಾಯ ನಿಯಂತ್ರಿಸುವ ನಾಯಕರಿಗೆ, ಸರಕಾರಿ ಅಧಿಕಾರಿಗಳಿಗೆ ಧರ್ಮಾಧಿಕಾರಿಗಳಿಗೆ ಮಣಿಯದೆ ತನಗೆ ಸರಿ ಕಂಡದ್ದನ್ನು ಚಿತ್ರಗಳಲ್ಲಿ ರೂಪಿಸುವ ಕೆಚ್ಚೆದೆ ಕಲಾಕಾರನಿಗೆ ಅತ್ಯವಶ್ಯ.

ವ್ಯಕ್ತಿಗಳು ಬೇರೆ ಬೇರೆಯಾಗಿ ವ್ಯಂಗ್ಯಚಿತ್ರದ ಬಗ್ಗೆ ಏನೇ ಹೇಳಿದರೂ ಸಮಗ್ರವಾಗಿ ಅದರರ್ಥ ಒಂದೇ : ಕಿರಿದರಲಿ ಪಿರಿದರ್ಥ. ಪ್ರಪಂಚದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ತಡವಾಗಿಯಾದರೂ ಭಾರತಕ್ಕೆ ಬಂದ ಈ ಕಲೆ ದೇಶೀಯ ಭಾಷೆಗಳಲ್ಲಿ ಅರಳುವುದಕ್ಕೆ ಇನ್ನಷ್ಟು ಸಮಯ ಬೇಕಾಯಿತು. ಇಂಗ್ಲಿಷ್ ಪತ್ರಿಕೆಗಳು ಇಡೀ ದೇಶವನ್ನು ಒಟ್ಟಿಗೆ ಆವರಿಸಿದರೂ ದೇಶೀಯ ಜನ ಅವನ್ನು ಸ್ವೀಕರಿಸುವುದರಲ್ಲಿ ಭಿನ್ನ ಭಿನ್ನ ಧೋರಣೆ ತಳೆದರು. ಹೀಗಾಗಿ ಕೆಲವೇ ರಾಜ್ಯಗಳಲ್ಲಿ ವ್ಯಂಗ್ಯಚಿತ್ರಕಲೆಗೆ ಪ್ರೋತ್ಸಾಹ ಸಿಕ್ಕಿತು. ಅದರಲ್ಲಿ ಕರ್ನಾಟಕವೂ ಒಂದು. ಕರ್ನಾಟಕದಲ್ಲಿ ಯಾವುದೇ ಚಿತ್ರಕಲೆ ಅರಳುವುದಕ್ಕೆ ಬೇಕಾದ ತತ್ವ, ಸತ್ವ, ಮಹತ್ವಗಳಿವೆ.

ಆಳೆತ್ತರದ ಕಂಚಿನ ಪುತ್ಥಳಿಯಾಗಿ ನಿಲ್ಲುವ ಯೋಗ ಇದೀಗ ಆರ್.ಕೆ. ಲಕ್ಷ್ಮಣ್ ಅವರ ಶ್ರೀಸಾಮಾನ್ಯನಿಗೂ ಸಂದಾಯವಾಗಿರುವುದು ಬಹುಶಃ ಇಡೀ ವಿಶ್ವದ ವ್ಯಂಗ್ಯಚಿತ್ರಕಾರರು ಸಂಭ್ರಮಿಸಬಹುದಾದ ಆನಂದ. ಪುಣೆಯಲ್ಲಿರುವ ಪ್ರತಿಷ್ಠಿತ ಸಿಂಬೈಸಿಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನ ಮುಂದೆ ಹೆಮ್ಮೆಯಿಂದ ಈ ಪುತ್ಥಳಿಯನ್ನು

ನಿಲ್ಲಿಸಿದ್ದಾರೆ, ಅವನ ಅಭಿಮಾನಿಯಾಗಿರುವ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಬಿ. ಮಜುಂದಾರ್. ವ್ಯಂಗ್ಯಚಿತ್ರ ಬೀರಬಹುದಾದ ಪ್ರಭಾವ ಮತ್ತು ಜನಪ್ರಿಯತೆಗೆ ಇದು ಸಾಕ್ಷಿ.

*(ಮೂಲ : ಕರ್ನಾಟಕ ಕಲಾದರ್ಶನ ಭಾಗ–೧)*

* * *

# ನಾಟಕದ ರಾಜನೂ ಕೋಡಂಗಿಯೂ

–ಡಾ। ಚಂದ್ರಶೇಖರ ಕಂಬಾರ

ನೋಡು ಆ ಕೋಡಂಗಿ
ಧರಿಸಿದ ವೇಷಭೂಷಣ ಮರೆತ,
ಉರುಹೊಡೆದು ಕಪಿಚೇಷ್ಟೆಗಳ ಮರೆತ.

ಕೊನೆಗೆ ತಾನ್ಯಾರೆಂಬುದನ್ನೂ ಮರೆತು
ಯಾರೂ ಓದದ ಹಾಗೆ ಮುಖ ಗಂಟು ಹಾಕಿದ.

ಆಭಾಸಕ್ಕೆ ಅಳುಕದೆ ರಾಜನ ಹಾಗೆ
ಶ್ರೀಮದ್ ಗಾಂಭೀರ್ಯ ತಳೆದು,
ಹಿಂದೆ ಕೈಕಟ್ಟಿ ರಂಗದ ತುದಿಗೆ ಬಂದು
ಪ್ರೇಕ್ಷಕರನ್ನು ಸಿಂಹಾವಲೋಕಿಸಿದ.

ಕೋಡಂಗಿಯ ನುಡಿಗಳಿಗೇ ರಾಜನ ವೇಷ ತೊಡಿಸಿ
ಹೂಂಕಾರವನ್ನು ಅಹಂಕಾರವೆಂಬಂತೆ ಉಚ್ಚರಿಸಿದ.

ಅಕ್ಷರಕ್ಷರ ಕಚ್ಚಿ ಕಲ್ಲಿನ ಹರಳುಗಳಂತೆ
ಮುಕ್ಕಳಿಸಿ ಉಗಿದ.

ಪದಪದಕ್ಕೆ ಅಧಿಕಾರದ ಮದ ಬರಿಸಿ
ಬೇಸೂರಿನ ಬೇಸಿನಲ್ಲಿ ಮಾತಾಡಿದ.

ಪ್ರಭುಸಮ್ಮಿತಿಗೆ ಸಮ್ಮತಿಸಿದ ಮಂದಿ
ರಾಜನ ಕಂಡು ಸನ್ಮಾನಗೊಂಡರು.

ಮನಸಾರೆ ಮಣಿದು ಕುರ್ನಿಸಾತ ಮಾಡಿದರು
ವಿಂಗಿನಿಂದೀಗಷ್ಟೆ ತಲೆ ತೂರಿಸಿದ ರಾಜನ ತೋರಿ

"ಅಗೋ ಕೋಡಂಗಿಯ ನೋಡಿ ನಗಿರಿ" ಎಂದ.

ಹನ್ನೆರಡು ರಾಶಿಗಳ ಹುಂಬ ಮಂದಿ
ಹೋ ಎಂದು ನಕ್ಕರು
"ನಿಮ್ಮ ಮಹಾರಾಜ ಹೊರಟಿದ್ದೇನೆ ಬೀಳ್ಕೊಡಿರಿ" ಎಂದ
ಜನ ಗಂಭೀರವಾಗಿ ಎದ್ದು ನಿಂತರು.

ಮೌನದಿಂದ ವಿಂಗಿಗೆ ಸರಿದ.

ವಿಂಗಿನ ಬಳಿಯ ರಾಜ
ಶ್ರೀಮದ್‌ಗಾಂಭೀರ್ಯದಿಂದ ಈಚೆ ಬಂದಾಗ
ಜನ ಬಿದ್ದು ಬಿದ್ದು ನಕ್ಕರು
ಚಪ್ಪಾಳೆ ತಟ್ಟಿ ಸಿಳ್ಳೆ ಹಾಕಿದರು
ಇವನು ನಿಮ್ಮ ರಾಜನೆಂದು ನಾನೆಂದರೆ ಎಡಬಿಡಂಗಿ ಎಂದರು.
ಇದೆಲ್ಲ ನಾಟಕವೆಂದರೆ ಕೂರೋ ಕಮಂಗಿಯೆಂದು
ಹೋ ನಕ್ಕರು.

ಮೂಲ – **'ಅನ್ವೇಷಣೆ' ಸಂಚಿಕೆ – ೭೧**
ಸಂ. : ಆರ್.ಜಿ. ಹಳ್ಳಿ ನಾಗರಾಜ್

* * *

# ತರ್ಕದ ಗೋಣು ಮುರಿದು.....

**–ಎನ್.ಎಸ್. ಶಂಕರ್**

ಹಿಂದಿ ಚಿತ್ರರಂಗದ ಸಾಮ್ರಾಟರಲ್ಲೊಬ್ಬರಾಗಿದ್ದ ಮನಮೋಹನ ದೇಸಾಯಿಯವರನ್ನು ಒಮ್ಮೆ ಒಬ್ಬ ಪತ್ರಕರ್ತ ಒಂದು ಪ್ರಶ್ನೆ ಕೇಳಿದ; “ರೂಪ್ ಕಿ ರಾಣಿ... ಸಿನಿಮಾದಲ್ಲಿ ಇಂಥದೊಂದು ಸನ್ನಿವೇಶ ಹೀಗಿದೆ. ಅದಕ್ಕೆ ತರ್ಕದ ಆಧಾರವೇ ಇಲ್ಲ. ಅಲ್ಲವೇ?”

ಇದಕ್ಕೆ ದೇಸಾಯಿ ಕೊಟ್ಟ ಉತ್ತರ ಕುತೂಹಲಕರವಷ್ಟೇ ಅಲ್ಲ, ಸಿನಿಮಾಗಳ ಮಟ್ಟಿಗೆ ಅತ್ಯಂತ ಪ್ರೌಢವೂ ಆಗಿತ್ತು. “ಸ್ವತಃ ನಾನೇ ತರ್ಕಶೂನ್ಯತೆಯ ಅಧಿಪತಿ. ನಿಮಗೆ ಬಹುಶಃ ಸಿನಿಮಾ ಭಾಷೆ ಅಂದರೇನು ಅಂತ ಗೊತ್ತಿಲ್ಲ. ಅದಕ್ಕೆ ಇಂಥ ಮೂರ್ಖ ತರ್ಕಬದ್ಧ ಪ್ರಶ್ನೆ ಕೇಳುತ್ತಿದ್ದೀರಿ” ಎಂದರು ದೇಸಾಯಿ.

ವಿಶಾಲ ತೆರೆಯ ಮೇಲೆ ಅತಿರಂಜಕ ಕನಸು, ಕಲ್ಪನೆಗಳನ್ನು ಹೆಣೆದು (ವಿಶೇಷವಾಗಿ ಅಮಿತಾಭ್ ಚಿತ್ರಗಳ ಮೂಲಕ) ದೇಶಾದ್ಯಂತ ಕೋಟ್ಯಾಂತರ ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ ಮನಮೋಹನ್ ದೇಸಾಯಿಯವರ ಮಟ್ಟಿಗಂತೂ “ಕತೆಯ ಕೋಳಿಗೆ ಕಾಲಿಲ್ಲ”.

ಇಲ್ಲಿ ಮುಖ್ಯ ಸಂಗತಿಯೆಂದರೆ, ದೇಸಾಯಿಯವರೇನೋ ಮನಸ್ಸಿಗೆ ಬಂದಂತೆ ಕತೆ ಕಟ್ಟಿ ಸಿನಿಮಾ ತೆಗೆದರು ಸರಿ, ಆದರೆ ಜನ ಅವರನ್ನು ಒಪ್ಪಿಕೊಂಡಿದ್ದು ಹೇಗೆ? ಆ “ತರ್ಕಶೂನ್ಯ ವಿಲಾಸ”ವನ್ನೇ ಕೊಂಡಾಡಿ ತಮ್ಮದಾಗಿಸಿಕೊಂಡಿದ್ದು ಹೇಗೆ? ಅಂದರೆ ಈ ಪ್ರೇಕ್ಷಕರಿಗೆ ಬುದ್ಧಿಯಿಲ್ಲವೆಂದೇ? ಜನ ತರ್ಕಬದ್ಧವಾಗಿ ಯೋಚಿಸಲಾರರು ಎಂದರ್ಥವೇ?

ಇಲ್ಲಿ ಈ ವಿಚಿತ್ರವೇ ಒಂದು ಮುಖ್ಯ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಸಿನಿಮಾಗಳಲ್ಲಿ ತರ್ಕ ಎಷ್ಟರಮಟ್ಟಿಗೆ ಮಹತ್ವದ್ದು? ಸಿನಿಮಾ ಕಥೆಗಳಲ್ಲಿ ತರ್ಕದ ಆಧಾರವನ್ನು ನಿರೀಕ್ಷಿಸುವುದು ಎಷ್ಟರ ಮಟ್ಟಿಗೆ ಸರಿ?

ಸಿನಿಮಾ ನೋಡುವ ಜನರಲ್ಲೇನೂ ಈ ಗೊಂದಲವಿದ್ದಂತಿಲ್ಲ. ಯಾಕೆಂದರೆ, ಅತಾರ್ಕಿಕವಾದುದೇನಾದರೂ ಪ್ರಸ್ತಾಪವಾದರೆ ಅಥವಾ ಅಸಾಮಾನ್ಯ ಕಾಕತಾಳೀಯವನ್ನು ಕಂಡರೆ ಜನ "ಹೀಗೆಲ್ಲ ನಡೆಯಲು ಇದೇನೂ ಸಿನಿಮಾ ಅಲ್ಲ" ಎಂದುಬಿಡುತ್ತಾರೆ. ಅಂದರೆ ಸಿನಿಮಾಗಳಲ್ಲಿ ಒಂದು ಮಟ್ಟಿನ ತರ್ಕಾತೀತ ಸ್ವಚ್ಛಂದತೆಯನ್ನು ಜನ ಮಾತಿಲ್ಲದೆ ಒಪ್ಪಿಕೊಂಡುಬಿಟ್ಟದ್ದಾರೆ.

ಒಬ್ಬನೇ ಹೀರೋ ಹದಿನೈದು ಜನರನ್ನು ಹೊಡೆದುರುಳಿಸುವುದು, ನಾಯಕಿಯ ಮೇಲೆ ಅತ್ಯಾಚಾರ ನಡೆಯುವ ಸಂದರ್ಭದಲ್ಲಿ ಎಲ್ಲೋ ಇದ್ದ ಹೀರೋ ಕರಾರುವಾಕ್ ಪ್ರತ್ಯಕ್ಷವಾಗಿ ಆಕೆಯನ್ನು ಪಾರು ಮಾಡುವುದು – ಇವಕ್ಕೆಲ್ಲ ತಾನೇತಾನಾಗಿ ಮಾಫಿ ಇದೆ. ಹಾಗೆ ನೋಡಿದರೆ ಹಾಡು – ಭಾರತೀಯ ಬೆಳ್ಳಿತೆರೆಯ ತರ್ಕಾತೀತ ವೈಭವದ ಶೃಂಗಬಿಂದು. ತಮ್ಮ ನಿತ್ಯಜೀವನ ಆಯಕಟ್ಟಿನ ಗಳಿಗೆಗಳಲ್ಲಿ ಜೀವಮಾನವಿಡೀ ಒಂದು ಹಾಡನ್ನೂ ಹಾಡದ ಕೋಟ್ಯಂತರ ಜನ, ನಾಯಕ ನಾಯಕಿ ಒಂದೇ ಹಾಡಿನಲ್ಲಿ ನೂರು ಸಲ ಬಟ್ಟೆ ಬದಲಾಯಿಸಿ ಕುಣಿಯುವುದನ್ನು ಹರ್ಷದಿಂದ ಸ್ವೀಕರಿಸುತ್ತಾರೆ....

ಇಲ್ಲಿ ಚಿತ್ರಗಳು ಹೇಗೆ (ಕೊನೇ ಪಕ್ಷ ಮೇಲ್ನೋಟಕ್ಕಾದರೂ) ತರ್ಕಶೂನ್ಯವಾಗಿವೆಯೋ, ಹಾಗೇ ಆ ಬಗ್ಗೆ ಪ್ರೇಕ್ಷಕರೂ ವಿಚಾರಶೂನ್ಯ ರಾಗಿದ್ದಾರೆ. ಅಂದರೆ ಸಿನಿಮಾಗಳನ್ನು ಯಾವ ಪ್ರಶ್ನೆಯೂ ಇಲ್ಲದೆ ಒಪ್ಪಿಕೊಳ್ಳುತ್ತಾರೆ.

ಆದರೆ ಈ ವಿಷಯದಲ್ಲಿ ಪ್ರೇಕ್ಷಕರಲ್ಲಿ ಕಾಣದ ಗೊಂದಲ ನಮ್ಮ ವಿಮರ್ಶಕರು ಮತ್ತು ಅವರಿಗಿಂತ ಹೆಚ್ಚಾಗಿ ಕಲಾತ್ಮಕ ಚಿತ್ರಗಳೆಂಬ ಹೆಸರಲ್ಲಿ ತಲೆತಿರುಕ ಸಿನಿಮಾಗಳನ್ನು ತೆಗೆಯುವ "ಬುದ್ಧಿಜೀವಿ" ನಿರ್ದೇಶಕರಲ್ಲಿದೆ.

ಈ ಹೇಳಿಕೆ ನಿಜಕ್ಕೂ ಉತ್ತಮ ಚಿತ್ರ ನಿರ್ಮಿಸುವ ಪ್ರಾಮಾಣಿಕ ನಿರ್ದೇಶಕರನ್ನು ಕುರಿತದ್ದಲ್ಲ ಎಂದು ಇಲ್ಲೇ ಸ್ಪಷ್ಟಪಡಿಸಿಬಿಡುವುದು ಒಳ್ಳೆಯದು. ಯಾಕೆಂದರೆ ಭಾರತದ ಶ್ರೇಷ್ಠ ದಿಗ್ದರ್ಶಕರಲ್ಲೊಬ್ಬರಾದ

ಸತ್ಯಜಿತ್ ರೇ ಅಪ್ಪಟ ಮಸಲಾ ಚಿತ್ರ 'ಶೋಲೆ'ಯನ್ನು ನೋಡಿ ಮೆಚ್ಚಿದ್ದರು. ಅಷ್ಟೇ ಅಲ್ಲ, ಸ್ವತಃ ಗಂಭೀರ ಚಿತ್ರಗಳ ಜೊತೆಗೆ ಮಕ್ಕಳ ಚಿತ್ರಗಳು ಹಾಗೂ ಪತ್ತೇದಾರಿ ಸಿನಿಮಾಗಳನ್ನೂ ತೆಗೆದು ಅವನ್ನು "ಬಿಡುವಿನ ಚಿತ್ರಗಳು" ಎಂದು ಹೆಸರಿಸಿದ್ದರು. ವ್ಯಾಪಾರಿ ಚಿತ್ರಗಳ ವಿರುದ್ಧ ಬೇರೆ ಇನ್ನೇನೇ ವಾದಗಳನ್ನು ಹೂಡಬಹುದು. ಆದರೆ ತರ್ಕದ ಬೆನ್ನು ಹತ್ತಿ ನಮ್ಮ ಬುದ್ಧಿಜೀವಿಗಳು ವ್ಯಾಪಾರಿ ಚಿತ್ರಗಳನ್ನು ಹೀಗಳೆಯುವ ಪರಿಯನ್ನು ಮಾತ್ರ ಸಮರ್ಥಿಸಲು ಸಾಧ್ಯವಿಲ್ಲ. ಇದೇ ಈ ಬರಹದ ಮುಖ್ಯ ಪ್ರತಿಪಾದನೆ.

ಯಾಕೆಂದರೆ ಶುದ್ಧ ತರ್ಕವೊಂದೇ, ಎಂದೂ ಯಾವುದೇ ಕಲೆಯ ಜೀವಾಳವಾದದ್ದಿಲ್ಲ. "ಸಪ್ತಸಮುದ್ರದಾಚೆ ಏಳುಕೋಟೆಯೊಳಗೆ ಪಂಜರದಲ್ಲಿ ಬಂದಿಯಾದ ರಾಕ್ಷಸನ ಜೀವ" ದ ಕಥೆಯನ್ನು ಬೆರಗಿನಿಂದ ಕೇಳಿ ಸ್ವೀಕರಿಸುವ ಸಂಸ್ಕೃತಿ ನಮ್ಮದು. ಚರಿತ್ರೆಯೂ ಪುರಾಣದ ವೇಷ ತಳೆದು ದಾಖಲಾಗುವ ಪರಂಪರೆ ನಮ್ಮದು.

ಅಷ್ಟೇಕೆ, ಜಾಗತಿಕ ಸಾಹಿತ್ಯದಲ್ಲೂ ತರ್ಕಾತೀತ ವಸ್ತುವಿನ್ಯಾಸದ ಗಣ್ಯಕೃತಿಗಳು ಪಡೆದಿರುವ ಮನ್ನಣೆ ನಮ್ಮ ಕಣ್ಣ ಮುಂದಿದೆ. ಅಂಥ ಕಡೆಗೆಲ್ಲ ತರ್ಕದ ಇಂಚುಪಟ್ಟಿ ಹಿಡಿದು ಹೊರಟು ನೋಬೆಲ್ ಪ್ರಶಸ್ತಿ ವಿಜೇತ ಸಾಹಿತಿ ಮಾರ್ಕ್ವೆಸ್‌ನ 'ಏಕಾಂತದ ನೂರು ವರ್ಷ' ಕೃತಿಯನ್ನು ಕಸದ ಬುಟ್ಟಿಗೆಸೆಯಬೇಕಾಗುತ್ತದೆ.

ತರ್ಕಾತೀತವಾದ ಜೀವನವನ್ನು ಹಾಗೆ ಹಾಗೇ ಹಿಡಿದಿಡಲು, ಕಲೆ ಯಾವಾಗಲೂ ತರ್ಕದ ಆಚೆ ಕೈ ಚಾಚಬೇಕಾಗುತ್ತದೆ. ಇದು ತರ್ಕವನ್ನು ಅಥವಾ 'ಕಾಮನ್‌ಸೆನ್ಸ್' ತಿಳಿವಳಿಕೆಯನ್ನು ತಳ್ಳಿಹಾಕುವುದಲ್ಲ. ಆದರೆ ತರ್ಕವೂ ಮೀರಿದ ನಿಗೂಢಗಳನ್ನು ಅರ್ಥ ಮಾಡಿಕೊಳ್ಳುವ ಅನಿವಾರ್ಯ ಕ್ರಮ. ಇದು ಸಾಹಿತ್ಯಕ್ಕೆ ಹೇಗೆ ನಿಜವೋ, ಚಿತ್ರಕಲೆಗೆ ಹೇಗೆ ನಿಜವೋ – ಸಿನಿಮಾಗೂ ಅಷ್ಟೇ ಮಟ್ಟಿಗೆ ನಿಜ. ಅದಕ್ಕೇ ತರ್ಕಬದ್ಧ ಮನಸ್ಸಿಗೆ ಅಸಂಗತ ಅನಿಸುವ ವಿಪರೀತಗಳನ್ನೂ ಜನ ಸಿನಿಮಾದಲ್ಲಿ ಒಪ್ಪಿಕೊಳ್ಳಲು ಸಾಧ್ಯವಾಗಿದೆ.

ಆದರೆ ಈ ತರ್ಕಶೂನ್ಯತೆಗೂ ಒಂದು ಆಧಾರವಿದೆ ! ಅದು ಜನಸಾಮಾನ್ಯರ ಅನುಭವ. ಈ ಅನುಭವ "ಕೇವಲ ತರ್ಕಬದ್ಧತೆ"ಯನ್ನು ನಿರಾಕರಿಸುವ ಹಾಗೆಯೇ ಮತಿಹೀನ ತರ್ಕಶೂನ್ಯತೆಯನ್ನೂ ಒದ್ದೋಡಿಸುತ್ತದೆ. ಇಲ್ಲದಿದ್ದರೆ ತಲೆಕೆಟ್ಟ ಬುದ್ಧಿಜೀವಿ ಸಿನಿಮಾದಂತೆಯೇ, ತಲೆ ಕೆಟ್ಟ ವಿಕೃತ ವ್ಯಾಪಾರಿ ಸಿನಿಮಾಗಳು ಸೋಲುವ ಪ್ರಮೇಯವೇ ಇರಲಿಲ್ಲ. ಅಂದರೆ ಮೇಲು ಮೇಲೆ ತರ್ಕರಹಿತವಾಗಿ ಕಾಣುವ ಘಟನೆಗಳು, ತಮ್ಮ ಮೂಲದಲ್ಲಿ ಯಾವ ಸಂಗತಿ ಹೇಳುತ್ತಿವೆ ಎಂಬುದನ್ನು ಪ್ರೇಕ್ಷಕ ಸದಾ ಗ್ರಹಿಸುತ್ತಾನೆ. ನಾಯಕ ಏಕಾಂಗಿಯಾದರೂ ನಡೆಸುವ ಅತಿಮಾನುಷವಾದ ಹೊಡೆದಾಟ, ಹೋರಾಟಗಳಲ್ಲಿ ಪ್ರೇಕ್ಷಕ ಒಳಿತು – ಕೆಡುಕಿನ ಸಮರವನ್ನು ಕಾಣಲು ಸಾಧ್ಯವಾದರೆ ಮಾತ್ರ ಆ "ಸೂತ್ರ"ವನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲದಿದ್ದರೆ ಇಲ್ಲ. ಜನ ತೆರೆಯ ಮೇಲೆ ಕಾಣುವ ಹಾಗೆ ಡ್ಯುಯೆಟ್‌ಗಳನ್ನು ಹಾಡದಿರಬಹುದು. ಆದರೆ ಹತ್ತು ಜನ ಒಂದಾಗಿ ಭಾರ ಎತ್ತುವ ಅಥವಾ ಏನನ್ನಾದರೂ ತಳ್ಳುವ ಸಂದರ್ಭದಲ್ಲಿ ಹೊಮ್ಮುವ ಲಯಬದ್ಧ 'ಚಾಮುಂಡಮ್ಮ, ಐಸ್ಸಾ'ದ ಸೋಲಿನಲ್ಲಿ ಹಾಡು, ಸಂಗೀತವಿದೆ. ಅದಕ್ಕೇ ನಾಯಕ ನಾಯಕಿಯರು ಹಾಡಿನ ಮಾಧುರ್ಯವನ್ನು ಪ್ರೇಕ್ಷಕ ಅವರ ನಲಿವಿನ ರೂಪಕವಾಗಿ ಗ್ರಹಿಸುತ್ತಾನೆ.

ಬಹುತೇಕ ಅನಕ್ಷರಸ್ಥರೇ ತುಂಬಿರುವ ನಮ್ಮ ನಾಡಿನಲ್ಲಿ, ಈ ಕಾರಣಕ್ಕೇ ಸಿನಿಮಾ ದಂತಕತೆಯ ರೂಪದಲ್ಲಿ ಬರುವ ಆಧುನಿಕ ಜಾನಪದವಾಗಿದೆ ಎಂಬುದನ್ನು ಹಿಂದೊಮ್ಮೆ ಇದೇ ಅಂಕಣದಲ್ಲಿ ಕಾಣಿಸಿದ್ದೇವೆ.

ಆದರೆ, ದುಡ್ಡು ದೋಚುವುದೇ ಏಕೈಕ ಲಾಲಸೆಯಾದಾಗ, ಈ ತರ್ಕಶೂನ್ಯತೆ ತನ್ನ "ವಾಸ್ತವಾತೀತ ವಿಲಾಸ"ದ ಮಟ್ಟದಿಂದ ಕುಸಿದು "ಸೂತ್ರ"ದ ಚರಂಡಿಗೆ ಬೀಳುತ್ತದೆ. ನಮ್ಮ ವ್ಯಾಪಾರಿ ಸಿನಿಮಾಗಳಲ್ಲಿ ಆಗಿರುವುದಾದರೂ ಈ ವಿಕೃತಿಯೇ. ಅದಕ್ಕೇ ಇಲ್ಲಿನ ತರ್ಕಶೂನ್ಯತೆ ಕೇವಲ ಮತಿಹೀನತೆಯಾಗಿ ತನ್ನ ವ್ಯಾಪಾರಿ ಉದ್ದೇಶದಲ್ಲೂ ಸೋಲುವುದನ್ನು ಕಾಣುತ್ತಿದ್ದೇವೆ. ಚಿತ್ರಮಂದಿರದ ಕತ್ತಲಿನ ವಿಶಾಲ

ಏಕಾಂತದಲ್ಲಿ ಪ್ರೇಕ್ಷಕನ ಪ್ರಜ್ಞೆಯಷ್ಟೇ ಅಲ್ಲ, ಅವನ ಸುಪ್ತಪ್ರಜ್ಞೆಯೊಂದಿಗೆ ನೇರ ವ್ಯವಹರಿಸುತ್ತಿದ್ದ ತರ್ಕಾತೀತ ಗ್ರಹಿಕೆ ನಾಶವಾಗುತ್ತಿರುವುದನ್ನು ಕಾಣುತ್ತಿದ್ದೇವೆ.

ತರ್ಕವೋ, ತರ್ಕರಹಿತವೋ, ಅಂತೂ ಮುಖ್ಯವಾದದ್ದು ಒಂದು ಕಥೆಯನ್ನು ಜನರ ಅನುಭವಕ್ಕೆ ಜೋಡಿಸಿ ನಂಬಿಸುತ್ತಲೇ ಅವರನ್ನು ರಂಜಿಸುವುದು ಹೇಗೆ ಎಂಬುದೇ ಹೊರತು ಇನ್ನೇನೂ ಅಲ್ಲ. ಇದನ್ನು ಸಾಧಿಸದ ಇನ್ಯಾವುದೇ ಸಿನಿಮಾ – ಜನರ ನಂಬಿಕೆಗಳ ಅಪಮಾನ ಮಾತ್ರವಾಗುತ್ತದೆ. ಅಂಥ ಸಿನಿಮಾ ನೆಚ್ಚಿದ ನಿರ್ದೇಶಕರಿಗೆ ಸಿನಿಮಾ ಭಾಷೆಯಷ್ಟೇ ಅಲ್ಲ ಯಾವ ಭಾಷೆಯೂ ಗೊತ್ತಿರುವುದಿಲ್ಲ.

* * *

ಓದು ಪಠ್ಯ

# ನಾಟಕ–ಹಾಗಂದರೇನು ?

**–ಕೆ.ವಿ. ಸುಬ್ಬಣ್ಣ**

ನಾಟಕ : ಈ ಪದವನ್ನು ನಾವು ಇವತ್ತು ಯಾವ ಅರ್ಥದಲ್ಲಿ ಉಪಯೋಗಿಸುತ್ತೇವೆ? ಅದಕ್ಕೆ ಬೇರೆ ಬೇರೆಯಾದ ಎರಡು ಅರ್ಥಗಳಿವೆ, ಅಲ್ಲವೇ?

ಒಂದು ಅರ್ಥ– ಬರೆದಿಟ್ಟ ಸಾಹಿತ್ಯಕೃತಿ ಎನ್ನುವುದು. ಕಾದಂಬರಿ ಸಣ್ಣಕಥೆ ಭಾವಗೀತ ಮುಂತಾದ ಒಂದೊಂದೂ ಹೇಗೆ ಬಂಧದಲ್ಲಿ ಬೇರೆ ಬೇರೆಯಾಗಿದ್ದು ಸಾಹಿತ್ಯದ ಒಂದೊಂದು ಪ್ರಕಾರ ಎನ್ನಿಸಿಕೊಳ್ಳುತ್ತದೆಯೋ ಹಾಗೆ. 'ನಾಟಕ'ವೂ ಸಾಹಿತ್ಯದ ಒಂದು ಪ್ರಕಾರ ಅಥವಾ ಇನ್ನೂ ಸಾಧಾರಣವಾಗಿಸಿ ಹೇಳುವುದಾದರೆ, ನಾಟಕ ಎಂಬ ಒಂದೇ ಪದವನ್ನು ನಾವು ಭಾಷಾಕೃತಿ ರಂಗನಿರ್ಮಿತಿ – ಈ ಎರಡಕ್ಕೂ ಬಳಸುತ್ತೇವೆ. ಈ ಒಂದೇ ಪದಕ್ಕೆ, ಸಂದರ್ಭಕ್ಕೆ ತಕ್ಕಂತೆ, ಒಮ್ಮೆ ಭಾಷಾಕೃತಿ ಎಂದೂ ಇನ್ನೊಮ್ಮೆ ರಂಗನಿರ್ಮಿತಿ ಎಂದೂ ಅರ್ಥ ಮಾಡಬೇಕು.

ಲಿಖಿತ ನಾಟಕವನ್ನು ಓದಿ ಇದು ಚೆನ್ನಾಗಿದೆ ಎಂದರೆ ಏನು ಅರ್ಥ? ಅದು ಸಾಹಿತ್ಯವಾಗಿ ಚೆನ್ನಾಗಿದೆ ಎಂದೇ ಅಥವಾ ರಂಗದ ಮೇಲೆ ಸೊಗಸಾಗಿ ಪ್ರದರ್ಶಿಸಲು ಬೇಕಾದ ಅವಕಾಶಗಳೆಲ್ಲ ಅದರಲ್ಲಿವೆ ಎಂದೇ ಅಥವಾ ಈ ಎರಡೂ ಗುಣ ಅದರಲ್ಲಿವೆ ಎಂದೇ? ಚೆನ್ನಾಗಿಲ್ಲ ಎಂದರೆ ಏನು ಅರ್ಥ? ಸಾಹಿತ್ಯ ಗುಣವಿದ್ದರೂ ರಂಗಯೋಗ್ಯವಾಗಿಲ್ಲ ಎಂದೇ, ರಂಗಯೋಗ್ಯವಿದ್ದರೂ ಸಾಹಿತ್ಯಗುಣ ಇಲ್ಲವೆಂದೇ ಅಥವಾ ಎರಡೂ ಇಲ್ಲವೆಂದೇ? ಒಂದು ನಾಟಕವನ್ನೋದಿ ಒಬ್ಬ 'ಈ ನಾಟಕ ಸಾಹಿತ್ಯಗುಣವಿದ್ದೂ ರಂಗಯೋಗ್ಯವಲ್ಲದ್ದರಿಂದ ಉತ್ತಮವಲ್ಲ' ಎನ್ನಬಹುದು.

ಈ ವಿಶ್ಲೇಷಣೆಯ ಬೆಳಕಲ್ಲಿ 'ನಾಟಕ' ಅನ್ನುವ ಪದಕ್ಕೆ ಹೊಳೆಯಬಹುದಾದ ಅರ್ಥಗಳನ್ನು ಪಟ್ಟಿಮಾಡಿ ನೋಡಬಹುದು:

## ಒಂದನೇ ಮುಖ್ಯಾರ್ಥ: ಒಂದು ವಿಶಿಷ್ಟ ಭಾಷಾಕೃತಿ

### ಇದರಲ್ಲಿನ ವಿವಿಧಾರ್ಥಗಳು:

೧. ಸಂಭಾಷಣೆಗಳಿಂದಲೇ ಕಟ್ಟಿದ ವಿಶಿಷ್ಟಬಂಧವುಳ್ಳ ಸಾಹಿತ್ಯ ಕೃತಿ. ಇದಕ್ಕೆ ರಂಗದ ಹಂಗಿಲ್ಲ.

೨. ರಂಗಯೋಗ್ಯವಾದ ಸಾಹಿತ್ಯಕೃತಿ. ಇದು ಸಾಹಿತ್ಯವೂ ಹೌದು, ರಂಗಯೋಗ್ಯವೂ ಹೌದು.

೩. ಕೇವಲ ರಂಗಕ್ಕೆ ಮೀಸಲಾದ ರಂಗಲೇಖ (ಸಿನೆರಿಯೊ). ಇದು ಸಾಹಿತ್ಯ ಗುಣವಿಲ್ಲದ್ದು, ರಂಗನಿರ್ಮಿತಿಯ ಬಗ್ಗೆ ಸೂಚನೆಗಳನ್ನು ಭಾಷೆಯಲ್ಲಿ ದಾಖಲಿಸಿಟ್ಟದ್ದು.

೪. ಸಾಹಿತ್ಯಗುಣ ಅಥವಾ ರಂಗಕ್ಷಮತೆ – ಈ ಎರಡರಲ್ಲಿ ಯಾವುದಾದರೂ ಒಂದು ನಿಶ್ಚಿತವಾಗಿ ಇರುವಂಥದ್ದು. ಇಂಥದ್ದೇ ಇರಬೇಕೆನ್ನುವ ನಿಯಮಿತವಿಲ್ಲ.

## ಎರಡನೇ ಮುಖ್ಯಾರ್ಥ: ರಂಗನಿರ್ಮಿತಿ

### ಇದರಲ್ಲಿನ ವಿವಿಧಾರ್ಥಗಳು:

೧. ಶುದ್ಧ ರಂಗನಿರ್ಮಿತ, ಇದು ಭಾಷಾಕೃತಿಯನ್ನು ಅವಲಂಬಿಸದೆ ಸ್ವತಂತ್ರವಿರುವಂಥದ್ದು.

೨. ಸಾಹಿತ್ಯ ಕೃತಿಯನ್ನವಲಂಬಿಸಿದ ರಂಗನಿರ್ಮಿತಿ. ಇದರಲ್ಲಿ ಸಾಹಿತ್ಯಗುಣವೂ ಉಂಟು, ರಂಗಕಲೆಯೂ ಉಂಟು.

೩. ಸಾಹಿತ್ಯ ಕೃತಿಯ ದೃಶ್ಯ ಯೋಜನೆ; ಒಂದು ಸಾಹಿತ್ಯ ಕೃತಿಯನ್ನು ದೃಶ್ಯಕ್ಕೆ ಅಳವಡಿಸಿದ್ದು. ಇಲ್ಲಿ ಕಲಾತ್ಮಕವಾದ ನಿರ್ಮಿತಿ ಇಲ್ಲ.

ಹೀಗೆ ಬಿಡಿಸಿಟ್ಟರೆ ಎಂಟು ಪ್ರತ್ಯೇಕ ಅರ್ಥಗಳು (ಅಥವಾ ಇವುಗಳ ಅನೇಕ ಸಂಕರಾರ್ಥಗಳು) ಈ ಪದದಿಂದ ಹೊರಡಲು ಸಾಧ್ಯ ಎನಿಸುತ್ತದೆ.

ಹಿಂದೆ ಕನ್ನಡದಲ್ಲಿ – ಅಂದರೆ 'ಮಿತ್ರವಿಂದಾ ಗೋವಿಂದ'ದ ಕಾಲದ ತನಕ, ಅಥವಾ ಅದಕ್ಕೂ ಮುಂದೆ ಸುಮಸುಮಾರು ಈ ಶತಮಾನದ ತನಕವೂ–ಇಂಥ ಗೊಂದಲಕ್ಕೆ ಪ್ರಾಯಃ ಅವಕಾಶವೇ ಇರಲಿಲ್ಲವೆನ್ನುವುದು ಅತ್ಯಂತ ಕುತೂಹಲ ಹುಟ್ಟಿಸುವ ಸಂಗತಿಯಾಗಿದೆ. (ಇದು ಕನ್ನಡದ ಜತೆಗೆ ಇತರ ದ್ರಾವಿಡ ಭಾಷೆಗಳಿಗೂ ಅನ್ವಯಿಸುತ್ತದೆ.) ನಮ್ಮಲ್ಲಿ ಹಿಂದೆ ನಾಟಕ ಎನ್ನುವ ಪ್ರಕಾರದ ಸಾಹಿತ್ಯ ಕೃತಿಯೇ ಇರಲಿಲ್ಲ. ಕನ್ನಡ ನವೋದಯ ಕಾಲದ ದೊಡ್ಡ ದೊಡ್ಡ ಸಂಶೋಧಕರು ಕೂಡ ಇದರ ನಿಜವನ್ನು ಅರಿಯದೆ, ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯದಲ್ಲಿ ನಾಟಕ ಯಾಕೆ ಇಲ್ಲ ಎನ್ನುವ ಬಗ್ಗೆ ಚಡಪಡಿಸಿದರು. ನಾಟಕ ಪ್ರಯೋಗ, ನಟರು, ನಾಟಕಶಾಲೆ – ಮುಂತಾದ ವಿಷಯಗಳ ಬಗ್ಗೆ ಕಾವ್ಯದಲ್ಲೂ ಶಾಸನಗಳಲ್ಲೂ ಉಲ್ಲೇಖ ಸಿಕ್ಕುತ್ತದೆ, ಆದರೆ ಲಿಖಿತ ನಾಟಕ ಮಾತ್ರ ಸಿಕ್ಕುವುದಿಲ್ಲ. ಇದಕ್ಕೆ, ತಮಗೇ ತೃಪ್ತಿ ಕೊಡದ ಏನೇನೋ ಕಾರಣಗಳನ್ನು ಕಪೋಲಕಲ್ಪಿತ ಮಾಡಿಕೊಟ್ಟರು. ಹಿಂದಿನ ಕೃತಿಗಳಲ್ಲಿ ಹೆಸರು ಮಾತ್ರ ಸಿಕ್ಕಿ ಕೃತಿ ಸಿಕ್ಕದೆ ಹೋಗಿರುವಂಥವುಗಳಲ್ಲಿ, ಹೆಸರನ್ನು ನೋಡಿಯೇ ಇಂಥಿಂಥವು ನಾಟಕ ಇರಬೇಕು ಎಂದು ಊಹೆಗಳನ್ನು ಊದಿಬಿಟ್ಟರು. ರನ್ನ ತನ್ನ 'ಗದಾಯುದ್ಧ'ವನ್ನು ನಾಟಕವಾಗಿಯೇ ಕಲ್ಪಿಸಿಕೊಂಡಿದ್ದ ಎಂದು ತೀರ್ಪೂ ಕೊಟ್ಟರು. ಹೀಗೆನ್ನಲು ಮುಖ್ಯ ಕಾರಣಗಳು: "ಪ್ರಾಚೀನ ಕನ್ನಡದಲ್ಲಿ ಎಲ್ಲ ಪ್ರಕಾರದ ಕೃತಿಗಳೂ ಸಿಕ್ಕಿವೆ, ನಾಟಕಕೃತಿ ಮಾತ್ರ ಒಂದೂ ಸಿಕ್ಕಿಲ್ಲ. ನಾಟಕಕೃತಿ ಒಂದಿತ್ತು ಎನ್ನುವುದಕ್ಕೆ ಕೂಡ ಸಮರ್ಥನೆ ಸಿಕ್ಕಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಹಳೆಯ ಕನ್ನಡ ರಂಗಭೂಮಿಯ ಪ್ರಮುಖ ಮಾದರಿಯಾಗಿದ್ದು ಇವತ್ತಿನ ತನಕ ಉಳಿದುಕೊಂಡು ಬಂದಿರುವುದನ್ನು ನೋಡಬಹುದು. ಚಂಪೂವನ್ನು ಹೋಲುವ ಒಂದು ಚಿಕ್ಕ ಗೇಯಕೃತಿಯನ್ನು ಭಾಗವತ ಹಾಡುತ್ತ ಹೋಗುತ್ತಾನೆ. ಪ್ರಯೋಗಕ್ಕೆಂದೇ ರಚಿತವಾಗಿದ್ದರೂ ಆ ಕೃತಿ ಇತರ ಕಾವ್ಯಗಳ ಹಾಗೇ ಇರುತ್ತದೆಯಲ್ಲದೆ ಅದಕ್ಕೆ ಸಂಭಾಷಣೆಗಳಿಂದಲೇ ಕಟ್ಟಿತಕ್ಕ ಬಂಧವಿಲ್ಲ. ವಾಚಿಕದ ಗದ್ಯಭಾಗ(ಸಂಭಾಷಣ)ವನ್ನು ನಟರು ಬಾಯಿಪಾಠವಿಲ್ಲದೆ, ಸಂದರ್ಭಕ್ಕೆ ತಕ್ಕಂತೆ ತತ್‌ಕ್ಷಣದಲ್ಲೇ ಸೃಷ್ಟಿಸಿಕೊಳ್ಳುತ್ತ ಕಟ್ಟಿಕೊಳ್ಳುವ ಈ ರೂಢಿ ಕನ್ನಡದ (ಹಾಗೂ ದ್ರಾವಿಡರ) ಇತರ

ಜಾನಪದ ರಂಗ ಪ್ರಕಾರಗಳಲ್ಲೂ ಕಾಣಸಿಕ್ಕುತ್ತದೆ. ಇದೇ ನಿಜವಾಗಿ ದ್ರಾವಿಡ ರಂಗಭೂಮಿಯ ಪದ್ಧತಿ.” ಹೀಗೆ, ನಾಟಕವೆಂದರೆ ರಂಗಪ್ರಯೋಗವೊಂದೇ ಆಗಿದ್ದ ಕಾರಣ, ಲಿಖಿತ ನಾಟಕಗಳೇ ಇಲ್ಲದ ಕಾರಣ,ಅಲ್ಲಿ ಲಿಖಿತ ನಾಟಕ–ಅಭಿನೀತ ನಾಟಕಗಳೆಂಬ ಗೊಂದಲವೇಳುವುದಕ್ಕೆ ಅವಕಾಶವೇ ಇರಲಿಲ್ಲ.

‘ನಾಟಕ’ ಎಂದರೆ– ಅದು ಭಾಷಾಕೃತಿಯಿರಲಿ ರಂಗನಿರ್ಮಿತಿಯಿರಲಿ – ಒಂದು ಕಲಾಕೃತಿ ಎನ್ನುವ ಅರ್ಥವಿಟ್ಟುಕೊಂಡು ನಾವು ಹೊರಡುತ್ತಿದ್ದೇವೆ, ಇದನ್ನು ನೆನಪಿಟ್ಟಿರೋಣ. ಹಿಂದೆ ನೋಡಿದ ಹಾಗೆ ‘ನಾಟಕ’ ಎಂದರೆ ನಮಗೆ ಮುಖ್ಯವಾಗಿ ಕಾಣುವುದು – ೧ ಲಿಖಿತ ನಾಟಕ, ೨ ಆಡಿ ತೋರಿಸುತ್ತಿರುವ ಆಟ.

ನಾಟಕ ಸಂಸ್ಥೆ ಕಟ್ಟಿಕೊಂಡು ಆಡಿಸುತ್ತ, ಅದಕ್ಕಾಗಿಯೇ ಬರೆದ – ಎಂದು ಭಾವಿಸುತ್ತೇವಲ್ಲ, ಆ ಷೇಕ್ಸ್‌ಪಿಯರ್‌ನನ್ನೇ ನೋಡೋಣ. ಅವನ ನಾಟಕಗಳನ್ನು, ಆಗಿಂದ ಈಗಿನ ತನಕ, ಸಾಹಿತ್ಯ ಮೀಮಾಂಸೆಯನ್ನು ಆಧರಿಸಿಯೇ ಸಾಹಿತ್ಯ ವಿಮರ್ಶೆಯ ಸೂತ್ರಗಳನ್ನು ಹಿಡಿದೇ ವಿವರ ವಿವರವಾಗಿ ವಿಮರ್ಶೆ ಮಾಡಿಲ್ಲವೆ? ಅವು ಶ್ರೇಷ್ಠ ಸಾಹಿತ್ಯ ಕೃತಿಗಳೆಂದು ಸಿದ್ಧವಾಗಿಲ್ಲವೆ? ಅವುಗಳನ್ನು ಬೇರೆ ಶ್ರೇಷ್ಠ ಕಾದಂಬರಿಗಳ ಜತೆ ಬೇರೆ ಶ್ರೇಷ್ಠ ಕಾವ್ಯಗಳ ಜತೆ ಇಟ್ಟುಕೊಂಡು ಅಭಿನೀತವಾಗಬೇಕಾದ ನಾಟಕಗಳು ಎನ್ನುವ ಕಾರಣಕ್ಕಾಗಿ ಯಾವುದೇ ರಿಯಾಯಿತಿಗಳನ್ನೂ ಕೊಡದೆ – ಬೆಲೆ ಕಟ್ಟಿದರೂ ಅವು ಶ್ರೇಷ್ಠವಾಗಿಯೇ ಉಳಿದಿಲ್ಲವೆ? ಅದೇ ಆತನ ನಾಟಕಗಳನ್ನು ಬಳಸಿಕೊಂಡ ರಂಗಕೃತಿಗಳನ್ನು ನೋಡಿ. ಸಮರ್ಥ ನಟ ನಿರ್ದೇಶಕರ ಕೈಯಲ್ಲಿ ಅವು ಶ್ರೇಷ್ಠ ಪ್ರಯೋಗಗಳಾಗಿವೆ; ಹಾಗೇ, ಶಾಲಾ ಬಾಲಕರು ಆಡಿದಾಗ ಅವು ಹಾಸ್ಯಾಸ್ಪದ ಪ್ರದರ್ಶನಗಳೂ ಆಗಿದ್ದಾವೆ. ಅಂದರೆ, ಅರ್ಥ ಹೀಗಾಗುತ್ತದೆ: ಷೇಕ್ಸ್‌ಪಿಯರ್‌ನ ಸಾಹಿತ್ಯಕೃತಿ ಹ್ಯಾಮ್ಲೆಟ್ ಬೇರೆ, ಅದರ ಒಂದೊಂದು ಪ್ರಯೋಗವೂ ಬೇರೆ ಬೇರೆ; ಇವೆಲ್ಲ ಬೇರೆ ಬೇರೆಯೇ ಕಲಾಕೃತಿಗಳು.

ಕಾಲಬದ್ಧವಾಗಿ ತತ್ಕಾಲೀನವಾದ್ದರಿಂದ ರಂಗಕಲೆ ಸಾಹಿತ್ಯಕಲೆಯ

ಹಾಗೆ ಸಂಪ್ರದಾಯವನ್ನು ಸುಲಭ ಸಂಗೋಪಿಸಿ ಇಟ್ಟುಕೊಳ್ಳಲಾರದು; ರಂಗ ವಿಮರ್ಶೆ ಕೂಡ ಆ ಕಾರಣಗಳಿಂದಲೇ ಸಾಹಿತ್ಯದಲ್ಲಿ ಬೆಳವಣಿಗೆ ಆದ ಹಾಗೆ ರಂಗಕಲೆಯಲ್ಲಿ ಬೆಳವಣಿಗೆ ಆಗಿಲ್ಲವೇನೋ ಎನಿಸುತ್ತದೆ.

ಶುದ್ಧ ರಂಗಕಲೆಯಾಗುವ ಹಂಬಲದಲ್ಲಿ ಗದ್ಯಪಠ್ಯ ಬಿಟ್ಟ 'ನಾಟಕ', ವಾಸ್ತವವಾಗಿ 'ನೃತ್ಯ'ವೇ ಆಗಿಬಿಡುವುದೂ ಸಾಧ್ಯ. ನೃತ್ಯವೂ ಆಗದೆ ಸಾಹಿತ್ಯದ ಬರೀ ದೃಶ್ಯ ನಿರೂಪಣೆಯೂ ಆಗದೆ, ನಾಟಕ ತನ್ನದೇ ಹದದಲ್ಲಿ ಅನನ್ಯವಾಗಿ ಅರಳಿಕೊಳ್ಳಬೇಕಾಗುತ್ತದೆ ಎಂಬುದನ್ನು ರಂಗಕಲಾವಿದರು ಮರೆಯಬಾರದು.

ಶ್ರೇಷ್ಠವಾದ ಒಂದು ರಂಗಕೃತಿಯನ್ನು ನೋಡಿದಾಗ, ಅದರ ಒಳಗೆ ಪ್ರತ್ಯೇಕವಾದ ಇಡಿಯಾದ ಸಾಹಿತ್ಯಕೃತಿ ಒಂದಿದೆ ಎಂದು ಕಾಣಿಸುವುದೇ ಇಲ್ಲ. ಹಾಗೆ ಒಮ್ಮೆ ಕಾಣಿಸಿತೋ, ಆ ರಂಗಕೃತಿ ಜೀವಂತವಾದ ಏಕ ಶರೀರವೆನಿಸುವುದಿಲ್ಲ.

ಒಬ್ಬ ನಿರ್ದೇಶಕ ಒಂದು ನಾಟಕವನ್ನೆತ್ತಿಕೊಂಡರೆ, ಅದು ಶೇಕ್‌ಸ್ಪಿಯರ್‌ನಂಥವನ ಮಹತ್ಕೃತಿಯೇ ಇದ್ದರೂ, ಅಲ್ಲಲ್ಲಿ ಬದಲಿಸುತ್ತಾನೆ, ಬೆಳಸಿಕೊಳ್ಳುತ್ತಾನೆ; ಸೂಚಿತ ಕ್ರಿಯೆಗಳಲ್ಲಿ ಕೂಡ ಬದಲಾವಣೆ ಮಾಡಿಕೊಳ್ಳಬಹುದು. ಈ ಎಲ್ಲ ಬದಲಾವಣೆಗಳು, ಪುನಃ ನಿರ್ದೇಶಕನಿಂದ ನಿರ್ದೇಶಕನಿಗೆ ಬೇರೆಯೆ ಆಗಿರುತ್ತವೆ. ಸಾಹಿತ್ಯ ಕೃತಿಯ ಒಂದೊಂದು ಮಾತನ್ನೂ ತೆಗೆದುಕೊಂಡು ನೋಡಿದರೆ, ಅಲ್ಲಿ ಮಾತುಗಳು ಸಂದರ್ಭವಶದಿಂದ ಮಾತಿನ ಶಕ್ತಿಯ ಸಂಪೂರ್ಣ ಉಪಯೋಗದಿಂದ – ಈ ಬರೀ ಮಾತುಗಳೇ, ತಮ್ಮ ಅಮೂರ್ತ ದಿಂದಲೇ ಒಂದು ವಿಶಿಷ್ಟ ಅನುಭವವನ್ನೂ ಆ ಅನುಭವಕ್ಕೆ ಕ್ಷೇತ್ರವಾದ ವ್ಯಕ್ತಿತ್ವವನ್ನೂ ಕ್ರಿಯೆಯನ್ನೂ ಅವೆಲ್ಲವುಗಳ ಸ್ವರಲಯಗಳನ್ನೂ ನಿರ್ಮಿಸುತ್ತವೆ. ಅದೇ ಮಾತು ರಂಗದ ಮೇಲೆ ನಟನ ಬಾಯಲ್ಲಿ ಬರುವಾಗ, ಅದರ ಸ್ವರಲಯಗಳೂ ಅದು ಸೂಚಿಸುವ ವ್ಯಕ್ತಿಕ್ರಿಯೆಗಳೂ ನಿರ್ದಿಷ್ಟವಾಗಿ ಹೋಗಿ ಅದಕ್ಕೊಂದು ಘನರೂಪ ಬಂದು ಬಿಡುತ್ತದೆ. ಅಲ್ಲಿನ ಅಮೂರ್ತ ಇಲ್ಲಿಲ್ಲ, ಹಾಗೇ ಅಲ್ಲಿನ ವ್ಯಂಜನೆಯ ವಿಶಾಲ ಸಾಧ್ಯತೆಗಳೂ ಇಲ್ಲಿಲ್ಲ – ಹಾಗಾಗಿ, ಶಬ್ದಗಳು ಅವೇ ಇದ್ದೂ ಭಾಷೆ ಬದಲಾಗಿಬಿಟ್ಟಿರುತ್ತದೆ.

ನಿರ್ದೇಶಕ ಒಂದು ಸಾಹಿತ್ಯಕೃತಿಯನ್ನು ಎತ್ತಿಕೊಂಡಮೇಲೆ ಅದನ್ನು ಛಿದ್ರ ವಿಚ್ಛಿದ್ರಗೊಳಿಸಿ ಆ ಚೂರುಗಳನ್ನು ತನ್ನ ನಿರ್ಮಾಣ ದ್ರವ್ಯವಾಗಿ ಬಳಸಿಕೊಳ್ಳುತ್ತಾನೆ, ಆ ಸಾಹಿತ್ಯ ಕೃತಿ ಆತನಿಗೆ ಒಂದು ಅಭಿನ್ನ ಕಲಾಕೃತಿಯಾಗಿ ಉಳಿಯುವುದಿಲ್ಲ. ತನ್ನ ಹೊಸ ನಿರ್ಮಾಣಕ್ಕೆ ನೆರವಾಗಬಹುದಾದ ದ್ರವ್ಯಗರ್ಭವಾಗುತ್ತದೆ. 'ನಾಟಕಕಾರ' ಎಂದು ಕರೆದುಕೊಳ್ಳುವವನಿಗೆ ಈ ಅಂಶ ಅಪ್ರಿಯವೆನಿಸಬಹುದು. ನಿಜವಾಗಿ ನಾಟಕಕಾರ ಸೃಷ್ಟಿಸಿರುವುದು ಕಲಾಕೃತಿಯಾಗಿದ್ದರೆ ಅದು ಸಾಹಿತ್ಯಕೃತಿ. ಪ್ರಯೋಗಿಸುವಾತ ಅದನ್ನು ಕೆಡಿಸಿದ ಅಥವಾ ಒಳ್ಳೆಯದು ಮಾಡಿದ ಎಂದು ತಾಳೆ ನೋಡುವ ಅಧಿಕಾರ ನಾಟಕಕಾರನಿಗೆ ಬರಲಾರದು. ಅವನ ರಂಗಕೃತಿ ಕಲಾಪೂರ್ಣವೆ ಅಲ್ಲವೆ ಎಂಬುದಷ್ಟೇ ವಿಮರ್ಶೆಗೆ ಉಳಿಯುವಂಥದು.

* * *

# ಆಧುನಿಕತೆ

ಆಧುನಿಕತೆಯನ್ನು ವ್ಯಾಖ್ಯಾನಿಸುವುದು ಜಟಿಲ. ಆಯಾಯ ಕಾಲಕ್ಕೆ ಹೊಸತು ಬಂದಾಗ ಆಧುನಿಕತೆ ಎನಿಸಿಕೊಳ್ಳುತ್ತದೆ. ಆದಿಮಾನವನ ಕಾಲದಲ್ಲಿ ಕಲ್ಲಿನಿಂದ ಬೆಂಕಿಯ ಸೃಷ್ಟಿಯಾದಾಗ ಅದು ಆ ಕಾಲದ ಆಧುನಿಕತೆಯ ಆವಿಷ್ಕಾರ ಎನಿಸಿತು. ಕಾಲದಿಂದ ಕಾಲಕ್ಕೆ ಜೈವಿಕ ವಿಕಾಸದ ಜೊತೆಗೆ ಬೌದ್ಧಿಕ ವಿಕಾಸವೂ ಸಂಭವಿಸುತ್ತಾ ಬಂದಿದೆ. ಮನುಷ್ಯನ ಜೀವನ ಬದಲಾಗುತ್ತಿದ್ದಂತೆ, ಅದು ಅವನ ಬದುಕು, ಮನರಂಜನೆ, ಸಾಹಿತ್ಯ, ಕಲೆ, ಕ್ರೀಡೆ, ಸಂಪರ್ಕ ಸಾಧನ ಇತ್ಯಾದಿ ಎಲ್ಲದರ ಮೇಲೂ ಪ್ರಭಾವ ಬೀರಿ ಹೊಸ ಹೊಸ ಸಂಶೋಧನೆಗಳು ನಡೆದಿವೆ. ಆಧುನಿಕತೆಗೂ ತಂತ್ರಜ್ಞಾನಕ್ಕೂ ಅವಿನಾಭಾವ ಸಂಬಂಧವಿದೆ.

ಎತ್ತಿನ ಗಾಡಿಯ ನಂತರ ಸೈಕಲ್, ಮೋಟಾರು ವಾಹನ ಬಂದಾಗ ಅದು ಸಂಪರ್ಕದ ಆಧುನಿಕ ಸಾಧನ ಎನಿಸಿತು, ಕಂದೀಲು ಹೋಗಿ ವಿದ್ಯುದ್ದೀಪದ ಬೆಳಕೂ ಬಂದಿದ್ದೂ ಹಾಗೆಯೇ. ಶಿಕ್ಷಣವೂ ಇದಕ್ಕೆ ಹೊರತಲ್ಲ. ಗುರುಕುಲ ಶಿಕ್ಷಣ ಸಂಪ್ರದಾಯದಿಂದ ನವೀನ ಶಿಕ್ಷಣ ಪದ್ಧತಿಯವರೆಗೆ ಇದನ್ನು ಗಮನಿಸಬಹುದು. ಮನುಷ್ಯ ಆಧುನಿಕತೆಯನ್ನು ಒಳಗೊಳ್ಳುತ್ತಿದ್ದಂತೆ ಪರಿಸರ ಮತ್ತು ಅವನ ಸಂಬಂಧದಲ್ಲಿ ಆಗಿರುವ ಬದಲಾವಣೆಗಳನ್ನೂ ಇಲ್ಲಿ ಗುರುತಿಸಬಹುದು.

ಆಧುನಿಕತೆಯೆಂದರೆ ಕೇವಲ ಪಾಶ್ಚಾತ್ಯರನ್ನು ಅನುಸರಿಸುವುದಲ್ಲ. ಅದು ಎಲ್ಲಾ ಸಮಾಜಗಳಲ್ಲಿಯೂ ಕಾಲದಿಂದ ಕಾಲಕ್ಕೆ ಸರ್ವ ಕ್ಷೇತ್ರ ಗಳಲ್ಲಿಯೂ ಕಂಡುಬರುವ ಬದಲಾವಣೆಯಾಗಿದೆ. ಆಧುನಿಕತೆ ಯೆಂದರೆ ಅದೊಂದು ಮನಸ್ಥಿತಿ. ಕೇವಲ ಉಡುಪು, ಆಹಾರ ಪದ್ಧತಿ, ಕೇಶವಿನ್ಯಾಸ ಮುಂತಾದ ಬಾಹ್ಯ ಬದಲಾವಣೆಗಳು ಆಧುನಿಕತೆಯಲ್ಲ. ಸಂಕುಚಿತ ಭಾವನೆಯನ್ನು ಬಿಟ್ಟು ವಿಶಾಲ ಮನೋಭಾವದಿಂದ ಬದುಕು ಮತ್ತು ಸಾಮಾಜಿಕ ವಿಕಸನವನ್ನು ಬಯಸುವುದು ಆಧುನಿಕತೆ. ಮನುಷ್ಯನ ಜೀವನಶೈಲಿ ಮತ್ತು ಯೋಚನಾಲಹರಿಯನ್ನು ಬದಲಿಸುವುದು ಆಧುನಿಕತೆ.

* * *

# ವಸಂತ

**– ಬಿ.ಎಂ.ಶ್ರೀ**

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ ಹಕ್ಕಿಗಳುಲಿಗಳೆ ಚೆಂದ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ,
ಇನಿಯರ ಬೇಟ; ಬನದಲಿ ಬೆಳದಿಂಗಳೂಟ,
ಹೊಸ ಹೊಸ ನೋಟ, ಹಕ್ಕಿಗೆ ನಲಿವಿನ ಪಾಟ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು,
ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಬಂದ ವಸಂತ–ನಮ್ಮಾ
ರಾಜ ವಸಂತ !

*(ಮೂಲ : ನ್ಯಾಷ್ ಕವಿಯ 'ಸ್ಪ್ರಿಂಗ್' ಕವನ ಇಂಗ್ಲಿಷ್ ಗೀತಗಳು)*

* * *

# ಅದ್ವಿತೀಯ ಗಣಿತಜ್ಞೆ ಹಿಪಾಟಿಯಾ (೩೭೦–೪೧೨)

**–ನೇಮಿಚಂದ್ರ**

ಮೊಟ್ಟಮೊದಲ ಪ್ರಸಿದ್ಧ ಮಹಿಳಾ ವಿಜ್ಞಾನಿ ಮತ್ತು ಗಣಿತಜ್ಞೆ ಹಿಪಾಟಿಯಾ. ಈಕೆ ಗ್ರೀಕರ ಬೌದ್ಧಿಕ ಪರಾಕಾಷ್ಠೆಯ ಸಮಯದಲ್ಲಿ ಅಲೆಕ್ಸಾಂಡ್ರಿಯಾ ನಗರದಲ್ಲಿ ಜೀವಿಸಿದ ಮಹಿಳೆ. ಮಹಾನ್ ಅಲೆಕ್ಸಾಂಡರ್ ಈಜಿಪ್ತಿನ ಮೇಲೆ ದಾಳಿಯಿಟ್ಟು, ನೈಲ್ ನದಿಯ ತುದಿಯಲ್ಲಿ ಅಲೆಕ್ಸಾಂಡ್ರಿಯಾ ನಗರವನ್ನು ಕಟ್ಟಿದ್ದ. ಒಂದುನೂರು ವರ್ಷಗಳಲ್ಲಿ ಹತ್ತು ಲಕ್ಷ ಜನರು ಇಲ್ಲಿ ನೆಲೆಸಿ ಅಲೆಕ್ಸಾಂಡ್ರಿಯಾ ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಟ್ಟಿತ್ತು. ಅಲೆಕ್ಸಾಂಡರ್ ಕ್ರಿ.ಪೂ. ೩೨೩ರಲ್ಲಿ ಮರಣಿಸಿದ ಮೇಲೆ ಆತನ ಸಾಮ್ರಾಜ್ಯ ಛಿದ್ರವಾಯಿತು. ಟಾಲೆಮಿ ಈಜಿಪ್ತಿನ ದೊರೆಯಾದಾಗ, ಅಲೆಕ್ಸಾಂಡ್ರಿಯಾ ಆತನ ರಾಜಧಾನಿಯಾಯಿತು. ಇಲ್ಲಿ ಅಲೆಕ್ಸಾಂಡ್ರಿಯಾದಲ್ಲಿ ಟಾಲೆಮಿ ಒಂದು ಮಹಾನ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಪ್ರಪಂಚದ ಅನೇಕ ಕಡೆಗಳಿಂದ ವಿದ್ವಾಂಸರನ್ನು ಪ್ರವಚನ ನೀಡಲು ಆಹ್ವಾನಿಸಿದ. ಗ್ರೀಕ್ ದೇಶದ ಮಹಾನ್ ಗಣಿತಜ್ಞ ಯೂಕ್ಲಿಡ್ ಇಲ್ಲಿಯ ಗಣಿತ ವಿಭಾಗದಲ್ಲಿ ಮುಖ್ಯಸ್ಥನಾಗಿದ್ದ.

ಕ್ರಿ.ಶ. ೩೭೦ರಲ್ಲಿ ಹಿಪಾಟಿಯಾ ಹುಟ್ಟುವಾಗ ಅಲೆಕ್ಸಾಂಡ್ರಿಯಾ ವಿಶ್ವವಿದ್ಯಾಲಯ ಏಳು ನೂರು ವರ್ಷಗಳಷ್ಟು ಹಳೆಯದಾಗಿತ್ತು. ಅಲೆಕ್ಸಾಂಡ್ರಿಯಾ ಈಗ ರೋಮನ್ನರ ಅಧೀನದಲ್ಲಿತ್ತು. ರೋಮನ್ ಯುದ್ಧದಾಹದ ಈ ಸಮಯದಲ್ಲಿ, ಗಣಿತಕ್ಕೆ ಯಾರ ಗಮನವಾಗಲೀ, ಪ್ರೋತ್ಸಾಹವಾಗಲೀ ಇರಲಿಲ್ಲ. ರೋಮನ್ನರು ಗಣಿತದಲ್ಲಿ ತೀರ ಹಿಂದಿದ್ದರು. ಒಡ್ಡೊಡ್ಡು ರೋಮನ್ ಅಂಕಿಗಳನ್ನು ಇಟ್ಟುಕೊಂಡು ಸರಳವಾಗಿ ಕೂಡಿ, ಗುಣಿಸುವ ಕೆಲಸ ಮಾಡುವುದು ಕೂಡ ಕಷ್ಟವಿತ್ತು. ಇಂಥ ಪ್ರತಿಕೂಲ ಪರಿಸರದಲ್ಲಿ ಗ್ರೀಕ್ ಸಂಪ್ರದಾಯವನ್ನು, ಸೃಜನಶೀಲತೆಯನ್ನು ಉಳಿಸಲು ವಿದ್ವಾಂಸರು ಹೋರಾಡುತ್ತಿದ್ದರು.

ಈ ಹೋರಾಟದ ಕೊನೆಯ ಮಹಾನ್ ಗಣಿತಜ್ಞೆ, ವಿಜ್ಞಾನಿ ಹಾಗೂ ವಿದ್ವಾಂಸೆ ಹಿಪಾಟಿಯಾ.

ಹಿಪಾಟಿಯಾ ಗಣಿತಜ್ಞ ಥಿಯಾನನ ಮಗಳು. ಆಕೆಯ ತಂದೆ ಗಣ್ಯ ಗಣಿತಜ್ಞ ಮತ್ತು ಖಗೋಳಶಾಸ್ತ್ರಜ್ಞ. ಆತ ಅಲೆಕ್ಸಾಂಡ್ರಿಯಾದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದ. ಆ ಕಾಲದಲ್ಲಿ ಮಹಿಳೆಯರಿಗೆ ಯಾವುದೇ ಬಗೆಯ ಬೌದ್ಧಿಕ ವಿದ್ಯಾಭ್ಯಾಸ ನೀಡುವುದು ಅಪರೂಪವಿತ್ತು. ಆಕೆ ವಿವಾಹವಾದ ಉಲ್ಲೇಖಗಳಿಲ್ಲ. ತಂದೆಯೇ ಆಕೆಗೆ ಗಣಿತವನ್ನು ಕಲಿಸಿರಬೇಕು. ತಂದೆ, ಮಗಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಎಲ್ಲಿಲ್ಲದ ಗಮನ ಕೊಡುತ್ತಿದ್ದ ಉಲ್ಲೇಖಗಳೂ ಇವೆ. ದೈಹಿಕ ವ್ಯಾಯಾಮ ಅವಳ ದಿನಚರಿಯ ಅಂಗವಾಗಿತ್ತು. ತಂದೆ ಆಕೆಯನ್ನು 'ಪರಿಪೂರ್ಣ ಮಾನವಳ'ನ್ನಾಗಿ ಮಾಡಬಯಸಿದ್ದ. ಆ ಕಾಲದಲ್ಲಿ ಮಹಿಳೆಯರು ಬಹಳಷ್ಟು ಅಪೂರ್ಣರೆಂಬ ನಂಬಿಕೆ ಇತ್ತು.

ಹಿಪಾಟಿಯಾಳ ಪ್ರತಿಭೆ, ಪಾಂಡಿತ್ಯದೊಡನೆ ಆಕೆಯ ಸೌಂದರ್ಯವೂ ಪ್ರಸಿದ್ಧವಾಗಿತ್ತು. ಆಕೆಯ ಉಪನ್ಯಾಸಗಳು ವಿಶ್ವವಿದ್ಯಾಲಯದಲ್ಲಿ ಅತ್ಯಂತ ಜನಪ್ರಿಯವಿದ್ದು, ಯೂರೋಪು, ಏಷಿಯಾ, ಆಫ್ರಿಕಾಗಳಿಂದ ಆಕೆಯ ಉಪನ್ಯಾಸವನ್ನು ಕೇಳಲು ವಿದ್ಯಾರ್ಥಿಗಳು ಬರುತ್ತಿದ್ದರು. ಆಕೆಯ ಸುಂದರ ರೂಪು ವಿದ್ಯಾರ್ಥಿಗಳ ಗಮನವನ್ನು ಚಂಚಲವಾಗಿಸದಿರಲೆಂದು ಹಿಪಾಟಿಯಾ ಪರದೆಯ ಹಿಂದೆ ಕುಳಿತು ಉಪನ್ಯಾಸ ನೀಡುತ್ತಿದ್ದಳೆಂಬ ಪ್ರತೀತಿ ಇದೆ. ಆಕೆ ಅಧ್ಯಾಪಕಿಯಾಗಿ, ಉತ್ತಮ ವಾಗ್ಮಿಯಾಗಿ ಎಲ್ಲರ ಅಭಿಮಾನ ಗಳಿಸಿದ್ದಳು. ಹಿಪಾಟಿಯಾ ಅಥೆನ್ಸ್ ಮತ್ತು ಇಟಲಿಗಳಲ್ಲಿ ಪ್ರವಾಸ ಮಾಡಿದ್ದಳು. ಎಲ್ಲ ಧರ್ಮದ ಜನರಿಗೂ ಉಪನ್ಯಾಸ ನೀಡಿದ್ದಳು. ಆಕೆಯ ಮನೆ ಬೌದ್ಧಿಕ ವಿಚಾರಗಳ ಕೇಂದ್ರವಾಗಿದ್ದು, ವೈಜ್ಞಾನಿಕ ಹಾಗೂ ತತ್ತ್ವಜ್ಞಾನದ ಚರ್ಚೆಗೆಂದು ವಿದ್ವಾಂಸರು ಬಂದಿಳಿಯುತ್ತಿದ್ದ ಸಂಗಮ ಸ್ಥಳವಾಗಿತ್ತು.

ಹಿಪಾಟಿಯ ಪ್ಲೇಟೋ ಮತ್ತು ಪೈಥಾಗೊರಸನ ತತ್ತ್ವಗಳಲ್ಲಿ ನಂಬಿಕೆ ಇಟ್ಟವಳು. ಆದರೆ ಆ ಸಮಯದಲ್ಲಿ ಹಿಪಾಟಿಯಾ ಅಲೆಕ್ಸಾಂಡ್ರಿಯಾ ನಗರದಲ್ಲಿ ಅತ್ಯಂತ ಅಪಾಯಕಾರಿ ಪರಿಸರದಲ್ಲಿದ್ದಳು. ಹೊಸದಾದ

ಕ್ರೈಸ್ತ ಧರ್ಮ ವಿಕಾಸಗೊಂಡು ಹಬ್ಬಿ ಹರಡುತ್ತಿದ್ದ ಈ ಸಮಯದಲ್ಲಿ ಹಿಪಾಟಿಯಾ ಗ್ರೀಕ್ ಧಾರ್ಮಿಕ ನಂಬಿಕೆಗಳಿಗೆ ನಿಷ್ಠಳಾಗಿದ್ದಳು. ರೋಮನ್ ಸಾಮ್ರಾಜ್ಯ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿತ್ತು. ಗಣಿತ, ವಿಜ್ಞಾನವನ್ನು ಕೆಡುಕೆಂದು ತಿಳಿದ ಕಾಲ. ಪರೀಕ್ಷಿಸುವ – ಪ್ರಯೋಗಿಸುವ ಪ್ರಯಾಸವನ್ನು ಬದಿಗಿಟ್ಟು, ಅಗೋಚರ ಆಧ್ಯಾತ್ಮಿಕ ಕಾರಣಗಳನ್ನು ನೀಡಿ ತೃಪ್ತವಾದ ಕಾಲ. ಅನೇಕ ಕ್ರೈಸ್ತ ಪಾದ್ರಿಗಳು, ಭೂಮಿ ಚಪ್ಪಟೆಯಾಗಿದೆ ಎಂಬ ನಂಬಿಕೆಗಳನ್ನು ಪುನಃ ಪ್ರಚಾರಕ್ಕೆ ತಂದರು. ಕ್ರೈಸ್ತ ಧರ್ಮ ಬೌದ್ಧಿಕ ಚರ್ಚೆಯನ್ನು ತುಳಿದು ಭಗವಂತನಲ್ಲಿಯ 'ನಂಬಿಕೆ'ಯನ್ನು ಮಾತ್ರ ಪ್ರಧಾನವೆನಿಸಿತ್ತು.

ಯೇಸು ಸದ್ಯದಲ್ಲೇ ಮತ್ತೆ ಹುಟ್ಟಿ ಬರುವನೆಂಬ ಪ್ರಚಾರ ಎಲ್ಲೆಲ್ಲೂ ನಡೆದು, ಜನರನ್ನು ವೈಚಾರಿಕವಾಗಿ ಸೋಮಾರಿಗಳನ್ನಾಗಿಸಿತ್ತು. ಇಂಥಾ ವಿಚಾರಗಳಲ್ಲಿ ನಂಬಿಕೆ ಇರದ ಜನರ ಮತ್ತು ಕ್ರೈಸ್ತರ ನಡುವೆ ತೀವ್ರ ತಿಕ್ಕಾಟಗಳಿದ್ದವು. ಕ್ರೈಸ್ತರಿಗೆ ಈ ಅಸಂಪ್ರದಾಯಿಕ ವಿಚಾರಗಳು ಅಬದ್ಧವಿದ್ದು ರೋಮನ್ ಸಾಮ್ರಾಜ್ಯದ ಅಧೋಗತಿಗೆ ಈ ಬಗೆಯ ವಿಚಾರಗಳೇ ಕಾರಣ ಎಂಬ ಪೂರ್ವಾಗ್ರಹವಿತ್ತು. ಇಂಥ ಧರ್ಮಾಂಧತೆಯ ವಿಷವರ್ತುಲದ ಅಲೆಕ್ಸಾಂಡ್ರಿಯಾದಲ್ಲಿ ಹಿಪಾಟಿಯಾಳ ದಾರುಣ ಹತ್ಯೆಯಾಯಿತು. ಹಿಪಾಟಿಯಾ ತನ್ನ ಗ್ರೀಕ್ ವೈಜ್ಞಾನಿಕ, ವೈಚಾರಿಕ ಚಿಂತನೆಗಳನ್ನು ಸಾರ್ವಜನಿಕವಾಗಿ ಬೆಂಬಲಿಸಿದ್ದೇ ಆಕೆಯ ಜೀವಕ್ಕೆ ಕುತ್ತಾಯಿತು. ೪೧೨ರಲ್ಲಿ ಅಲೆಕ್ಸಾಂಡ್ರಿಯಾದ ಮುಖ್ಯಸ್ಥನಾದ ಸಿರಿಲ್ ಇಂಥ ವಿಚಾರಗಳ ನಿರ್ಮೂಲನೆ ಮಾಡಿ ಕ್ರೈಸ್ತ ಧರ್ಮವನ್ನು ಪ್ರತಿಷ್ಠಾಪಿಸಲು ಹೊರಟವನಾಗಿದ್ದ. ಆತನಿಗೆ ಹಿಪಾಟಿಯಾ ಯಾವ ಭಿಡೆ ಇಲ್ಲದೆ ಗ್ರೀಕ್ ವೈಜ್ಞಾನಿಕ ವಿಚಾರಗಳನ್ನು ಬೆಂಬಲಿಸುವುದು ಅಸಹನೀಯವಿತ್ತು. ಆಕೆಯ ವಿದ್ಯಾರ್ಥಿ ಹಾಗೂ ಸ್ನೇಹಿತನಾಗಿದ್ದ ಓರಿಸ್ಟೆ ಹಿಪಾಟಿಯಾಳಿಗೆ ತನ್ನ ವೈಜ್ಞಾನಿಕ ವಿಚಾರಗಳನ್ನು ತೊರೆದು, ಕ್ರೈಸ್ತಧರ್ಮಕ್ಕೆ ಪರಿವರ್ತನೆಗೊಂಡು ಜೀವ ಉಳಿಸಿಕೊಳ್ಳಲು ಬೇಡಿದ. ಆದರೆ ಹಿಪಾಟಿಯಾ ಆತನ ಸಲಹೆಯನ್ನು ನಿರಾಕರಿಸಿದಳು. ಕಡೆಯವರೆಗೂ ತನ್ನ ವೈಜ್ಞಾನಿಕ ವಿಚಾರಗಳಿಗೆ ಬದ್ಧವಾಗಿ ಉಳಿದಳು.

ಪ್ರಸಿದ್ಧಳಾಗಿದ್ದ ಈಕೆಗೆ ಸಿರಿಲ್ ಅಪಾಯಕಾರಿ ಪ್ರತಿಸ್ಪರ್ಧಿಯಾಗಿದ್ದ. ಸಿರಿಲ್ ಅವಳ ವಿರುದ್ಧ ಜನರನ್ನು ಉದ್ರೇಕಿಸಿ, ದಂಗೆ ಎಬ್ಬಿಸಿದನೆಂಬ ನಂಬಿಕೆ ಇದೆ. ಆಕೆಯ ದಾರುಣ ಹತ್ಯೆಯ ವಿವರಗಳು ಮೈಜುಮ್ಮೆನ್ನಿಸುತ್ತವೆ. ಆಕೆಯನ್ನು ರಥದಿಂದ ಕೆಳಗೆಳೆದು ಸಿಸೇರಿಯಮ್ ಎಂಬ ಚರ್ಚ್‌ವೊಂದರೊಳಕ್ಕೆ ದರದರ ಎಳೆದೊಯ್ದು, ಬಟ್ಟೆಗಳನ್ನು ಹರಿದು ನಗ್ನಳಾಗಿಸಿ, ಚೂಪಾದ ಕಪ್ಪೆಚಿಪ್ಪುಗಳಿಂದ ಆಕೆಯ ದೇಹದ ಮಾಂಸವನ್ನು ಮೂಳೆಯಿಂದ ಕೆರೆದು, ಕಿತ್ತು ತೆಗೆದರು. ಇಡೀ ದೇಹವನ್ನು ತುಂಡು ತುಂಡಾಗಿಸಿ, ಆ ತುಂಡುಗಳನ್ನು ಸಿನಾರೋನ್ ಎಂಬ ಜಾಗಕ್ಕೆ ತಂದು ಸುಟ್ಟು ಬೂದಿ ಮಾಡಿದರು.

ಆಕೆಯ ಹತ್ಯೆ ಯೂರೋಪಿನ ಸ್ವತಂತ್ರ ಚಿಂತನೆ, ವೈಜ್ಞಾನಿಕ ಶೋಧನೆಯ ಹತ್ಯೆಯನ್ನು, ಪುರಾತನ ವಿಜ್ಞಾನದ ಅಂತ್ಯವನ್ನೂ ಸಂಕೇತಿಸಿತು. ಆಕೆ ಸತ್ತ ವರ್ಷವೇ ರೋಮನ್ ಸಾಮ್ರಾಜ್ಯ ಕುಸಿದು, 'ಕತ್ತಲೆಯ ಯುಗ' ಆರಂಭವಾಯಿತು. ಅಲ್ಲಿಂದ ಮುಂದೆ ಒಂದು ಸಾವಿರ ವರ್ಷಗಳ ಕಾಲ ಯೂರೋಪಿನಲ್ಲಿ ಯಾವ ಪ್ರಮುಖ ವೈಜ್ಞಾನಿಕ ಶೋಧವೂ ನಡೆಯಲಿಲ್ಲ. ಗ್ರೀಕರ ವಿಜ್ಞಾನ ಅರಬರ ಪ್ರಪಂಚದಲ್ಲಿ ಉಸಿರಾಡತೊಡಗಿತು. ಹಿಪಾಟಿಯಾಳೊಂದಿಗೆ ಗ್ರೀಕ್ ಗಣಿತದ ಮಹಾನ್ ಯುಗ ಕೊನೆಗೊಂಡಿತು. ಮುಂದೆ ೬೪೧ರಲ್ಲಿ ಅಲೆಕ್ಸಾಂಡ್ರಿಯಾ ಅರಬರಿಂದ ದಾಳಿಗೊಳಗಾಗಿ ಧ್ವಂಸವಾಯಿತು. ಅಲ್ಲಿಯ ಮಹಾನ್ ಗ್ರಂಥಾಲಯ ಸುಟ್ಟು ಬೂದಿಯಾಯಿತು. ಸುಮಾರು ಒಂದು ಸಾವಿರ ವರ್ಷದ ಅಲೆಕ್ಸಾಂಡ್ರಿಯಾ ಮಹಾವಿಶ್ವವಿದ್ಯಾಲಯದ ಪ್ರವರ್ಧಮಾನ ಸ್ಥಿತಿ ಮುಗಿದು, ಅಸ್ತಮಿಸಿತು.

ಹಿಪಾಟಿಯಾಳ ಮೂಲಕೃತಿಗಳ ಯಾವ ಪ್ರತಿಯೂ ಇಂದು ಲಭ್ಯವಿಲ್ಲದಿದ್ದರೂ, ಆಕೆಯ ಕೊಡುಗೆಯ ಉಲ್ಲೇಖಗಳು ಯಥೇಚ್ಛವಾಗಿ ದೊರೆಯುತ್ತವೆ. ಆಕೆಯ ಶಿಷ್ಯ, ಸಿನೇಸಿಯಸ್ ಮುಂದೆ ಟಾಲೆಮೇಸನ ಬಿಷಪ್ ಆದವ. ಆತನ ಪತ್ರಗಳಿಂದ ಆಕೆಯ ಗಣಿತದ ಕೃತಿಗಳನ್ನು ಕುರಿತು ಬಹಳಷ್ಟು ವಿವರಗಳು ದೊರೆಯುತ್ತವೆ. ಹಿಪಾಟಿಯಾ ತನ್ನ ತಂದೆಯೊಂದಿಗೆ ಯೂಕ್ಲಿಡನ ಕೃತಿಯನ್ನು ಪುನರ್ ಪರಿಷ್ಕರಿಸಿದ್ದಳು.

ತಂದೆಯೊಡನೆ ಆಕೆ ಯೂಕ್ಲಿಡ್ ಕುರಿತು ಕ್ರಮವಾಗಿ 'ಪ್ರಕರಣ ಗ್ರಂಥ'ವನ್ನು ತಯಾರಿಸಿದ್ದಳು. ತಂದೆಯ ಟಾಲೆಮಿಯನ್ನು ಕುರಿತು ಕೃತಿಯ ಬಗ್ಗೆ ಕೊನೇ ಪಕ್ಷ ಒಂದು ಪುಸ್ತಕವನ್ನಾದರೂ ಈಕೆ ಬರೆದಿದ್ದಳು. ಹಿಪಾಟಿಯಾ ಗಣಿತ ಮತ್ತು ಖಗೋಳಶಾಸ್ತ್ರವನ್ನು ಕುರಿತು ಅನೇಕ ಪುಸ್ತಕಗಳನ್ನು ಬರೆದಳು. ಅಲೆಕ್ಸಾಂಡ್ರಿಯಾ ನಗರದಲ್ಲಿ ಹಿಂದೆ ಜೀವಿಸಿದ್ದ ಮುಖ್ಯ ಗಣಿತಜ್ಞ ಡಯೋಫ್ಯಾಂಟಸನಿಂದ ಹಿಪಾಟಿಯಾ ಸ್ಫೂರ್ತಿಗೊಂಡಿದ್ದಳು. ಆಕೆ ಮೂಲತಃ ಬೀಜಗಣಿತಜ್ಞಳು. ಆಕೆ ಡಯೋಫ್ಯಾಂಟಸನ ಹದಿಮೂರು ಸಂಪುಟಗಳ ಬೀಜಗಣಿತದ ಮೂಲಗ್ರಂಥ 'ಅರ್ತಮೆಟಿಕಾ'ವನ್ನು ಕುರಿತು ವ್ಯಾಖ್ಯಾನವನ್ನು ಬರೆದಳು. ಅದರಲ್ಲಿ ಅನೇಕ ಹೊಸ ವಿಧಾನಗಳನ್ನು, ಹೊಸ ಸಮಸ್ಯೆಗಳನ್ನು ಸೇರಿಸಿದ್ದಳು. ಟಾಲೆಮಿಯ 'ಆಲ್ಮಗೆಸ್ಟ್' ಕುರಿತೂ ವ್ಯಾಖ್ಯಾನ ಬರೆದಳು. 'ಆಲ್ಮಗೆಸ್ಟ್'ನ ಅರ್ಥ 'ಮಹಾನ್ ಕೃತಿ' ಎಂದು. ಟಾಲೆಮಿ ಇದರಲ್ಲಿ ಸಮಕಾಲೀನ ಗಣಿತ ಮತ್ತು ಖಗೋಳಶಾಸ್ತ್ರದ ಅಷ್ಟೂ ಜ್ಞಾನವನ್ನು ವ್ಯವಸ್ಥಿತವಾಗಿ ಸಂಗ್ರಹಿಸಿಟ್ಟಿದ್ದ. ಹಿಪಾಟಿಯಾಳ 'ಆನ್ ದಿ ಕಾನಿಕ್ಸ್ ಆಫ್ ಅಪೊಲೋನಿಯಸ್' ಎಂಬ ಪುಸ್ತಕ, ಐನೂರು ವರ್ಷಗಳ ಹಿಂದೆ ಅಲೆಕ್ಸಾಂಡ್ರಿಯಾದಲ್ಲಿ ನೆಲೆಸಿದ್ದ ಗಣಿತಜ್ಞನ ಕೊಡುಗೆಯನ್ನು ಕುರಿತ ಪುಸ್ತಕವಾಗಿದೆ. ಅಪೊಲೋನಿಯಸ್ ಕ್ರಿ.ಪೂ. ಮೂರನೇ ಶತಮಾನದಲ್ಲಿ ಇದ್ದವ. ಈತ ಗ್ರಹಗಳ ಅಸಮವಾದ ವ್ಯೂಹಗಳನ್ನು ವಿವರಿಸಿದವ. ಹಿಪಾಟಿಯಾ ಆತನ ಕೆಲಸವನ್ನು ಅತ್ಯಂತ ಜನಪ್ರಿಯಗೊಳಿಸಿದಳು. ಆಕೆಯ ನಂತರ ಮುಂದೆ ಹದಿಮೂರು ಶತಮಾನಗಳ ಕಾಲ 'ಕಾನಿಕ್ ಸೆಕ್ಷನ್' ಕುರಿತು ಯಾವ ಪುಸ್ತಕವೂ ಹೊರಬರಲಿಲ್ಲ. ಈಕೆಗೆ 'ಕಾನಿಕ್ ಸೆಕ್ಷನ್' ಅಂದರೆ, 'ಶಂಕುಚ್ಛೇಧ ಗಣಿತ'ದಲ್ಲಿ ಎಲ್ಲಿಲ್ಲದ ಆಸಕ್ತಿ ಇದ್ದು, ಅದರ ಪ್ರಾಮುಖ್ಯ ತಿಳಿದಿತ್ತು. ಶಂಕುಚ್ಛೇದ ಗಣಿತ, ಶಂಕುವಿನಾಕಾರದ ವಸ್ತುಗಳನ್ನು ಅಡ್ಡವಾಗಿ, ನೇರವಾಗಿ, ಓರೆಯಾಗಿ ಮುಂತಾಗಿ ಒಂದು ಸಮಕ್ಷೇತ್ರದಿಂದ ಕತ್ತರಿಸಿದರೆ ಕಾಣಸಿಗುವ 'ವೃತ್ತ, ದೀರ್ಘವೃತ್ತ, ಪರವಲಯ, ಅತಿ ಪರವಲಯ' ಮುಖಗಳನ್ನು ಕುರಿತ ಗಣಿತ. ಈ ಬಾಗಿ ತಿರುಗಿದ ವಕ್ರಾಕೃತಿಗಳು ಅದ್ಭುತವೆನಿಸಿ ಆಕೆಯನ್ನು ಆಕರ್ಷಿಸಿದ್ದವು. ಆಕೆಯ ಸಾವಿನೊಂದಿಗೆ ಶಂಕುಚ್ಛೇದ ಗಣಿತ ಉಪೇಕ್ಷಿಸಲ್ಪಟ್ಟಿತು. ಮುಂದೆ

೧೭ನೇ ಶತಮಾನದ ಆರಂಭದಲ್ಲಿ ಶಂಕುಚ್ಛೇದ ಗಣಿತ ಅತ್ಯಂತ ಪ್ರಾಮುಖ್ಯ ಪಡೆಯಲಿತ್ತು. ಆಧುನಿಕ ವಿಜ್ಞಾನದೊಡನೆ, ಅನೇಕ ಪ್ರಕೃತಿ ಸಹಜ ಇಂದ್ರಿಯಗೋಚರ ಸಂಗತಿಗಳನ್ನು 'ಕಾನಿಕ್ ಸೆಕ್ಷನ್'ಗಳ ವಕ್ರರೇಖೆಗಳಿಂದ ಅದ್ಭುತವಾಗಿ ವಿವರಿಸಬಹುದೆಂದು ಕಂಡುಹಿಡಿದರು.

ಹಿಪಾಟಿಯಾ ಖಗೋಳಶಾಸ್ತ್ರವನ್ನು ಕುರಿತು ತನ್ನ ಕೃತಿಯಲ್ಲಿ ಗ್ರಹತಾರೆಗಳ ಚಲನೆಯ ಪಟ್ಟಿಗಳನ್ನು ನೀಡಿದ್ದಳು. ಹಿಪಾಟಿಯಾಗೆ ಚಲನಶಾಸ್ತ್ರ ಮತ್ತು ತಂತ್ರಜ್ಞಾನದಲ್ಲಿಯೂ ಆಸಕ್ತಿ ಇತ್ತು. ಆಕೆ ಅನೇಕ ವೈಜ್ಞಾನಿಕ ಸಲಕರಣೆಗಳನ್ನು ತಯಾರಿಸಿದಳು. ಸಿನೇಸಿಯಸನ ಪತ್ರಗಳಲ್ಲಿ ಅಂಥಾ ಅನೇಕ ಸಲಕರಣೆಗಳನ್ನು ತಯಾರಿಸಲು ಆಕೆ ನೀಡಿದ ವಿವರಣೆಗಳಿವೆ. ಹಿಪಾಟಿಯಾ 'ಗ್ರಹೋನ್ನತಿ ಮಾಪಕ' (astrolabe) ತಯಾರಿಸಿದ್ದಳು. ಇದು ಗ್ರಹ ಸೂರ್ಯ ತಾರೆಗಳ ಸ್ಥಾನವನ್ನು ಅಳೆಯಲು ಬಳಸುವ ಸಲಕರಣೆ. ಹಿಪಾಟಿಯಾ 'ಪ್ರವಲಂಬಿತ ನಕ್ಷೆ' (Plainsphare)ಯನ್ನೂ ಕಂಡುಹಿಡಿದಳು. ಇದು ಸಮತಲದ ಮೇಲೆ ಗೋಳಭಾಗದ ಪ್ರಲಂಬನ ಮಾಡಿದ ನಕ್ಷೆ. ಒಂದು ಗೊತ್ತಾದ ಸ್ಥಳದಲ್ಲಿ, ಗೊತ್ತಾದ ಕಾಲದಲ್ಲಿ ಕಾಣಿಸುವ ಆಕಾಶಭಾಗವನ್ನು ತೋರಿಸುವ ಸಲಕರಣೆ. ನೀರನ್ನು ಬಟ್ಟಿ ಇಳಿಸುವ ಯಂತ್ರವನ್ನು ಕಂಡುಹಿಡಿದಳು. ದ್ರವಗಳ ಸಾಂದ್ರತೆಯನ್ನು ಅಳೆಯುವ ಮೊಟ್ಟಮೊದಲ ಸಲಕರಣೆಯನ್ನು ಕಂಡುಹಿಡಿದಳು. 'ತೇವ ಮಾಪಕ' (Hydrometer) ಹವೆಯಲ್ಲಿರುವ ಆರ್ದ್ರತೆಯನ್ನು ಅಳೆಯುವ ಸಲಕರಣೆಯನ್ನು, ನೀರಿನ ಮಟ್ಟವನ್ನು ಅಳೆಯುವ ಸಲಕರಣೆಯನ್ನು ಕಂಡುಹಿಡಿದಳು. ಹಿಪಾಟಿಯಾ ಗಣಿತ, ತತ್ತ್ವಜ್ಞಾನ, ಖಗೋಳಶಾಸ್ತ್ರದೊಡನೆ ಚಲನಶಾಸ್ತ್ರವನ್ನು ಕುರಿತೂ ಉಪನ್ಯಾಸಗಳನ್ನು ನೀಡುತ್ತಿದ್ದಳೆಂಬ ಊಹೆ ಇದೆ.

ಜೀವನ–ಸಾಧನೆಯನ್ನು ಕುರಿತಂತೆ ಸಾಕಷ್ಟು ದಾಖಲೆಗಳು ಸಿಗುವ ಮೊಟ್ಟಮೊದಲ ಮಹಿಳಾ ವಿಜ್ಞಾನಿ–ಗಣಿತಜ್ಞೆ ಹಿಪಾಟಿಯಾ. ಆಕೆಯ ಈ ಬದುಕು, ವಿಜ್ಞಾನ–ಗಣಿತಕ್ಕೆ ಆಕೆಯಿತ್ತ ಕೊಡುಗೆ ಹಾಗೂ ಆಕೆಯ ಭೀಕರ ಸಾವು ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಉಳಿದು, ಮುಂದಿನ ಸುಮಾರು ೧೫ ಶತಮಾನಗಳ ಕಾಲ ಹಿಪಾಟಿಯಾ ಒಬ್ಬಳೇ

ಚರಿತ್ರೆಯ ಏಕಮೇವ ಮಹಿಳಾ ವಿಜ್ಞಾನಿಯೇನೋ ಎಂಬ ಭ್ರಮೆ ತರಿಸಿದ್ದುಂಟು. ಆದರೆ, ಚರಿತ್ರೆಯಾಳದಲ್ಲಿ ಅಡಗಿ ಅದೃಶ್ಯವಾದ ಮಹಿಳಾ ವಿಜ್ಞಾನಿಗಳ, ಗಣಿತಜ್ಞರ ಸಂಖ್ಯೆ ದೊಡ್ಡದಿದೆ. ಈ ಮಹಿಳಾ ವಿಜ್ಞಾನಿಗಳ ಪರಂಪರೆಯಲ್ಲಿ ಹಿಪಾಟಿಯಾ ಮೊಟ್ಟಮೊದಲಿಗಳಾಗಿ ನಿಲ್ಲುತ್ತಾಳೆ.

(*ಮೂಲ : 'ಮಹಿಳಾ ವಿಜ್ಞಾನಿಗಳು' ಸಂಕಲನದಿಂದ*)

* * *

# ಹಿಂದ್ ಸ್ವರಾಜ್ಯ

**–ಮೋಹನದಾಸ್ ಕರಮಚಂದ್ ಗಾಂಧಿ**

## ಶಿಕ್ಷಣ

**ಸಂಪಾದಕ :** ಶಿಕ್ಷಣ ಎಂದರೇನು?

ಕೇವಲ ಅಕ್ಷರಜ್ಞಾನ ಎಂದರೆ ಅದೊಂದು ಆಯುಧವಾಯಿತು. ಆಯುಧವನ್ನು ಸದುಪಯೋಗ ಮಾಡಲೂ ಬಹುದು, ದುರುಪಯೋಗ ಮಾಡಲೂಬಹುದು. ಒಂದೇ ಆಯುಧದಿಂದ ರೋಗಿಯನ್ನು ವಾಸಿ ಮಾಡಲೂಬಹುದು. ಕೊಂದು ಹಾಕಲೂಬಹುದು. ಅಕ್ಷರಜ್ಞಾನವೂ ಅದೇ ರೀತಿ. ಅಕ್ಷರಜ್ಞಾನದ ದುರುಪಯೋಗ ಆಗುತ್ತಿರುವುದನ್ನು ದಿನವೂ ನಾವು ನೋಡುತ್ತಿದ್ದೇವೆ. ಕೆಲವರು ಮಾತ್ರ ಅದರ ಸದುಪಯೋಗ ಮಾಡುತ್ತಿದ್ದಾರೆ. ಈ ಮಾತು ನಿಜವಾದರೆ ಅಕ್ಷರಜ್ಞಾನದಿಂದ ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತು ಎಂಬುದು ಸಿದ್ಧವಾಗುತ್ತದೆ.

ಶಿಕ್ಷಣವೆಂದರೆ ಸಾಧಾರಣವಾಗಿ ಅಕ್ಷರಜ್ಞಾನ ಎನ್ನುತ್ತಾರೆ. ಮಕ್ಕಳಿಗೆ ಓದು ಬರಹ ಅಂಕಗಣಿತಗಳನ್ನು ಕಲಿಸುವುದೇ ಪ್ರಾಥಮಿಕ ಶಿಕ್ಷಣ. ಒಬ್ಬ ರೈತ ಪ್ರಾಮಾಣಿಕತೆಯಿಂದ ತನ್ನ ಹಿಟ್ಟನ್ನು ಗಳಿಸುತ್ತಾನೆ. ಅವನಿಗೆ ಸಾಮಾನ್ಯ ಲೋಕಜ್ಞಾನವಿದೆ. ತನ್ನ ತಂದೆ ತಾಯಿಯ ಸಂಗಡ, ಹೆಂಡತಿ ಮಕ್ಕಳ ಸಂಗಡ ಗ್ರಾಮವಾಸಿಗಳ ಸಂಗಡ ಹೇಗೆ ನಡೆದುಕೊಳ್ಳಬೇಕು ಎಂಬುದು ಅವನಗೆ ಚೆನ್ನಾಗಿ ಗೊತ್ತು. ಸದಾಚಾರ ನೀತಿಗಳನ್ನು ಅವನು ಬಲ್ಲ. ಅದರಂತೆ ನಡೆದೂ ನಡೆಯುತ್ತಾನೆ. ಆದರೆ ಅವನಿಗೆ ತನ್ನ ಹೆಸರು ಬರೆಯಲು ಬಾರದು. ಇಂಥವನಿಗೆ ಅಕ್ಷರಜ್ಞಾನ ನೀಡಿ ಏನು ಮಾಡಬೇಕೆನ್ನುತ್ತೀರಿ? ಅವನ ಸುಖಕ್ಕೆ ಒಂದು ಗಂಜಿಯಷ್ಟಾದರೂ ಹೆಚ್ಚು ಸೇರಿಸಬಲ್ಲಿರಾ? ಅವನ ಗುಡಿಸಲು – ಪರಿಸ್ಥಿತಿಗಳ ಬಗ್ಗೆ ಅವನಿಗೆ ಅತೃಪ್ತಿಯುಂಟು ಮಾಡಬೇಕೆ? ಹಾಗೆ ಮಾಡಲು ಈ

ಶಿಕ್ಷಣವೇಕೆ ಬೇಕು? ಪಶ್ಚಿಮದ ವಿಚಾರ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದು ಹಿಂದುಮುಂದು ಆಲೋಚಿಸದೆ ಜನರಿಗೆ ಈ ಅಕ್ಷರ ಶಿಕ್ಷಣ ಕೊಡಬೇಕು ಎಂದು ನಾವು ತೀರ್ಮಾನ ಮಾಡಿದೆವು.

ಪ್ರೌಢ ಶಿಕ್ಷಣವನ್ನು ನೋಡಿ. ನಾನು ಭೂಗೋಳ, ಖಗೋಳ, ರೇಖಾಗಣಿತ, ಬೀಜಗಣಿತ ಇತ್ಯಾದಿಗಳನ್ನು ಕಲಿತೆ, ಏನು ಪ್ರಯೋಜನ? ನನಗಾಗಲಿ ನನ್ನ ನೆರೆಯವರಿಗಾಗಲಿ ಅದರಿಂದ ಏನು ಲಾಭ? ಇವನ್ನು ನಾನು ಕಲಿತೆನೇಕೆ? ಪ್ರೊ. ಹಕ್ಸಲೇ ಶಿಕ್ಷಣವನ್ನು ಹೀಗೆ ವಿವರಿಸಿದ್ದಾನೆ– "ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ ಸಂತೋಷವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆತಿದೆಯೋ; ಯಾರ ಬುದ್ಧಿ ಶುದ್ಧ, ಶಾಂತ, ನ್ಯಾಯದರ್ಶಿ ಆಗಿದೆಯೋ; ಯಾರ ಮನಸ್ಸು ಪ್ರಕೃತಿ ನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೋ; ಯಾರ ಇಂದ್ರಿಯಗಳು ನಿಗ್ರಹಿತವೋ; ಯಾರ ಅಂತರಾತ್ಮ ಪರಿಶುದ್ಧವೋ; ಯಾರಿಗೆ ನೀಚ ಕಾರ್ಯವೆಂದರೆ ಹೇಸಿಗೆಯೋ; ಯಾರು ತನ್ನಂತೆಯೇ ಪರರನ್ನು ಕಾಣುತ್ತಾನೋ, ಅವನು ನಿಜವಾಗಿ ಶಿಕ್ಷಿತ. ಅವನು ಪ್ರಕೃತಿ ನಿಯಮದಂತೆ ನಡೆಯುತ್ತಾನೆ. ನಿಜವಾಗಿ ಅವನೇ ಸರಿಯಾದ ಶಿಕ್ಷಣ ಪಡೆದವನು. ಪ್ರಕೃತಿಯನ್ನು ಅವನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡಾನು, ಪ್ರಕೃತಿ ಅವನನ್ನು ಉತ್ತಮವಾಗಿ ಉಪಯೋಗಿಸೀತು."

ಇದು ನಿಜವಾದ ಶಿಕ್ಷಣವಾದರೆ, ನಾನು ಮೇಲೆ ಹೇಳಿದ ಯಾವ ಶಾಸ್ತ್ರವೂ ಇಂದ್ರಿಯ ನಿಗ್ರಹಕ್ಕೆ ನನಗೆ ನೆರವಾಗಿಲ್ಲವೆಂದು ಘಂಟಾಘೋಷ ವಾಗಿ ಹೇಳುತ್ತೇನೆ. ಆದುದರಿಂದ ಪ್ರಾಥಮಿಕ ಶಿಕ್ಷಣವಾಗಲಿ ಪ್ರೌಢ ಶಿಕ್ಷಣವಾಗಲಿ ಪ್ರಯೋಜನಕರವಲ್ಲ. ಅದು ನಮ್ಮನ್ನು ಮನುಷ್ಯರಾಗಿ ಮಾಡದು; ನಮ್ಮ ಕರ್ತವ್ಯಗಳನ್ನು ನೆರವೇರಿಸುವಂತೆ ಮಾಡದು.

**ಓದುಗ :** ಹಾಗಾದರೆ ನಿಮ್ಮನ್ನೊಂದು ಪ್ರಶ್ನೆ ಕೇಳಬೇಕು. ಇದನ್ನೆಲ್ಲ ನೀವು ಯಾವ ಬಲದಿಂದ ಹೇಳುತ್ತಿದ್ದೀರಿ? ನಿಮಗೆ ಉಚ್ಚ ಶಿಕ್ಷಣ ಸಿಕ್ಕಿರದಿದ್ದರೆ ಇದನ್ನೆಲ್ಲ ವಿವರಿಸಲು ಸಾಧ್ಯವಾಗುತ್ತಿತ್ತೆ?

**ಸಂಪಾದಕ :** ಒಳ್ಳೆಯ ಮಾತು ಹೇಳಿದಿರಿ. ನನ್ನ ಉತ್ತರ ಸರಳ; ಈ ಪ್ರಾಥಮಿಕ ಶಿಕ್ಷಣ : ಪ್ರೌಢ ಶಿಕ್ಷಣಗಳಿಲ್ಲದಿದ್ದರೆ ನನ್ನ ಬಾಳು ವ್ಯರ್ಥವಾಗುತ್ತಿತ್ತು ಎಂಬುದನ್ನು ನಾನು ಎಳ್ಳಷ್ಟೂ ಒಪ್ಪುವುದಿಲ್ಲ. ನಾನು ಮಾತಾಡಿದುದರಿಂದ ಸೇವೆ ಮಾಡಿದಂತಾಯಿತು ಎಂಬುದನ್ನೂ ನಾನು ಒಪ್ಪುವುದಿಲ್ಲ. ಆದರೆ ನನಗೆ ಸೇವೆ ಮಾಡುವ ಆಸೆಯಿದೆ. ಅದನ್ನು ತೀರಿಸಿಕೊಳ್ಳಲು ನನಗೆ ದೊರೆತ ಶಿಕ್ಷಣವನ್ನು ಉಪಯೋಗಿಸುತ್ತಿದ್ದೇನೆ. ಅದರ ಉಪಯೋಗವಾದರೂ ಎಷ್ಟು ಜನಕ್ಕೆ ಲಾಭ? ನಿಮ್ಮಂಥ ಓದಿದವರಿಗೆ ಮಾತ್ರ. ನಮ್ಮ ಕೋಟಿಕೋಟಿ ಅಣ್ಣತಮ್ಮಂದಿರಿಗೆ ಏನು ಲಾಭ? ಇದೂ ನನ್ನ ವಿಚಾರಕ್ಕೆ ಪುಷ್ಟಿ ಕೊಡುತ್ತದೆ. ನಾನು ನೀವು ಇಬ್ಬರೂ ಪೊಳ್ಳು ಶಿಕ್ಷಣದ ಬಲೆಗೆ ಬಿದ್ದಿದ್ದೇವೆ. ಅದರ ದುಷ್ಟ ಪ್ರಭಾವದಿಂದ ನಾನು ಮುಕ್ತನಾಗಿದ್ದೇನೆ ಎಂದು ತಿಳಿದಿದ್ದೇನೆ. ನನ್ನ ಅನುಭವದ ಲಾಭವನ್ನು ನಿಮಗೆ ಕೊಡುತ್ತಿದ್ದೇನೆ. ಹಾಗೆ ಮಾಡುತ್ತ ಈ ಶಿಕ್ಷಣದ ಕೊಳಕನ್ನು ನಿಮಗೆ ತೋರಿಸುತ್ತಿದ್ದೇನೆ.

ಅಕ್ಷರಜ್ಞಾನ ಸದಾಕಾಲದಲ್ಲಿಯೂ ಕೆಟ್ಟದೆಂದು ನಾನು ಹೇಳಲಿಲ್ಲ. ಬರೀ ಅಕ್ಷರದ ಭ್ರಾಂತಿ ತಪ್ಪು ಎಂದು ಹೇಳುತ್ತಿದ್ದೇನೆ. ಅದು ನಮ್ಮ ಕಾಮಧೇನುವಲ್ಲ. ಅದರ ಮಿತಿಯಲ್ಲಿ ಅದು ಉಪಯುಕ್ತವೇ. ನಮ್ಮ ಇಂದ್ರಿಯಗಳನ್ನು ನಿಗ್ರಹಿಸಿ, ನಮ್ಮ ನೀತಿಯ ತಳಹದಿಯನ್ನು ಬಲಪಡಿಸಿದ ಮೇಲೆ ಅದರಿಂದ ಉಪಯೋಗವಾದೀತು. ಆಗ ನಮಗೆ ಬೇಕೆನಿಸಿದರೆ ಅಕ್ಷರಜ್ಞಾನವನ್ನು ಪಡೆಯಬಹುದು. ಅದನ್ನು ಸರಿಯಾಗಿ ಉಪಯೋಗಿಸಬಹುದು. ಆಗ ನಮಗದು ಭೂಷಣವೂ ಆದೀತು. ಈ ಶಿಕ್ಷಣವನ್ನು ಬಲಾತ್ಕಾರ ಮಾಡಬೇಕಾಗಿಲ್ಲ. ನಮ್ಮ ಹಳೆಯ ಪಾಠಶಾಲೆಗಳ ಪದ್ಧತಿಯೇ ಸಾಕು. ಅದರಲ್ಲಿ ಸದಾಚಾರ ಶಿಕ್ಷಣಕ್ಕೆ ಪ್ರಥಮ ಸ್ಥಾನ, ಅದೇ ಪ್ರಾಥಮಿಕ ಶಿಕ್ಷಣ. ಆ ತಳಹದಿಯ ಮೇಲೆ ಕಟ್ಟಿದ ಕಟ್ಟಡ ಭದ್ರ, ಶಾಶ್ವತ.

**ಓದುಗ :** ಸ್ವರಾಜ್ಯ ಪ್ರಾಪ್ತಿಗೆ ಇಂಗ್ಲಿಷ್ ಶಿಕ್ಷಣ ಅತ್ಯಗತ್ಯವಿಲ್ಲ ಎಂದು ನಿಮ್ಮ ಅಭಿಪ್ರಾಯವೇ?

**ಸಂಪಾದಕ :** ಹೌದು – ಅಲ್ಲ. ಎರಡೂ ಉತ್ತರ ನನ್ನದು. ಕೋಟಿಗಟ್ಟಲೆ ಜನರಿಗೆ ಇಂಗ್ಲಿಷ್ ಕಲಿಸುವುದು ಅವರನ್ನು ಗುಲಾಮರಾಗಿ ಮಾಡಿದಂತೆ. ಮೆಕಾಲೆ ಹಾಕಿದ ಶಿಕ್ಷಣದ ತಳಹದಿ ನಮ್ಮನ್ನು ಗುಲಾಮಗಿರಿಗೆ ಮಾಡಿದಂತೆ. ಆತನಿಗೆ ಆ ಉದ್ದೇಶ್ಯವಿತ್ತೆಂದು ನನ್ನ ಅಭಿಪ್ರಾಯವಲ್ಲ. ಪರಿಣಾಮವೇನೋ ಅದೇ. ಸ್ವರಾಜ್ಯವನ್ನು ಕುರಿತು ನಾವು ಪರಭಾಷೆಯಲ್ಲಿ ಮಾತಾಡಬೇಕಾಗಿದೆ. ಇದೇ ಸಾಲದೆ ನಮ್ಮ ದುರ್ದೆಶೆಗೆ ಸಾಕ್ಷಿ?

ಇನ್ನೊಂದು ಗಮನೀಯ ಅಂಶವಿದೆ. ಯೂರೋಪಿನಲ್ಲಿ ಕೈಬಿಟ್ಟ ಪದ್ಧತಿಗಳು ನಮಗೆ ಶಿರೋಧಾರ್ಯ–ಇಂಗ್ಲಿಷ್ ವಿದ್ವಾಂಸರು ಸದಾ ಶಿಕ್ಷಣ ಪದ್ಧತಿಯನ್ನು ಬದಲಿಸುತ್ತಿರುತ್ತಾರೆ. ಅವರು ವರ್ಜಿಸಿದ ಪದ್ಧತಿಯನ್ನೇ ನಾವು ತಬ್ಬಿಕೊಳ್ಳುತ್ತೇವೆ. ಅಲ್ಲಿ ಪ್ರತಿಯೊಂದು ಪ್ರದೇಶವೂ ವೃದ್ಧಿಯಾಗುವಂತೆ ಯತ್ನ ನಡೆದಿದೆ. ವೇಲ್ಸ್ ಇಂಗ್ಲೆಂಡಿನಲ್ಲಿ ಒಂದು ಚಿಕ್ಕ ಪ್ರದೇಶ, ವೇಲ್ಸ್ ಜನರಲ್ಲಿ ಆ ಭಾಷೆ ವೃದ್ಧಿಯಾಗುವಂತೆ ಪ್ರಯತ್ನ ನಡೆದಿದೆ. ವೇಲ್ಸ್ ಮಕ್ಕಳು ತಮ್ಮ ತಾಯಿ ನುಡಿಯನ್ನೇ ಬಳಸುವಂತೆ ಚಳವಳಿ ನಡೆದಿದೆ. ಅದಕ್ಕೆ ಇಂಗ್ಲೆಂಡಿನ ಕೋಶಾಧ್ಯಕ್ಷ ಮಿ. ಲಾಯಡ್ ಜಾರ್ಜ್ ಮುಂದಾಳು, ನಮ್ಮ ಸ್ಥಿತಿ ಹೇಗಿದೆ ಇತ್ತ? ಒಬ್ಬರಿಗೊಬ್ಬರು ತಪ್ಪು ತಪ್ಪು ಇಂಗ್ಲಿಷಿನಲ್ಲಿ ಪತ್ರ ಬರೆಯುತ್ತೇವೆ. ಎಂ.ಎ. ಮಾಡಿದವರೂ ಈ ತಪ್ಪು ಮಾಡುತ್ತಾರೆ. ನಮ್ಮ ಉತ್ತಮ ವಿಚಾರಗಳೆಲ್ಲ ಇಂಗ್ಲಿಷಿನಲ್ಲಿ ವ್ಯಕ್ತವಾಗಬೇಕು. ನಮ್ಮ ಕಾಂಗ್ರೆಸ್ಸಿನ ಕಾರ್ಯಕ್ರಮ ಇಂಗ್ಲಿಷಿನಲ್ಲಿ ನಡೆಯುತ್ತದೆ. ನಮ್ಮ ಸರ್ವೋತ್ತಮ ಪತ್ರಿಕೆಗಳು ಇಂಗ್ಲಿಷಿನಲ್ಲಿ. ಈ ಪರಿಸ್ಥಿತಿ ಬಹುಕಾಲ ನಡೆದರೆ, ಮುಂದಿನ ಪೀಳಿಗೆ ನಮ್ಮನ್ನು ಶಪಿಸಿಯಾರು. ಇದು ನನ್ನ ದೃಢಾಭಿಪ್ರಾಯ.

ಈ ಇಂಗ್ಲಿಷ್ ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೆ ಈಡು ಮಾಡಿದ್ದೇವೆಂಬುದು ಗಮನಿಸಬೇಕಾದ ಮಾತು. ರಾಗದ್ವೇಷ, ಅಸತ್ಯ, ದೌರ್ಜನ್ಯಗಳು ಹೆಚ್ಚಿವೆ. ಇಂಗ್ಲಿಷ್ ಕಲಿತ ಭಾರತೀಯರು ಜನರನ್ನು ಮೋಸಗೊಳಿಸಲು, ಬೆದರಿಸಲು ನಿಸ್ಸಂದೇಹವಾಗಿ ಯತ್ನಿಸಿದ್ದಾರೆ. ಈಗ ಸಾಮಾನ್ಯರಿಗಾಗಿ ಏನಾದರೂ ಮಾಡುತ್ತಿದ್ದರೆ,

ಅವರ ಋಣ ತೀರಿಸುತ್ತಿದ್ದೇವೆ ಅಷ್ಟೇ.

ಆಧುನಿಕತೆ ನಾಗರಿಕತೆಯ ರೋಗಕ್ಕೆ ನಾವು ಪೂರಾ ತುತ್ತಾಗಿದ್ದೇವೆ. ಆದುದರಿಂದ ಇಂಗ್ಲಿಷನ್ನು ಸಂಪೂರ್ಣವಾಗಿ ಬಿಡಲು ಆಗುವುದಿಲ್ಲ. ಈಗಾಗಲೇ ಇಂಗ್ಲಿಷ್ ಕಲಿತವರು ಅಗತ್ಯವಾದಲ್ಲೆಲ್ಲ ಅದನ್ನು ಉಪಯೋಗಿಸಲಿ. ಇಂಗ್ಲಿಷರೊಡನೆ ವ್ಯವಹರಿಸುವಾಗ ನಮ್ಮವರೊಡನೆ ಬೇರೆ ಭಾಷೆಯಲ್ಲಿ ಪತ್ರ ವ್ಯವಹಾರ ಮಾಡಲು ಸಾಧ್ಯವಿಲ್ಲದಲ್ಲಿ ಇಂಗ್ಲಿಷರೇ ತಮ್ಮ ನಾಗರಿಕತೆಯ ಬಗ್ಗೆ ಎಷ್ಟು ಅಸಹ್ಯಪಟ್ಟು ಕೊಂಡಿದ್ದಾರೋ ತಿಳಿಯಲು ನಾವು ಇಂಗ್ಲಿಷನ್ನು ಕಲಿಯಬಹುದು. ಬಳಸಬಹುದು. ಇಂಗ್ಲಿಷ್ ಕಲಿತವರು ತಮ್ಮ ಸಂತಾನಕ್ಕೆ ತಮ್ಮ ತಾಯಿ ನುಡಿಯಲ್ಲಿ ನೀತಿಯನ್ನು ಕಲಿಸಬೇಕು. ಇನ್ನೊಂದು ಭಾರತೀಯ ಭಾಷೆಯನ್ನು ಕಲಿಸಬೇಕು. ಬೆಳೆದ ಮೇಲೆ ಅವರು ಇಂಗ್ಲಿಷ್ ಕಲಿತರೆ ಕಲಿಯಲಿ. ಆದರೆ ಇಂಗ್ಲಿಷ್ ನಮಗೆ ಅಗತ್ಯವಾಗಬಾರದೆಂಬುದು ನಮ್ಮ ಗುರಿ. ಅದನ್ನು ಕಲಿತು ಹಣಗಳಿಸುವ ಉದ್ದೇಶವನ್ನು ಬಿಡಬೇಕು. ಇಷ್ಟು ಮಿತವಾಗಿ ಇಂಗ್ಲಿಷನ್ನು ಕಲಿತರೂ ಏನು ಕಲಿಯಬೇಕು. ಇಂಗ್ಲಿಷಿನಲ್ಲಿ ಏನು ಕಲಿಯಬಾರದು ಎಂಬುದನ್ನು ಯೋಚಿಸಬೇಕು. ಯಾವ ವಿಜ್ಞಾನಶಾಸ್ತ್ರವನ್ನು ಕಲಿಯಬೇಕೋ ತಿಳಿದುಕೊಳ್ಳುವುದು ಅಗತ್ಯ. ಇಂಗ್ಲಿಷ್ ಪ್ರಶಸ್ತಿಗಳನ್ನು ನಾವು ಸ್ವಲ್ಪ ಅಸಡ್ಡೆ ಮಾಡಲಿ, ಆಡಳಿತಗಾರರ ಕಿವಿ ನೆಟ್ಟಗಾದೀತು.

ಹಿಂದುಸ್ಥಾನ ತನ್ನ ಪೂರ್ವ ಸ್ಥಿತಿಗೆ ಬರಬೇಕು ಎಂದರೆ ನಾವು ಮೊದಲು ಪೂರ್ವ ಸ್ಥಿತಿಗೆ ಹಿಂದಿರುಗಬೇಕು. ನಮ್ಮ ಸಭ್ಯತೆಯಲ್ಲಿಯೂ ಉನ್ನತಿ – ಅವನತಿ ಪ್ರಗತಿ ತಿರೋಗತಿ ಇದ್ದೇ ಇರುತ್ತವೆ; ಆದರೆ ಒಂದು ಮುಖ್ಯ ಪ್ರಯತ್ನ ನಡೆಯಬೇಕು; ಪಶ್ಚಿಮದ ನಾಗರಿಕತೆಯನ್ನು ಓಡಿಸುವ ಪ್ರಯತ್ನ. ಉಳಿದುದೆಲ್ಲ ತಾನೇ ಆಗುತ್ತದೆ.

* * *

ಓದು ಪತ್ರ

# ಹೋರಾಟದ ಹಾದಿ

**–ಡಾ॥ ಎಚ್. ನರಸಿಂಹಯ್ಯ**

ಇದು ನನ್ನ 'ಆತ್ಮಕಥೆ'ಯ ಕೊನೆಯ ಅಧ್ಯಾಯ. ನಾನು ನಡೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡಿದಾಗ ನನ್ನ ಜೀವನವೇ ಒಂದು ಪವಾಡ ಅಂತ ಅನ್ನಿಸುತ್ತದೆ. ಕೆಲವು ಮುಖ್ಯ ಘಟನೆಗಳೂ ನನ್ನ ಜೀವನಕ್ಕೆ ಹೊಸ ಅರ್ಥಪೂರ್ಣ ತಿರುವುಗಳನ್ನು ಕೊಟ್ಟಿವೆ. ನಾನು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವ್ಯಾಸಂಗ ಮುಂದುವರಿಸಲು ಸೌಲಭ್ಯಗಳಿಲ್ಲದ ಪ್ರಯುಕ್ತ ನನ್ನ ವಿದ್ಯಾಭ್ಯಾಸಕ್ಕೆ ಇತಿಶ್ರೀ ಹಾಡಿದಾಗ ಒಂದು ವರ್ಷ ಆದಮೇಲೆ ಹೊಸೂರು ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಂ.ಎಸ್. ನಾರಾಯಣರಾಯರು ನನ್ನನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕರೆ ತಂದದ್ದು ನನ್ನ ಜೀವನದಲ್ಲಿಯೇ ನಡೆದ ಅತ್ಯಂತ ಪ್ರಮುಖ ಘಟನೆ. ಅದು ಆಗದೇ ಇದ್ದಿದ್ದರೆ ನನ್ನ ವಿದ್ಯಾಭ್ಯಾಸ ಮುಂದುವರಿಯಲು ಸಾಧ್ಯವೇ ಇರುತ್ತಿರಲಿಲ್ಲ. ಇನ್ನೇನು ಬಿ.ಎಸ್‌ಸಿ. ಆನರ್ಸ್ ಡಿಗ್ರಿ ಕೈಗೆಟುಕುವಷ್ಟು ದೂರದಲ್ಲಿದ್ದಾಗ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಧುಮುಕಲು ಮತ್ತು ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕನಾದ ಒಂದು ವರ್ಷಕ್ಕೇ 'ಮೈಸೂರು ಚಲೊ' ಚಳವಳಿಯಲ್ಲಿ ಭಾಗವಹಿಸಲು ಕೆಲಸಕ್ಕೆ ರಾಜೀನಾಮೆ ಕೊಟ್ಟ ಧೈರ್ಯದ ನಿರ್ಧಾರಗಳು ಈಗ ನಾನು ನಡೆದು ಬಂದ ದಾರಿಯ ದಿಕ್ಕನ್ನೇ ಬದಲಿಸಬಹುದಾಗಿದ್ದ ಘಟನೆಗಳು.ಇವೆಲ್ಲಾ ಆಕಸ್ಮಿಕ ಘಟನೆಗಳೋ ಅಥವಾ ವ್ಯವಸ್ಥಿತ ಘಟನೆಗಳೋ ನನಗೆ ಗೊತ್ತಿಲ್ಲ. ಜೀವನವಿಧಾನಕ್ಕೆ ತಿರುವು ಕೊಡಬಹುದಾದ ಇಂತಹವೇ ಇನ್ನೂ ಕೆಲವು ಇವೆ. ಇಂತಹ ಘಟನೆಗಳು ಇನ್ನೂ ಕೆಲವರ ಜೀವನದಲ್ಲಿಯೂ ಇರಬಹುದು.

ನಾನು ಚಿಕ್ಕವನಾಗಿದ್ದಾಗ ಮಹಾತ್ಮಾ ಗಾಂಧಿ, ಜವಾಹರಲಾಲ್

ನೆಹರು ಮುಂತಾದ ರಾಷ್ಟ್ರ ನಾಯಕರು ನನ್ನ ಚಿಂತನೆಯನ್ನು, ಮೌಲ್ಯಗಳನ್ನು ರೂಪಿಸಿದರು. ನಾನು ಎಲ್ಲವನ್ನೂ ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ಆದುದರಿಂದಲೇ ನಾನು 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿದ್ದು. ಶ್ರೀ ರಾಮಕೃಷ್ಣಾಶ್ರಮದಲ್ಲಿ ಎರಡು ವರ್ಷ ಇದ್ದಾಗ ಸ್ವಾಮಿ ವಿವೇಕಾನಂದರು ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿದರು. ನಿಸ್ವಾರ್ಥ ಸೇವೆಯೇ ಇವರ ಮುಖ್ಯ ಸಂದೇಶ. ಸ್ವಾಮಿ ವಿವೇಕಾನಂದರ 'ಪರರಿಗಾಗಿ ಯಾರು ಬದುಕುತ್ತಾರೋ ಅವರದೇ ನಿಜವಾದ ಬದುಕು. ಉಳಿದವರು ಜೀವಂತ ಶವಗಳು' ಅನ್ನುವ ಹೇಳಿಕೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇದೆ. ಒಂದೆರಡು ವರ್ಷ ಸಾವಧಾನವಾಗಿ ಯೋಚಿಸಿ ಎಲ್ಲಾ ಸಾಧಕ–ಬಾಧಕಗಳನ್ನು ಗಣನೆಗೆ ತೆಗೆದುಕೊಂಡು ಮದುವೆ ಆಗಬಾರದೆಂದು ಅಂತಿಮ ನಿರ್ಧಾರ ತೆಗೆದುಕೊಂಡೆ. ಇದೂ ಕೂಡ ನಾನು ತೆಗೆದುಕೊಂಡ ಅತ್ಯಂತ ಮುಖ್ಯ ನಿರ್ಧಾರಗಳಲ್ಲಿ ಒಂದು.

ನಾನು ಭಾನುವಾರ ಹುಟ್ಟಿದ್ದು. ಆದರೆ ಜೀವನದಲ್ಲಿ ನನಗೆ ಭಾನುವಾರವೇ ಇಲ್ಲ ಎಂದು ಹಿಂದೆ ಎಲ್ಲಿಯೋ ಹೇಳಿದ್ದೇನೆ. ಇದು ಅಕ್ಷರಶಃ ನಿಜ. ಇಲ್ಲಿಯ ತನಕ ನನಗೆ ಯಾವ ಭಾನುವಾರವೂ ಇಲ್ಲ. ರಜಾ ದಿವಸವೂ ಇಲ್ಲ. ನಾನು ಮಾಡುವ ಕೆಲಸ ಹೆಚ್ಚಿನ ಶ್ರಮದಿಂದ ಕೂಡಿದ್ದರೂ ನನಗೆ ಅತ್ಯಂತ ತೃಪ್ತಿ ಸಮಾಧಾನ ಕೊಟ್ಟಿದೆ. ಇಷ್ಟೆಲ್ಲಾ ಆದರೂ ಒಂಟಿತನದ ಯೋಚನೆ ಆಗಾಗ ಬರುತ್ತದೆ. ಆದರೆ ಆ ಯೋಚನೆಯ ಕಾಲಾವಧಿ ಕಡಿಮೆ. ಬೆಳಗ್ಗೆಯಿಂದ ಸಂಜೆ ೭–೮ ಗಂಟೆಯ ತನಕ ಕೆಲಸ, ಊಟವಾದ ಮೇಲೂ ಓದುವ, ಮಾಡುವ ಕೆಲಸ ಇದ್ದೇ ಇರುತ್ತದೆ. ಮಲಗಿದ ೫–೧೦ ನಿಮಿಷಗಳಿಗೆ ನಿದ್ರೆ ಬರುತ್ತದೆ. ಒಂದೆರೆಡು ವರ್ಷಗಳ ಹಿಂದೆ ಒಬ್ಬ ಮನಃಶಾಸ್ತ್ರದ ವೈದ್ಯರು ನಿಮಗೆ ನಿದ್ರೆ ಚೆನ್ನಾಗಿ ಬರುತ್ತದೆಯೇ ಎಂದು ಕೇಳಿದರು. ಮಲಗಿದ ಮೇಲೆ ೫–೧೦ ನಿಮಿಷ ಸಾಕು ಅಂದೆ. ನೀವೇ ಪುಣ್ಯಾತ್ಮರು ಅಂದರು.

ನಾನು ಮೊದಲಿನಿಂದಲೂ ಸ್ವತಂತ್ರವಾಗಿ ಯೋಚನೆ ಮಾಡುವ ಸ್ವಭಾವವನ್ನು ಅಭ್ಯಾಸ ಮಾಡಿಕೊಂಡು ಬಂದಿದ್ದೇನೆ. ಯಾವುದನ್ನೂ ಪ್ರಶ್ನೆ ಮಾಡದೆ ಒಪ್ಪಿಕೊಳ್ಳುವುದಿಲ್ಲ. ನಾನು ಮೂಢನಂಬಿಕೆಗಳ ಬಗ್ಗೆ

ನನ್ನ ಖಚಿತ ಅಭಿಪ್ರಾಯಗಳನ್ನು ಹಿಂದೆಯೇ ಸಾಕಷ್ಟು ವಿವರವಾಗಿ ತಿಳಿಸಿದ್ದೇನೆ. ಜ್ಯೋತಿಷ್ಯದ ಬಗ್ಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ತಿಳಿಸುವುದು ಸೂಕ್ತ ಅಂತ ಅನ್ನಿಸುತ್ತದೆ.

ಮನುಷ್ಯನ ಮೇಲೆ ಗ್ರಹಗಳ ಪರಿಣಾಮ ಇದೆ ಅನ್ನುವ ನಂಬಿಕೆಯ ಮೇಲೆ ಕಟ್ಟಿರುವ ಸೌಧವೇ 'ಜ್ಯೋತಿಷ್ಯದ ಪ್ರಕಾರ ನವಗ್ರಹಗಳಿವೆ. ಆ ಒಂಬತ್ತರಲ್ಲಿ ಸೂರ್ಯ, ಚಂದ್ರ, ರಾಹು, ಕೇತುಗಳು ಕೂಡಿಕೊಂಡು ಹೋಗಿವೆ. ವೈಜ್ಞಾನಿಕವಾಗಿ ಸೂರ್ಯ ಗ್ರಹ ಅಲ್ಲ. ಅದು ನಕ್ಷತ್ರ, ಚಂದ್ರ ಉಪಗ್ರಹ. ಸೂರ್ಯ ಮಂಡಲದಲ್ಲಿ ರಾಹು ಕೇತುಗಳೇ ಇಲ್ಲ. ಈ ವಿಷಯಗಳೆಲ್ಲಾ ಒಬ್ಬ ಹೈಸ್ಕೂಲು ವಿದ್ಯಾರ್ಥಿಗೂ ಗೊತ್ತಿದೆ. ಜ್ಯೋತಿಷಿಗಳ ಒಂಬತ್ತು ಗ್ರಹಗಳಲ್ಲಿ ನಾಲ್ಕು ತಪ್ಪು ಲೆಕ್ಕಾಚಾರದಿಂದ ಕೂಡಿವೆ. ಅಲ್ಲಿಗೆ ಜ್ಯೋತಿಷ್ಯದ ಕಥೆ ಮುಗಿಯಿತಲ್ಲ !' ಅದಕ್ಕೆ ಬುಡವೇ ಭದ್ರ ಇಲ್ಲದ ಹಾಗಾಯಿತು. ಆದುದರಿಂದ ಅದರ ಮೇಲೆ ಕಟ್ಟಿರುವ ಜ್ಯೋತಿಷ್ಯ ಎಂಬ ಸೌಧ ಕುಸಿದು ಬಿದ್ದಿದೆ.

ರಾಹುವೇ ಇಲ್ಲದ ಮೇಲೆ ರಾಹುಕಾಲ ಎಲ್ಲಿ ಬಂತು? ರಾಹುಕಾಲ ಕೆಟ್ಟದ್ದು ಅನ್ನುವ ಭಾವನೆ ಬಹುಜನರಲ್ಲಿದೆ. ಅದು ನಿಜವಾದರೆ ರಾಹುಕಾಲದಲ್ಲಿ ಹೊರಡುವ ಬಸ್ಸುಗಳಿಗೆ, ರೈಲುಗಳಿಗೆ, ವಿಮಾನಗಳಿಗೆ ಅಪಘಾತಗಳಾಗಬೇಕು. ಅಪಘಾತಗಳಿಗೂ ರಾಹುಕಾಲಕ್ಕೂ ಯಾವ ಸಂಬಂಧವೂ ಇಲ್ಲ. ಜಾತಕಗಳು ಕೂಡ ಜ್ಯೋತಿಷ್ಯದ ಆಧಾರದ ಮೇಲೆ ರಚಿತವಾಗಿವೆ. ಮಗು ಹುಟ್ಟಿದಾಗ ಗ್ರಹಗಳ ಸ್ಥಾನಗಳ ಆಧಾರದ ಮೇಲೆ ಜಾತಕ ಬರೆಯುತ್ತಾರೆ. ಆ ಜಾತಕದಲ್ಲಿ ಮಗುವಿನ ಜೀವನದಲ್ಲಿ ಎಲ್ಲಾ ಸಾಧನೆಗಳು, ಪ್ರಮುಖ ಘಟ್ಟಗಳು ಅಡಕವಾಗಿವೆ ಎಂಬ ನಂಬಿಕೆ ಇದೆ. ಇದೂ ಶುದ್ಧ ಸುಳ್ಳು. ವಿಮಾನದ ಅಪಘಾತದಲ್ಲಿ ಸಾಯುವ ನೂರಾರು ಮಂದಿಯ ಜಾತಕಗಳಲ್ಲಿ ಅವರೆಲ್ಲಾ ಹೀಗೇ ಸಾಯುತ್ತಾರೆ ಎಂದು ಯಾವ ಜ್ಯೋತಿಷಿಯೂ ಬರೆಯಲು ಸಾಧ್ಯವೇ ಇಲ್ಲ. ೧೯೬೨ರಲ್ಲಿ ಆದ ಅಷ್ಟಗ್ರಹ ಕೂಟದಿಂದ ಅನಾಹುತ ಆಗುತ್ತದೆ ಎಂದು ಬೊಬ್ಬೆ ಹೊಡೆದ ಜ್ಯೋತಿಷಿಗಳ ಭವಿಷ್ಯ ಮಣ್ಣು ಮುಕ್ಕಿತು. ಜ್ಯೋತಿಷಿ ಹೇಳುವುದು ಅಸ್ಪಷ್ಟ, ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ.

ಆಟೋರಿಕ್ಷಾ ಪಕ್ಕದಲ್ಲಿ ರಭಸದಿಂದ ಹಾದುಹೋದರೆ ವಾಹನ ಭಯದ ಭವಿಷ್ಯ ನಿಜವಾಯಿತೆಂದು ತೃಪ್ತಿ ಪಟ್ಟುಕೊಳ್ಳಬಹುದು. ಒಂದೊಂದು ಸಲ ಕಾಕತಾಳೀಯವಾಗಿ ಜ್ಯೋತಿಷ್ಯ ನಿಜವಾಗಬಹುದು. ಕೆಟ್ಟು ಹೋದ ಗಡಿಯಾರವೂ ದಿನಕ್ಕೆ ಎರಡು ಸಲ ಸರಿಯಾದ ಕಾಲವನ್ನು ತೋರಿಸುತ್ತದೆ !

ಬಹುಜನರಿಗೆ ಜ್ಯೋತಿಷ್ಯದಲ್ಲಿ ಹೇಗೆ ನಂಬಿಕೆ ಇದೆಯೋ ಹಾಗೆಯೇ ಪೂಜೆ ಮತ್ತು ಪ್ರಾರ್ಥನೆಗಳಿಂದ ವ್ಯಕ್ತಿಗಳ ಮತ್ತು ಸಮಾಜದ ಕಲ್ಯಾಣವಾಗುತ್ತದೆಂಬ ನಂಬಿಕೆಯೂ ವ್ಯಾಪಕವಾಗಿ ಹಬ್ಬಿದೆ. ಸ್ವತಂತ್ರವಾಗಿ ಯೋಚಿಸಿದಾಗ ಇವುಗಳಿಗೆ ಅರ್ಥವಿಲ್ಲ. ನಮ್ಮ ಯಾವುದೇ ಯಶಸ್ಸಿಗೂ ಪೂಜೆ, ಪ್ರಾರ್ಥನಾದಿಗಳಿಗೂ ಸಂಬಂಧವೇ ಇಲ್ಲ. ಪ್ರಪಂಚದಲ್ಲಿ ಲಕ್ಷಾಂತರ ಮಂದಿ ಚಿಂತಕರೂ, ದಾರ್ಶನಿಕರೂ, ರಾಜಕಾರಣಿಗಳೂ ಪೂಜಾ ಪ್ರಾರ್ಥನಾದಿಗಳ ಸಹಾಯವಿಲ್ಲದೆ ಗಣನೀಯವಾದ ಸ್ಥಾನಗಳನ್ನು ಗಳಿಸಿದ್ದಾರೆ. ವಿಶ್ವವಿಖ್ಯಾತ ಐನ್‌ಸ್ಟೀನ್, ಬರ್ಟರಂಡ್ ರಸಲ್ ಅಂತಹವರಿಗೂ, ಇಂತಹ ನಂಬಿಕೆಗಳಿಗೂ ಸಂಬಂಧವೇ ಇಲ್ಲ. ದೇವಸ್ಥಾನಕ್ಕೆ ಹೋಗದೆ, ಆಜ್ಞೇಯತಾವಾದಿ (Agnostic) ಜವಾಹರಲಾಲ್ ನೆಹರುರವರು ೧೭ ವರ್ಷ ಪ್ರಧಾನಿಗಳಾಗಿದ್ದರು. ಅಂತೆಯೇ ನಾಸ್ತಿಕ ಜ್ಯೋತಿ ಬಸು ಸುಮಾರು ೧೭ ವರ್ಷ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದಾರೆ. ಇವರಿಬ್ಬರೂ ತಮ್ಮ ಅಧಿಕಾರಾವಧಿಯ ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಇಂತಹ ನಿದರ್ಶನಗಳು ಬೇಕಾದಷ್ಟಿವೆ.

ಇನ್ನೊಂದು ಅಸಹನೀಯ ವಿಷಯವೆಂದರೆ ದೇವರಿಗೆ ವಜ್ರ ವೈಢೂರ್ಯದ, ಚಿನ್ನ ಬೆಳ್ಳಿಯ ಒಡವೆಗಳನ್ನು ಹಾಕಿ ಶೃಂಗರಿಸುವುದು; ದೇವರಿಗೆ ಇದೆಲ್ಲಾ ಏಕೆ? ಒಂದು ವಿಪರ್ಯಾಸದ ವಿಷಯ ಎಂದರೆ ಇಂತಹ ಶ್ರೀಮಂತ ದೇವರುಗಳ ಅಮೂಲ್ಯವಾದ ಒಡವೆಗಳನ್ನು ನಾವು ಮನುಷ್ಯರು ಕಾಪಾಡಬೇಕಾಗಿದೆ. ತನ್ನನ್ನು ತಾನೇ ಕಾಪಾಡಿಕೊಳ್ಳಲಾರದ ದೇವರು ನಮ್ಮನ್ನು ಹೇಗೆ ಕಾಪಾಡುತ್ತಾನೆ? ನಮ್ಮನ್ನು ನಾವೇ ಕಾಪಾಡಿಕೊಳ್ಳಬೇಕು.

ವಿಶ್ವಶಾಂತಿಗಾಗಿ ಯಜ್ಞ–ಯಾಗಾದಿಗಳನ್ನು ನಮ್ಮ ದೇಶದಲ್ಲಿ ಆಚರಿಸುತ್ತಲೇ ಇದ್ದಾರೆ. ವಿಶ್ವದ ಹಲವು ದೇಶಗಳಲ್ಲಿ ಸುಖ–ಶಾಂತಿಗಳಿವೆ. ನಮ್ಮ ದೇಶದಲ್ಲಿಯೇ ಸದಾ ಹಿಂಸೆ ಅಶಾಂತಿ. ಹಾಗಾದರೂ ವಿಶ್ವ ಶಾಂತಿಯ ಹೆಸರಿನಲ್ಲಿ ಸಾಕಷ್ಟು ಶೋಷಣೆ, ಅಮೂಲ್ಯ ವಸ್ತುಗಳ ದಹನ ಅವ್ಯಾಹತವಾಗಿ ನಡೆಯುತ್ತಲೇ ಇದೆ.

ನದಿಗಳಲ್ಲಿ, 'ಪವಿತ್ರ' ನದಿಗಳಲ್ಲಿ ಸ್ನಾನಮಾಡಿದರೆ ಪುಣ್ಯ ಬರುತ್ತದೆ ಎನ್ನುವುದು ಇನ್ನೊಂದು ಮೂಢ ನಂಬಿಕೆ. ವರ್ಷದ ಕೆಲವು ದಿನಗಳಲ್ಲಿ 'ಪವಿತ್ರ' ನದಿಗಳಲ್ಲಿ ಸ್ನಾನ ಮಾಡಿ ಪುಣ್ಯ ಕಟ್ಟಿಕೊಳ್ಳಲು ನೂಕುನುಗ್ಗಲು. ಗಂಗಾನದಿ ಅತ್ಯಂತ ಪವಿತ್ರ ಎನ್ನುವ ನಂಬಿಕೆ ವೈಜ್ಞಾನಿಕವಾಗಿ ಸಾಬೀತಾಗಿದೆ. ಗಂಗಾನದಿಯನ್ನು ನಾವೇ ಶುದ್ಧೀಕರಣ ಮಾಡಬೇಕಾದ ಪರಿಸ್ಥಿತಿ ಬಂದೊದಗಿದೆ. ಚರ್ಮ ತೊಳೆದರೆ ಕರ್ಮ ಹೋಗುತ್ತದೆಯೇ?

ನಮ್ಮಲ್ಲಿ ನಿದರ್ಶನಕ್ಕಿಂತ ಪ್ರದರ್ಶನವೇ ಹೆಚ್ಚು. ಜವಾನನಿಂದ ಹಿಡಿದು ರಾಷ್ಟ್ರಪತಿಯವರೆಗೆ ಹಲವರು ತಮ್ಮ ತಲೆ ಕೂದಲನ್ನು ದೇವರಿಗೆ ಕೊಡುತ್ತಾರೆ. ಮಂಡೆ ಬೋಳಾಗುವುದಕ್ಕಿಂತ ಮನ ಬೋಳಾಗುವುದು ಮುಖ್ಯ. ಹೀಗೆಯೇ ಸಾಕಷ್ಟು ಮೂಢನಂಬಿಕೆಗಳ ಪ್ರಸ್ತಾಪವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಸೂಕ್ತ. ಭಯ ಮತ್ತು ವೈಚಾರಿಕತೆಯ ಅಭಾವವೇ ಮೂಢ ನಂಬಿಕೆಗಳ ಬಂಡವಾಳ.

ನಾನು ಹೀಗೆ ಮೂಢನಂಬಿಕೆಗಳನ್ನು, ಪವಾಡಗಳನ್ನು ಅರ್ಥವಿಲ್ಲದ ಸಂಪ್ರದಾಯಗಳನ್ನು ಟೀಕಿಸಿದರೆ ಅನೇಕರಿಗೆ ಅನುಮಾನ ಬಂದು ನನಗೆ ದೇವರಲ್ಲಿ ನಂಬಿಕೆ ಇದೆಯೇ ಎಂದು ಕೇಳುತ್ತಾರೆ. ಬಹುಜನರು ತಮ್ಮ ಸ್ವಾರ್ಥಕ್ಕಾಗಿ ದೇವರನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ. ಇಂತಹ ಲೇವಾ–ದೇವಿ ದೇವರಲ್ಲಿ ನನಗೆ ನಂಬಿಕೆ ಇಲ್ಲ. ಆದರೆ ಒಂದು ಪ್ರಜ್ಞಾವಂತ ವಿಶ್ವ ನಿಯಮ ಇರಬಹುದು ಎನ್ನುವುದು ನನ್ನ ನಂಬಿಕೆ. ದೇವರು ಇದ್ದಾನೆಯೇ ಇಲ್ಲವೇ ಅನ್ನುವ ಸಮಸ್ಯೆ ಶತಮಾನಗಳಿಂದ ಬುದ್ಧಿಜೀವಿಗಳನ್ನು ಕಾಡುತ್ತಿದೆ. ಎಷ್ಟೇ ಯೋಚನೆ, ಚಿಂತನೆ, ಸಮಾಲೋಚನೆ ಮಾಡಿದರೂ ಈ ಸಮಸ್ಯೆಗೆ ಉತ್ತರ ಸಿಕ್ಕಿಲ್ಲ. ದೇವರು ಇದ್ದಾನೆ ಅಥವಾ ಇಲ್ಲ ಎನ್ನುವುದು ನಂಬಿಕೆಯಾಗುತ್ತದೆ.

ದೇವರು ಇದ್ದಾನೆ ಎನ್ನುವುದನ್ನು ವೈಜ್ಞಾನಿಕವಾಗಿ ರುಜುವಾತು ಮಾಡಲು ಸಾಧ್ಯವಿಲ್ಲ. ಹಾಗೆಯೇ ಇಲ್ಲ ಅಂತಲೂ ದೃಢಪಡಿಸಲು ಆಗುವುದಿಲ್ಲ. ಅದಕ್ಕಾಗಿಯೇ ಪ್ರಪಂಚದ ಅನೇಕ ಮಂದಿ ಚಿಂತಕರು, ತತ್ವಜ್ಞಾನಿಗಳು, ಅಜ್ಞೇಯತಾವಾದಿಗಳು ದೇವರು ಇದ್ದಾನೆ ಅಂತಲೂ ಹೇಳುವುದಿಲ್ಲ, ಇಲ್ಲ ಎಂದೂ ಹೇಳುವುದಿಲ್ಲ. "ದೇವರು, ಆತ್ಮದ ಬಗ್ಗೆ ಚರ್ಚೆ ಮಾಡುವುದು ವ್ಯರ್ಥ, ಆದುದರಿಂದ ಒಳ್ಳೆಯದನ್ನು ಮಾಡು ಮತ್ತು ಒಳ್ಳೆಯವನಾಗು" ಎಂದು ಬುದ್ಧ ಪದೇ ಪದೇ ಅವನ ಶಿಷ್ಯರಿಗೆ ಬೋಧಿಸುತ್ತಿದ್ದನು. ಇದು ಅತ್ಯಂತ ವ್ಯಾವಹಾರಿಕ ಉಪದೇಶ. ದೇವರಿರಲಿ ಇಲ್ಲದೇ ಹೋಗಲಿ ಮನುಷ್ಯ ಇದ್ದಾನಲ್ಲ. ಆದುದರಿಂದ ನಮ್ಮ ಧರ್ಮಕ್ಕೆ ಮನುಷ್ಯನು ಕೇಂದ್ರ ಬಿಂದುವಾಗಬೇಕು. ದೇವರಲ್ಲಿ ನಿಜವಾಗಿಯೂ ನಂಬಿಕೆ ಇದ್ದರೆ ಅವರು ಕೆಟ್ಟ ಕೆಲಸ ಮಾಡಬಾರದು; ಲಂಚ ತೆಗೆದುಕೊಳ್ಳಬಾರದು; ಕರ್ತವ್ಯಪ್ರಜ್ಞೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.

ಸ್ವರ್ಗ, ಮೋಕ್ಷ ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಅವುಗಳ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಅವುಗಳು ಇದ್ದರೂ, ನನಗೆ ಸ್ವರ್ಗವೂ ಬೇಕಿಲ್ಲ, ಮೋಕ್ಷವೂ ಬೇಕಿಲ್ಲ. ಕೋಟ್ಯಂತರ ಮಂದಿ ಈ ಪ್ರಪಂಚದಲ್ಲಿ ಕಷ್ಟ ಕಾರ್ಪಣ್ಯದಲ್ಲಿ ಸಿಕ್ಕಿ ಬಳಲುತ್ತಿರುವಾಗ ಅವರನ್ನೆಲ್ಲಾ ಬಿಟ್ಟು ನಾನು ಸ್ವರ್ಗಕ್ಕೆ ಹೋಗಬೇಕೆಂಬ ಆಸೆ ಇಲ್ಲ. ಸ್ವರ್ಗದಲ್ಲಿ ಮಾಡುವುದಕ್ಕೆ ಕೆಲಸವಿಲ್ಲ. ಎದುರಿಸುವುದಕ್ಕೆ ಸಮಸ್ಯೆ, ಸವಾಲುಗಳಿಲ್ಲ, ಪವಾಡಪುರುಷರಿಲ್ಲ ಅಂದಮೇಲೆ ಅಲ್ಲಿ ಸುಮ್ಮನೆ ಕುಳಿತುಕೊಂಡು ಏನು ಮಾಡುವುದು? ಪುನರ್ಜನ್ಮ ಇದ್ದರೆ ನನಗೆ ಮುಂದಿನ ಜನ್ಮಗಳಲ್ಲಿ ಒಳ್ಳೆಯ ಆರೋಗ್ಯ ಕೊಟ್ಟು ನಿರಂತರವಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದರೆ ಸಾಕು, ನನಗಿನ್ನೇನೂ ಬೇಕಾಗಿಲ್ಲ.

ನನ್ನ ಶವವನ್ನು ಸುಡಬೇಕು, ಬೆಂಗಳೂರಿನಲ್ಲಿಯೇ ಸುಡಬೇಕು. ತುಂಬಾ ದೂರದ ಸ್ಥಳದಲ್ಲಿ ಸತ್ತರೆ ಅಲ್ಲಿಯೇ ಸುಡಬಹುದು. ನನ್ನ ಕಣ್ಣುಗಳನ್ನು ಮಿಂಟೋ ಆಸ್ಪತ್ರೆಗೆ ಕೊಟ್ಟಿದ್ದೇನೆ. (ಇಡೀ ಶವವನ್ನೇ ಆಸ್ಪತ್ರೆಗೆ ಕೊಡಬೇಕೆಂದು ಯೋಚಿಸಿದ್ದೆ. ಆದರೆ ಕಾರಣಾಂತರಗಳಿಂದ

ಆ ಯೋಚನೆಯನ್ನು ಕೈಬಿಟ್ಟೆ.) ಯಾವ ಧಾರ್ಮಿಕ ಅಂತ್ಯ ಸಂಸ್ಕಾರಗಳಲ್ಲಿಯೂ ನನಗೆ ಸುತರಾಂ ನಂಬಿಕೆ ಇಲ್ಲ ಎಂದು ಹೇಳಬೇಕಾದ ಅಗತ್ಯವೇ ಇಲ್ಲ. ಬೂದಿಯನ್ನು ಸುಟ್ಟ ಜಾಗದಲ್ಲಿಯೇ ಬಿಡಬಹುದು, ಇಲ್ಲದಿದ್ದರೆ ಅದನ್ನು ಒಂದು ಮರದ ಬುಡದ ಕೆಳಗೆ ಹಾಕಬಹುದು. ಆದರೆ ಈಚಲಮರದ ಬುಡಕ್ಕೆ ಹಾಕಬೇಡಿ; ಇಡೀ ನನ್ನ ಜೀವನಮಾನದಲ್ಲಿ ಈಚಲ ಮರಕ್ಕೂ ನನಗೂ ಯಾವ ಸಂಬಂಧವೂ ಇಲ್ಲ. ಆದುದರಿಂದ ನನ್ನ ಬೂದಿ ಈಚಲ ಮರವನ್ನು ಪೋಷಿಸುವುದು ಸರಿಯಲ್ಲ. ನಾನು ಸತ್ತಾಗ ನಮ್ಮ ಯಾವ ಸಂಸ್ಥೆಗೂ ರಜಾ ಕೊಡಕೂಡದು.

ಶವಸಂಸ್ಕಾರವಾದ ಮೇಲೆ ನಾನು ನನ್ನ ಸಮಿತಿಯವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಲು ಆಗದ ಪ್ರಯುಕ್ತ ಮುಂಗಡವಾಗಿಯೇ ನನ್ನ ವಂದನೆಗಳನ್ನು ಉಯಿಲಿನಲ್ಲಿ ಬರೆದು ನನ್ನ ಕರ್ತವ್ಯ ಮಾಡಿದ್ದೇನೆ. ಅಲ್ಲಿಗೆ ಮುಗಿಯುತ್ತದೆ ನನ್ನ ಈ ಕಥೆ.

* * *

# ಕ್ರೀಡೆ

ಭೌತಿಕ ಸಂಸ್ಕೃತಿಯ ಮುಖ್ಯ ಭಾಗವಾದ ಕ್ರೀಡೆಯು ಬೌದ್ಧಿಕ ಮತ್ತು ದೈಹಿಕ ಚಟುವಟಿಕೆಯ ಸಂಯೋಜನೆಯಾಗಿದೆ. ಬುದ್ಧಿವಂತಿಕೆಯ ಮಟ್ಟವನ್ನು ಹೆಚ್ಚಿಸುವುದು, ನೈತಿಕ ತೃಪ್ತಿಯನ್ನು ಪಡೆಯುವುದು ಮತ್ತು ವೈಯಕ್ತಿಕ ಗುಣಗಳನ್ನು ಸುಧಾರಿಸುವುದು ಕ್ರೀಡೆಯಿಂದಾಗುವ ಪ್ರಯೋಜನಗಳು. ಮಾನವ ಕುಲದ ಅಸ್ತಿತ್ವದ ಉದ್ದಗಲಕ್ಕೂ ಕ್ರೀಡೆ ಅಸ್ತಿತ್ವದಲ್ಲಿದ್ದು ನಾಗರಿಕತೆಯ ವಿಕಾಸದ ಅಧ್ಯಯನಕ್ಕೂ ಇದು ನೆರವಿಗೆ ಬಂದಿದೆ. ಶಿಲಾಯುಗದ ಜನರು ಗುಹೆಗಳ ಮೇಲೆ ಕ್ರೀಡೆಗಳನ್ನು ಚಿತ್ರಿಸಿರುವ ರೀತಿ ಮತ್ತು ಕ್ರೀಡೆಗಳನ್ನು ನೆನಪಿಗೆ ತರುವಂತಹ ಆಚರಣೆಗಳಲ್ಲಿ ಪಾಲ್ಗೊಳ್ಳುವ ಚಿತ್ರಣಗಳು ಇದಕ್ಕೆ ಪೂರಕವಾಗಿವೆ.

ಒಲಿಂಪಿಕ್ ಕ್ರೀಡೆಗಳು ಪ್ರಾರಂಭವಾದದ್ದು ಗ್ರೀಕ್ ದಂತಕತೆಗಳ ಪ್ರಕಾರ ಕ್ರಿಸ್ತಪೂರ್ವ ೧೫೨೬ ರಲ್ಲಿ. ಕ್ರೀಡೆಗಳು ಅವರ ಸಂಸ್ಕೃತಿಯ ಪ್ರಮುಖ ಭಾಗವಾಗಿ ರೂಪುಗೊಂಡು, ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪೆಲೊಪೊನ್ನೆಸಸ್ನ ಒಲಿಂಪಿಯ ಎಂಬ ಸಣ್ಣ ಹಳ್ಳಿಯಲ್ಲಿ ಈ ಕ್ರೀಡೆಗಳು ನಡೆಯುತ್ತಿದ್ದವು. ಬೇಟೆಯೇ ಮಾನವನ ಮೊದಲ ಆಟ ಆಗಿರಬಹುದು. ಓಡಿ ಬೆನ್ನಟ್ಟುವುದು, ಜಿಗಿಯುವುದು, ನೆಗೆಯುವುದು, ನೀರಿನಲ್ಲಿ ಈಜುವುದು ಹೀಗೆ ಜೀವನದ ಅನಿವಾರ್ಯವಾದ ಕ್ರಿಯೆಗಳೇ ಮುಂದೆ ಆಟದ ಸ್ವರೂಪ ಪಡೆದವು.

ಕೈಗಾರಿಕೀಕರಣವು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಶೀಲ ರಾಷ್ಟ್ರಗಳ ಜನರಿಗೆ ಹೆಚ್ಚಿನ ವಿರಾಮದ ವೇಳೆಯನ್ನು ಕಲ್ಪಿಸಿತು. ಇದರಿಂದಾಗಿ ಜನರು ಕ್ರೀಡಾ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿತು. ಸಮೂಹ ಮಾಧ್ಯಮ ಮತ್ತು ಜಾಗತಿಕ ಸಂಪರ್ಕದಿಂದಾಗಿ ಕ್ರೀಡೆಗಳಲ್ಲಿ ವೃತ್ತಿಪರತೆಯು ವ್ಯಾಪಕವಾಗಿ ಹರಡಿತು. ಹೊಸ ಸಹಸ್ರಮಾನದಲ್ಲಿ ಹೊಸ ಹೊಸ ಕ್ರೀಡೆಗಳು ದೈಹಿಕ ಕ್ರೀಡೆಗಳ ಸ್ವರೂಪದಿಂದ ಮಾನಸಿಕ ಅಥವಾ ಬುದ್ಧಿವಂತಿಕೆಯ ರೂಪಕ್ಕೆ

ಮುಂದುವರೆಯುತ್ತವೆ. ಎಲೆಕ್ಟ್ರಾನಿಕ್ ಕ್ರೀಡೆಗಳು ಹೆಚ್ಚು ಜನಪ್ರಿಯವಾಗುತ್ತಿವೆ.

ಮನರಂಜನೆಯ ಒಂದು ಭಾಗವಾಗಿರುವ ಕ್ರೀಡೆ ಆದಿ ಮಾನವನಿಂದ ಆಧುನಿಕ ಮನುಷ್ಯನವರೆಗೂ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಮನೆಮಟ್ಟಿಗೆ ಆಡುವ ಚೌಕಾಬಾರ, ಪಗಡೆ, ಅಳಗುಳಿ ಮಣೆ, ಕೇರಂ ಆಟಗಳಿಂದ ಹಿಡಿದು ಕುಸ್ತಿ, ವಾಹನಗಳ ರೇಸ್‌ನಂತಹ ಅಪಾಯಕಾರಿ ಸ್ಪರ್ಧೆಗಳವರೆಗೂ ತನ್ನ ವಿಸ್ತಾರತೆಯನ್ನು ಹೊಂದಿದೆ. ಕೋಳಿ ಕಾಳಗ, ಟಗರಿನ ಕಾಳಗ, ಕಂಬಳದಂತಹ ಆಟಗಳನ್ನು ಪ್ರಾಣಿ ಹಿಂಸೆಯ ಹಿನ್ನೆಲೆಯಲ್ಲಿ ನಿಲ್ಲಿಸಲು ಪ್ರಯತ್ನಿಸಿದ್ದನ್ನು ಸ್ಮರಿಸಬಹುದು. ಕುದುರೆ ರೇಸ್ ಮೊದಲಾದವುಗಳಲ್ಲಿ ಪ್ರಾಣಿಗಳನ್ನು ಬಳಸಿ ಪಂಥ ಕಟ್ಟಿ ಮನರಂಜಿಸಿಕೊಳ್ಳುವ ಜೊತೆಗೆ ಮನುಷ್ಯ ಹಣ ಮಾಡುವುದನ್ನೂ ಇಲ್ಲಿ ಗಮನಿಸಬಹುದು. ಪಂಥ ಕಟ್ಟಿ ಹಣ ಮಾಡುವ ಆಸೆ ಕ್ರಿಕೆಟ್ ಆಟವನ್ನೂ ಬಿಟ್ಟಿಲ್ಲ. ಕ್ರೀಡೆಯ ಹೆಸರಿನಲ್ಲಿ ಜೂಜು ಒಂದು ಭಾಗವಾಗಿದ್ದು ಅದರ ದುರಂತ.

ಕೆಲವು ಕ್ರೀಡೆಗಳು ಕೆಲವು ಪ್ರದೇಶಗಳಿಗೆ ಸೀಮಿತವಾಗಿದ್ದರೆ, ಹಲವು ಕ್ರೀಡೆಗಳು, ಕ್ರೀಡಾಸ್ಪರ್ಧೆಗಳು ರಾಜ್ಯ, ದೇಶಗಳ ಗಡಿಗಳನ್ನು ದಾಟಿ ವಿಶ್ವ ಮನ್ನಣೆಯನ್ನು ಪಡೆದಿರುವುದನ್ನು ಕಾಣಬಹುದು.

* * *

# ಆಫ್ರಿಕಾದ ಹರಿಣಿ

**– ಪಿ. ಲಂಕೇಶ್**

ಅಲ್ಜೀರಿಯಾದ ಹುಡುಗಿ ಹಸೀಬ ಬೋಲ್‌ಮೆರ್ಕಾ ತಾನು ಹೋದ ವರ್ಷ ಟೋಕಿಯೋದಲ್ಲಿ ನಡೆದ ವಿಶ್ವಸ್ಪರ್ಧೆಯಲ್ಲಿ ೧೫೦೦ ಮೀ. ರೇಸ್‌ನಲ್ಲಿ ಗೆದ್ದದ್ದು ಆಕಸ್ಮಿಕವಲ್ಲ, ಎಂದು ತೋರಿಸಿದ್ದಾಳೆ. ಆಕೆ ಗೆದ್ದು ಸ್ವರ್ಣಪದಕ ಗೆದ್ದಿದ್ದಾಳೆ.

ಶನಿವಾರ (ಆಗಸ್ಟ್ ೭) ಸಂಜೆ, ೧೫೦೦ ಮೀ. ಓಟ ಶುರುವಾಗುತ್ತದೆ. ರಷ್ಯಾ ಒಕ್ಕೂಟದ ಫೇವರಿಟ್ ಲುಡ್ಮಿಲಾ ರೊಗಚೇವಾ ಎಲ್ಲರಿಗಿಂತ ಮುಂದಿದ್ದಾಳೆ; ಈಕೆಯ ಹಿಂದೆ ಇವಳ ಟೀಮ್‌ಮೇಟ್ ಪಡ್ಕೋ ಪೇವಾ ಓಡುತ್ತಿದ್ದಾಳೆ. ಇವರು ಆರಂಭಿಸಿರುವ ವೇಗ ಎಷ್ಟು ತೀವ್ರವಾಗಿದೆಯೆಂದರೆ ಅಲ್ಜೀರಿಯಾದ ಹಸೀಬಾ ಬೋಲ್‌ಮೆರ್ಕಾ ತನ್ನ ಐದು, ಆರನೆಯ ಸ್ಥಾನದಿಂದ ಇವರ ಹತ್ತಿರ ಕೂಡ ಬರಲಾರಳು ಅನ್ನಿಸುತ್ತದೆ. ಮೊದಲ ೫೦೦ ಮೀಟರ್ ಹೀಗೆ ಸಾಗಿದೆ; ಎರಡನೆಯ ೫೦೦ ಮೀಟರ್ ಕೂಡ. ರೇಸ್ ಕೊನೆಯ ಹಂತ ತಲುಪುತ್ತಿದ್ದಂತೆ ಟೆಶಿಯಾನಾ ಮುಂದೆ ಸಾಗುತ್ತಿದ್ದಾಳೆ. ಇನ್ನು ಕೇವಲ ಇನ್ನೂರು ಮೀಟರ್ ಇರುವಲ್ಲಿ ಚೈನಾದ ಯನ್ಯಯಾ ಕ್ಯೂ ಮುಂದಿರುವ ಮೂವರನ್ನು ಸೇರಿ ಮುಂದೆ ಸಾಗುವಂತಿದ್ದಾಳೆ. ಈಗ ಕೇವಲ ೧೫೦ ಮೀಟರ್ ಉಳಿದಿದೆ. ಹಸೀಬ ಬೋಲ್‌ಮೆರ್ಕಾ ಕೂಡಲೆ ಮುಂದಿರುವ ಗುಂಪು ಸೇರಿದ್ದಾಳೆ. ಕೇವಲ ೧೦೦ ಮೀಟರ್ ಇರುವಾಗ ಮುಂಚೂಣಿಯ ಲುಡ್ಮಿಲಾ ರೊಗಚೇವಾ ಪಕ್ಕಕ್ಕೆ ಬಂದಿದ್ದಾಳೆ. ಕೊನೆಯ ೫೦ ಮೀಟರ್‌ನಲ್ಲಿ ಹಸೀಬಾ ಮಿಂಚಿನ ವೇಗಕ್ಕೆ ತನ್ನ ಗೇರ್ ಬದಲಿಸಿ ಲುಡ್ಮಿಲಾಳನ್ನು ಹಿಂದೆ ಹಾಕಿ ಮೊದಲು ಗುರಿ ತಲುಪುತ್ತಾಳೆ. ಇದು ಕೇವಲ ಓಟವಲ್ಲ. ದೇಹ ಮಾತ್ರ ಇಲ್ಲಿ ಭಾಗವಹಿಸಿಲ್ಲ. ಹಸೀಬ ತನ್ನ ಬುದ್ಧಿಯನ್ನೆಲ್ಲಾ ಬಳಸಿ ಕರಾರುವಕ್ಕಾಗಿ ಪ್ಲಾನ್ ಮಾಡಿ ಗೆದ್ದಿದ್ದಾಳೆ.

೧೩೫೦ ಮೀಟರ್ ಹಂತದಲ್ಲೂ ಮಿಕ್ಕವರು ಎಲ್ಲ ಶಕ್ತಿ ಬಳಸಿ ಓಡುತ್ತಿದ್ದಾಗ ಹಸೀಬ ಕೊನೆಯ ೧೫೦ ಮೀಟರ್‌ನ ಶಕ್ತಿ ಉಳಿಸಿಕೊಂಡು ಮುಂದೆ ನುಗ್ಗಿ ಗೆದ್ದಿದ್ದಾಳೆ. ರೇಸ್‌ನ ವೇಗ, ಎಲ್ಲಿ ಎಷ್ಟು ಶಕ್ತಿ ಬಳಕೆಯಾಗಬೇಕು, ಗುರಿ ಮುಟ್ಟುವ ಸಮಯದಲ್ಲಿ ಎಂಥ ವೇಗವಿರಬೇಕು ಎಂಬುದು ಮುಖ್ಯ. ಅಂತಾರಾಷ್ಟ್ರೀಯ ಕ್ರೀಡೆ ಹುಡುಗಾಟವಲ್ಲ; ಅಲ್ಲಿ ಎಲ್ಲರೂ ತಮ್ಮ ದೇಹವನ್ನು 'ಟ್ಯೂನ್' ಮಾಡಿಕೊಂಡು ಬಂದಿರುತ್ತಾರೆ; ತಕ್ಕ ಮಾನಸಿಕ ಸ್ಥಿತಿ ತಲುಪಿರುತ್ತಾರೆ. ಅನುಭವ, ಬುದ್ಧಿ, ದೇಹ– ಎಲ್ಲವನ್ನೂ ಸರಿಯಾಗಿ ಬಳಸಿಕೊಂಡರೆ ಮಾತ್ರ ಗೆಲ್ಲುವುದು ಸಾಧ್ಯ. ಹಸೀಬ ಅವತ್ತು ಮಾಡಿದ್ದು ಅದನ್ನೇ.

ಹಾಗೆ ಮಾಡುವಾಗ ಹಸೀಬ ಇಡೀ ಆಫ್ರಿಕಾದ ಮಹಿಳಾ ವೃಂದಕ್ಕೆ ಎರಡನೆಯ ಚಿನ್ನದ ಪದಕ ಗೆದ್ದು ಕೊಟ್ಟಿದ್ದಳು; ಹೋದ ವರ್ಷ ಟೋಕಿಯೋದ ವಿಶ್ವ ಕ್ರೀಡಾ ಛಾಂಪಿಯನ್‌ಶಿಪ್‌ನಲ್ಲಿ, ಈ ವರ್ಷ ಬಾರ್ಸಿಲೋನಾದಲ್ಲಿ. ಹೋದ ವರ್ಷ ಐದೂ ಕಾಲು ಅಡಿ ಎತ್ತರದ, ತೆಳ್ಳನೆಯ ಈ ಹುಡುಗಿ ಚಿನ್ನದ ಪದಕ ಗೆದ್ದು ಟೋಕಿಯೋ ಸ್ಟೇಡಿಯಂನಲ್ಲಿ ಅಲ್ಜೀರಿಯಾದ ಧ್ವಜ ಹಿಡಿದು ಸುತ್ತ ಓಡಿದಾಗ ಅಲ್ಜೀರಿಯಾದ ಲಕ್ಷಾಂತರ ಜನ ತಮ್ಮ ಟೆಲಿವಿಶನ್ ಎದುರು ಸಂತೋಷದಿಂದ ಅತ್ತು ಕುಣಿದಾಡಿದರು. ಈ ವರ್ಷ ಮೊನ್ನೆ ಶನಿವಾರ ಹಸೀಬ ಗೆದ್ದು ಅಲ್ಜೀರಿಯಾದಲ್ಲಿ ಮತ್ತೆ ರೋಮಾಂಚನ ಹರಿಸಿದಳು. ಅವಳ ಅಲ್ಜೀರಿಯಾದ ನಾರ್ಡೀನ್ ಮೊರ್ಸೆಲಿ ಚಿನ್ನದ ಪದಕ ಗೆಲ್ಲುವೆನೆಂದು ಬಾರ್ಸಿಲೋನಾಗೆ ಹೋಗಿ ಕಂಚಿನ ಪದಕ ಕೂಡ ಗೆಲ್ಲಲಾಗಲಿಲ್ಲ. ಹಸೀಬ ಗೆದ್ದಿದ್ದಾಳೆ. ತನ್ನ ದಿಟ್ಟತೆ, ಛಲ ಮತ್ತು ಏಕಾಗ್ರತೆ ಹುಡುಗಿಯ ಮೂಲಕ; ನಾಲ್ಕು ವರ್ಷದ ಹಿಂದೆ ಪಿ.ಟಿ. ಉಷಾ ನಮ್ಮೆಲ್ಲರನ್ನು ಈ ಖುಷಿಯ ಹತ್ತಿರಕ್ಕೆ ಮಾತ್ರ ತಂದಳು. ಕಂಚು ಗೆಲ್ಲುವವಳಿದ್ದ ಉಷಾ ಇಡೀ ಭಾರತದ ಹೆಮ್ಮೆಯ ಹುಡುಗಿಯಾದಳು. ಇದನ್ನು ನೆನೆದರೆ ನಾವು ಅಲ್ಜೀರಿಯಾದ ಹೆಮ್ಮೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯ.

ಮುಸ್ಲಿಂ ದೇಶಗಳು ತಮ್ಮ ಧರ್ಮಕ್ಕೆ ಅನ್ಯಾಯ ಮಾಡಲಿ ಎಂದು

ಯಾರೂ ಹೇಳುವುದಿಲ್ಲ; ಆದರೆ ಇಡೀ ಜನಸಂಖ್ಯೆಯ ಅರ್ಧದಷ್ಟು ಭಾಗವನ್ನು ಆಟದ ಮೈದಾನಗಳಿಂದ, ಉತ್ಪಾದನೆಯ ಕಾರ್ಖಾನೆಗಳಿಂದ ಹೊರಗಿಟ್ಟರೆ ಅಲ್ಜೀರಿಯಾ ಈಗ ಪಡೆದ ಧನ್ಯಭಾವದಿಂದ ವಂಚಿತವಾಗ ಬೇಕಾಗುತ್ತದೆ. ಹದಿನೈದು ದಿನದ ಹಿಂದೆ ಇರಾನ್, ಇರಾಕ್, ಟರ್ಕಿಯ ತಂಡಗಳು ಬಾರ್ಸಿಲೋನಾದಲ್ಲಿ ಬಂದಿಳಿದವು. ಬರೀ ಗಂಡುಗಳಿಂದ ಕೂಡಿದ್ದ ತಂಡಗಳು. ಒಬ್ಬ ತುಂಟ ಪತ್ರಕರ್ತ ಅವರನ್ನು ನೋಡಿ, "ಯಾರಿವರು, ಯುದ್ಧದ ಕೈದಿಗಳಂತೆ ಕಾಣುತ್ತಿದ್ದಾರಲ್ಲ" ಎಂದುಕೊಂಡು ಅವರೊಂದಿಗೆ ಮಾತಾಡಿದ. "ಹೆಣ್ಣುಮಕ್ಕಳು ಯಾರೂ ಬಂದಿಲ್ಲವೆ?" ಎಂದು ಬೇಕಂತಲೇ ಕೇಳಿದರೆ ಇರಾನ್ ತಂಡದವನೊಬ್ಬ, "ಅವರಿಗೆ ಇದೆಲ್ಲ ಇಷ್ಟವಿಲ್ಲ" ಎಂದು ಹೇಳಿದ. ಪಾಕಿಸ್ತಾನ್ ಈ ಸಲ ಹಾಕಿಯಲ್ಲಿ ಕಂಚಿನ ಪದಕ ಗೆದ್ದಿದೆ; ಟರ್ಕಿ, ಇಂಡೋನೇಶಿಯಾ ಎರಡೆರಡು ಚಿನ್ನದ ಪದಕ ಗೆದ್ದಿವೆ. ಸ್ತ್ರೀ ಸ್ವಾತಂತ್ರ್ಯ, ಪ್ರಜಾತಂತ್ರ ಮುಂತಾದ್ದನ್ನುಳ್ಳ ಭಾರತ ಮಣ್ಣು ಮುಕ್ಕಿದೆ. ಮೊನ್ನೆ ಆರ್.ಕೆ. ಲಕ್ಷ್ಮಣ್ ತಮ್ಮ ವ್ಯಂಗ್ಯಚಿತ್ರದಲ್ಲಿ "ಸದ್ಯ ತಗಡು, ಪ್ಲಾಸ್ಟಿಕ್, ಕಾರ್ಡ್‌ಬೋರ್ಡ್ ಪದಕಗಳನ್ನು ಬಾರ್ಸಿಲೋನಾದಲ್ಲಿ ಇಟ್ಟಿಲ್ಲ. ಅವನ್ನೂ ಭಾರತ ಗೆಲ್ಲುತ್ತಿರಲಿಲ್ಲ!" ಎಂದು ಹೇಳಿದ್ದು ನೀವು ಗಮನಿಸಿರಬಹುದು.

ಈ ಹುಡುಗಿ ಹಸೀಬ ಗೆದ್ದಿದ್ದನ್ನು ನಾನು ಬೇಕೆಂತಲೇ ದೊಡ್ಡದು ಮಾಡಿ ಹೇಳುತ್ತಿದ್ದೇನೆ. ಈ ಜಗತ್ತಿನ ಹುಡುಗಿಯರು ಆಡುವುದಕ್ಕಾಗಿ ಪಟ್ಟ ಪಾಡು, ಅನುಭವಿಸಿದ ನಿರ್ಲಕ್ಷ್ಯ ಮತ್ತು ಅವಮಾನದ ಚರಿತ್ರೆಯೇ ಇರುವುದರಿಂದ ಇದನ್ನು ಹೇಳುತ್ತಿದ್ದೇನೆ. ೧೮೯೬ರಲ್ಲಿ ಅಥೆನ್ಸ್‌ನಲ್ಲಿ ಆರಂಭವಾದ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಹುಡುಗಿಯರಿಗೆ ಅವಕಾಶವಿರಲಿಲ್ಲ. ಹೆಂಗಸರ ಬಗೆಗಿನ ವಿಶಿಷ್ಟ ನಿಲುವು ಮುಸ್ಲಿಂ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಎಂಬುದನ್ನು ಇದು ತೋರುತ್ತದೆ. ಇವತ್ತಿಗೂ ವಿಂಬಲ್ಡನ್ ಟೆನ್ನಿಸ್‌ನಲ್ಲಿ ಹೆಂಗಸರಿಗೆ ಮತ್ತು ಗಂಡಸರಿಗೆ ಸಮಾನ ಮೊತ್ತದ ಸಂಭಾವನೆ ಕೊಡುವುದನ್ನು ಪುರುಷ ಕ್ರೀಡಾಪಟುಗಳು ಟೀಕಿಸುತ್ತಾರೆ; "ಹೆಂಗಸರು ಈಗಿನ ಮೂರು ಸೆಟ್‌ಗೆ ಬದಲು ನಮ್ಮಂತೆಯೇ ಐದು ಸೆಟ್ ಆಡಲಿ" ಅನ್ನುವವರೂ, "ಪುರುಷರ

ಜೊತೆಗೆ ಆಡಿ ಒಂದು ಗೇಮ್ ಗೆಲ್ಲಲಿ" ಎನ್ನುವವರೂ ಇದ್ದಾರೆ. ಇವರ ಉದ್ಧಟತನದ ಹಿಂದಿರುವುದು ಕೇವಲ ಹುಂಬತನ. ಯಾಕೆಂದರೆ ಇವತ್ತು ಮಹಿಳೆಯರ ಟೆನ್ನಿಸ್ ನಿಜಕ್ಕೂ ಕಲಾತ್ಮಕ; ಅವರು ಆಡುವ ಸರಾಸರಿ ಒಂದೂವರೆ ಗಂಟೆಯ ಮ್ಯಾಚ್‌ನಲ್ಲಿ ಬಾಲ್ ಕನಿಷ್ಠ ಅರ್ಧಗಂಟೆ ಆಟದಲ್ಲಿರುತ್ತದೆ. ಪುರುಷರ ಆಟ ಯಾವ ಕೀಳು ಮಟ್ಟಕ್ಕೆ ಇಳಿದಿದೆಯೆಂದರೆ ಅಮೆರಿಕಾದ ವೀಟನ್, ಸಾಂಪ್ರಾಸ್ ಆಡುತ್ತಿದ್ದರೆ ಇಡೀ ಮ್ಯಾಚ್‌ನಲ್ಲಿ ಬಾಲ್ ಕೇವಲ ಹತ್ತು ನಿಮಿಷ ಆಟದಲ್ಲಿರುತ್ತದೆ. ಅರ್ಧ ಆಟ ಅವರ ಬಾಂಬ್ ತರಹದ ಸರ್ವಿಸ್‌ನಲ್ಲೇ ಮುಗಿದಿರುತ್ತದೆ. ಇದರಿಂದಾಗಿ ಚೆನ್ನಾಗಿ ವಾಲಿ ಮಾಡುವ, ಆಟದ ಎಲ್ಲ ತಂತ್ರ ಬಳಸುವ ಹೆಂಗಸರ ಆಟ ರಂಜನೀಯವಾಗಿರುತ್ತದೆ. ಮೋನಿಕಾ ಸೆಲೆಸ್ ಮತ್ತು ಸ್ಟೆಫಿ ಗ್ರಾಫ್ ಸರಿಯಾದ ಮ್ಯಾಚ್ ಆಡಿದಾಗ ಅದೊಂದು ಅದ್ಭುತ ಕಲೆಯಾಗಿ ರಂಜಿಸುತ್ತದೆ.

ಇನ್ನು ಈ ಒಲಿಂಪಿಕ್ಸ್‌ಗೆ ಬರೋಣ, ಹೆಂಗಸರ ಬಗ್ಗೆ ಪೂರ್ವಗ್ರಹ ಎಲ್ಲ ಗಂಡುಗಳಲ್ಲೂ ಇರುತ್ತದೆ. ಅಶ್ಲೀಲವೆಂದು ತಾವೇ ತೀರ್ಮಾನಿಸಿದ ಒಲಂಪಿಕ್ಸ್ ಕಮಿಟಿ ಹೆಂಗಸರಿಗೆ ೧೯೧೨ರವರೆಗೆ ಈಜುವ ಸ್ಪರ್ಧೆಯಲ್ಲಿ ಅವಕಾಶ ಕೊಡಲಿಲ್ಲ. ಹೆಂಗಸರಲ್ಲಿ ತ್ರಾಣ ಕಡಿಮೆ ಎಂದುಕೊಂಡ ಗಂಡಸರು ೧೯೮೪ರವರೆಗೆ ಮ್ಯಾರಥಾನ್‌ನಲ್ಲಿ (ಅಂದರೆ ದೂರದ ಓಟದಲ್ಲಿ) ಅವಕಾಶ ಕೊಡಲಿಲ್ಲ.

ಆದರೆ ಮಹಿಳೆಯರು ತಾವು ಯಾವುದರಲ್ಲೂ ಕಡಿಮೆಯಿಲ್ಲ ಎಂದು ತೋರಿಸಿ ಇಡೀ ಜಗತ್ತಿನ ಹೃದಯ ಗೆದ್ದಿದ್ದಾರೆ. ಈಗಲೂ 'ಮದರ್ ಕರೇಜ್' ಎಂದೇ ವರ್ಣಿತವಾಗುವ ನೆದರ್‌ಲೆಂಡ್‌ನ ಮಹಾನ್ ಕ್ರೀಡಾಪಟು ಇತಿಹಾಸಕಾರರ ದಾಖಲೆಯಲ್ಲಿದ್ದಾಳೆ. ಈಕೆಯ ಹೆಸರು ಫ್ಯಾನಿ ಬ್ಲಾಂಕರ್ಸ್ – ಕೇನ್. ೧೯೩೬ರಿಂದ ೧೯೪೮ರವರೆಗೆ ಮೈ ಜುಮ್ಮೆನಿಸುವಂತೆ ಓಡುತ್ತಿದ್ದ ಶ್ರೇಷ್ಠ ಕ್ರೀಡಾಪಟು ಫ್ಯಾನಿ. ಸುಮಾರು ಹದಿನೈದು ವರ್ಷ ಓಟದ ಟ್ರ್ಯಾಕ್‌ನ ಸಾಮ್ರಾಜ್ಞಿಯಾಗಿದ್ದವಳೀಕೆ. ಆದರೆ ಅವಳು ಎಲ್ಲೆಲ್ಲೂ ತಾತ್ಸಾರ, ಅವಮಾನ ಎದುರಿಸಬೇಕಾಯಿತು. ೧೯೪೮ರಲ್ಲಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಲಂಡನ್‌ಗೆ ಬಂದಾಗ

ಈಕೆಗೆ ಮೂವತ್ತು ವರ್ಷ; ಎರಡು ಮಕ್ಕಳ ತಾಯಿ. ಕೋಚ್ ಆಗಿದ್ದ ಪತಿಯೊಂದಿಗೆ ಲಂಡನ್‌ಗೆ ಆಕೆ ಬಂದಾಗ ಲಂಡನ್‌ನ ಪತ್ರಿಕೆಗಳು "ಮೂವತ್ತು ವರ್ಷದ ಎರಡು ಮಕ್ಕಳ ಮುದುಕಿ" ಎಂದು ಹೀಯಾಳಿಸಿದವು. ಆದರೆ ಈಕೆ ೮೦ ಮೀ. ಮತ್ತು ೧೦೦ ಮೀ. ಹರ್ಡಲ್ಸ್‌ನಲ್ಲಿ ಸ್ವರ್ಣ ಗೆದ್ದಳು. ಇದರಿಂದ ಹೊಗಳಿಕೆಗೆ ಬದಲು ಇನ್ನಷ್ಟು ಹೀಯಾಳಿಕೆ ಕೇಳಿಬಂತು. ಇದರಿಂದ ರೋಸಿಹೋದ ಫ್ಯಾನಿ ತನ್ನ ಕೋಚ್ ಪತಿಯ ಹೆಗಲ ಮೇಲೆ ಮುಖ ಇಟ್ಟು ಅತ್ತಳು; "ಮನೆಗೆ ಹಿಂದಿರುಗೋಣ, ಮಕ್ಕಳನ್ನು ಸೇರಿಕೊಳ್ಳೋಣ" ಅಂದಳು. ಆದರೆ ಅವಳ ಮನವೊಲಿಸಿ ನಿಲ್ಲಿಸಬೇಕಾಯಿತು. ಅವತ್ತಿನಿಂದ ಆಕೆ ೨೦೦ ಮೀ. ಮತ್ತು ೪x೧೦೦ ಮೀ. ರಿಲೇಯಲ್ಲಿ ಸ್ವರ್ಣ ಗೆದ್ದಳು. ಇವತ್ತಿಗೂ ಓಟದ ಟ್ರ್ಯಾಕ್‌ನಲ್ಲಿ ಒಂದೇ ಒಲಿಂಪಿಕ್ಸ್‌ನಲ್ಲಿ ನಾಲ್ಕು ಸ್ವರ್ಣಪದಕ ಗೆದ್ದ ಏಕಮಾತ್ರ ಹುಡುಗಿ ಈ ಫ್ಯಾನಿ.

ಇವಳಂತೆಯೇ ಅವಮಾನ ಸಹಿಸುತ್ತಲೇ ಗೆದ್ದು ಪ್ರಖ್ಯಾತರಾದ ಹೆಂಗಸರಿದ್ದಾರೆ. ಅಮೆರಿಕಾದ ಮಿಲ್‌ಡ್ರೆಡ್ ಡಿಡ್ರಿಕ್‌ಸೆನ್ ೧೯೩೨ರ ಒಲಿಂಪಿಕ್ಸ್‌ನಲ್ಲಿ ಎರಡು ಸ್ವರ್ಣಪದಕ, ಒಂದು ಬೆಳ್ಳಿ ಪದಕ ಗೆದ್ದಳು. ೧೯೫೨ರಲ್ಲಿ ಮತ್ತು ೧೯೫೬ರಲ್ಲಿ ಡೆನ್ಮಾರ್ಕ್‌ನ ಹುಡುಗಿ ಲಿಸ್ ಹಾರ್ಟೆಲ್‌ಳ ಜಯ ವಿಶಿಷ್ಟವಾದದ್ದು. ಚಿಕ್ಕಂದಿನಲ್ಲಿ ಪೋಲಿಯೋ ರೋಗದಿಂದ ಕಾಲು ದುರ್ಬಲವಾಗಿದ್ದರೂ ಲಿಸ್ ಎರಡೂ ಸಲ ಬೆಳ್ಳಿಯ ಪದಕ ಗೆದ್ದಳು. ದೈಹಿಕ ದೌರ್ಬಲ್ಯಕ್ಕೆ ಇವಳೊಡ್ಡಿದ ಸವಾಲು ಇವತ್ತಿಗೂ ಐತಿಹಾಸಿಕ. ಇದರಿಂದ ಸ್ಫೂರ್ತಿ ಪಡೆದ ಪೂರ್ವ ಜರ್ಮನಿ ಹಾಗೂ ರಷ್ಯಾದ ಅನೇಕ ಹುಡುಗಿಯರು ಆಧುನಿಕ ವಿಜ್ಞಾನದ ನೆರವಿನಿಂದ ಹಲವು ಪದಕ ಗೆದ್ದರು. ಆದರೂ ಹುಡುಗಿಯರ ಕೀಳರಿಮೆ ಹೆಚ್ಚಿಸುವ ಪ್ರಸಂಗಗಳು ಆಗುತ್ತಲೇ ಇವೆ. ನಾರ್ವೆಯ ಗ್ರೀಟೆ ವೈಟ್ಸ್ ಎಂಬ ಹುಡುಗಿ ೧೯೮೪ರಲ್ಲಿ ಬೆಳ್ಳಿಯ ಪದಕ ಗೆದ್ದಳು. ಆಕೆ ತನ್ನ ಆತ್ಮಚರಿತ್ರೆಯಲ್ಲಿ ತನ್ನ ಅಸಹಾಯಕತೆ ತೋಡಿಕೊಂಡಿದ್ದಾಳೆ. "ಇಡೀ ನಾರ್ವೆಯಲ್ಲಿ ಹುಡುಗಿಯರಿಗೆ ಉತ್ಸಾಹದಿಂದ ಪ್ರವೇಶ ನೀಡುವ, ತರಬೇತಿ ಕೊಡುವ ಜಾಗಗಳೇ ಇಲ್ಲ" ಎಂದು ಹೇಳುವ ಗ್ರೀಟೆ ಎಲ್ಲ

ಹುಡುಗಿಯರ ನೋವಿಗೆ ನುಡಿ ಕೊಟ್ಟಿದ್ದಾಳೆ; "ನನ್ನ ಪುಟ್ಟ ಮಗಳು ಅಡಿಗೆ ಮಾಡಿಕೊಂಡು ಸುಖವಾಗಿರಲಿ" ಎಂಬುದು ಅವಳ ಹೆತ್ತವರ ಮಾತಂತೆ!

ಮುಂದುವರಿಯುತ್ತಿರುವ ಏಷ್ಯಾ, ಆಫ್ರಿಕಾ ದೇಶಗಳಲ್ಲಂತೂ ಹುಡುಗಿಯರಿಗಾಗುತ್ತಿರುವ ಅನ್ಯಾಯ ಅನಿರ್ವಚನೀಯ. ಆಫ್ರಿಕಾದಲ್ಲಿ ಅಣ್ಣ, ತಮ್ಮಂದಿರೊಂದಿಗೆ ಅದೇ ಗುಡ್ಡ, ಅರಣ್ಯದ ದಾರಿಗಳಲ್ಲಿ ಅಷ್ಟೇ ವೇಗವಾಗಿ ಓಡುವ ಹುಡುಗಿಯರು ಹದಿನೈದು, ಹದಿನಾರಕ್ಕೇ ಮದುವೆಯಾಗಬೇಕಾಗುತ್ತದೆ; ಅವರು ಕ್ರೀಡೆಗೆ ಅರ್ಹರು ಎಂದು ಅಲ್ಲಿಯ ಗಂಡಸರು ಯೋಚಿಸುವುದಿಲ್ಲ ಕೂಡ. ಹೀಗಾಗಿ ಆಫ್ರಿಕಾದಿಂದ ವಲಸೆ ಹೋದ ಅಮೆರಿಕಾದಲ್ಲಿರುವ ಕುಟುಂಬಗಳ ವರ್ಣೀಯ ಹುಡುಗಿಯರು ಕ್ರೀಡೆಯ ರಾಣಿಯರಾಗಿ ಮಿಂಚುತ್ತಿದ್ದರೆ ಆಫ್ರಿಕಾದ ಹುಡುಗಿಯರು ಪೂರ್ತಿ ದಮನಕ್ಕೊಳಗಾಗಿದ್ದಾರೆ. ಹಸೀಬ ತರಹದವರಿಗೆ ಸಂಪ್ರದಾಯ, ಬಡತನದ ಕಿರಿಕಿರಿ ಬೇರೆ. ಇದನ್ನೆಲ್ಲ ಎದುರಿಸಿ ಜಯಗಳಿಸಿರುವ ಹಸೀಬ ಈ ಕಾರಣದಿಂದಲೇ ಅರ್ಥಪೂರ್ಣ ವ್ಯಕ್ತಿ.

ಅಲ್ಜೀರಿಯಾದ ರಾಜಧಾನಿ ಅಲ್ಜಿಯರ್ಸ್‌ಗೆ ನೂರು ಕಿಲೋಮೀಟರ್ ದೂರದಲ್ಲಿರುವ ಕಾನ್‌ಸ್ಟ್ಯಾಂಟೀನ್ ಪಟ್ಟಣದ ಹಸೀಬ ಇಡೀ ಆಫ್ರಿಕಾದ ಜನತೆಗೆ ಹೊಸ ಸ್ಫೂರ್ತಿ ತುಂಬಿದ್ದಾಳೆ. ಈ ಜನತೆಯಲ್ಲಿ ಹೆಂಗಸರು, ಗಂಡಸರು, ಮುದುಕರು, ಮಕ್ಕಳು– ಎಲ್ಲರೂ ಸೇರುತ್ತಾರೆ, ಹಾಗೆಯೇ ಭಾರತಕ್ಕೂ ಈಕೆ ಸ್ಫೂರ್ತಿಯಾಗಬೇಕು.ಗಟ್ಟಿ ಹುಡುಗ, ಹುಡುಗಿಯರನ್ನು ಸೃಷ್ಟಿಸುವ ಜಾಗಗಳೇ ಭಾರತದಲ್ಲಿವೆ. ಉತ್ತರ ಭಾರತದ ಜಾಟ್‌ಗಳು, ಸಿಖ್ಖರು, ಪಠಾಣ್‌ಗಳಿದ್ದಾರೆ; ದಕ್ಷಿಣ ಭಾರತದ ಕೊಡವರು ಹುಟ್ಟುತ್ತಲೇ ಉಕ್ಕಿನ ಮನುಷ್ಯರಂತಿರುತ್ತಾರೆ. ಆದರೆ ಉಕ್ಕು ಚಿನ್ನವನ್ನು ತರುವುದಿಲ್ಲ; ನೀಚ ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿ ಯಾರಲ್ಲೂ ತ್ರಾಣ ಹೆಚ್ಚಿಸುವುದಿಲ್ಲ. ಭಾರತದ ಎಲ್ಲೆಡೆ ಆಟದ ಮೈದಾನಗಳು, ಕೋರ್ಟ್‌ಗಳು ಇರಬೇಕು; ಆಡುವ ಮಕ್ಕಳ ಮೇಲೆ ಕಣ್ಣಿಟ್ಟಿರುವ ಕೋಚ್‌ಗಳು ಇರಬೇಕು. ಹಸೀಬಳನ್ನು ಅವಳ ಹೈಸ್ಕೂಲ್‌ನಲ್ಲಿ ನೋಡಿದ ಕೋಚ್ ಅವಳನ್ನು ಪ್ರತ್ಯೇಕಿಸಿ ಹುಮ್ಮಸ್ಸು ನೀಡಿದ; ಆಮೇಲೆ ಆಕೆಗೆ

ರಷ್ಯಾದಲ್ಲಿ ಟ್ರೇನಿಂಗ್ ಪಡೆದ ಅಮರ್ ಚೌರಾನ್ ಎಂಬ ಕೋಚ್ ಸಿಕ್ಕ. ಹಸೀಬಳ ಸಹಕ್ರೀಡಾಪಟುವೊಬ್ಬ ಹೇಳಿದ, "ಹಸೀಬ ಎಷ್ಟೊಂದು ಕಷ್ಟಪಟ್ಟು ತರಬೇತಿ ಪಡೆಯುತ್ತಿದ್ದಾಳೆಂದರೆ, ಆಕೆ ಎಂದೂ ಎರಡನೆಯವಳಾಗಿ, ಮೂರನೆಯವಳಾಗಿ ಬರುವ ಮಾತಾಡುವುದಿಲ್ಲ. ಚಿನ್ನವೇ ಆಕೆಯ ಗುರಿ!"

ಅಲ್ಜೀರಿಯಾದ ರಾಜಕೀಯ ಗೋಳು, ಸಾಂಸ್ಕೃತಿಕ ನೋವನ್ನು ತಿಂಗಳುಗಟ್ಟಲೆ ನಿವಾರಿಸುವಂತೆ ಹಸೀಬ ಗೆದ್ದಿದ್ದಾಳೆ.

*(ಮೂಲ : ಟೀಕೆ–ಟಿಪ್ಪಣಿ ಸಂಪುಟ ೨)*

* * *

# ಸವಾಲು ಗೆದ್ದ ಸಿದ್ದ

**–ಕಲ್ಕುಳಿ ವಿಠಲ್ ಹೆಗ್ಗಡೆ**

ಒಂದು ದಿನ ಸಿದ್ದಂಗೂ ಗೋವಿಂದಂಗೂ ಹೆಜ್ಜೇನ್ ಕುಯ್ಯೋ ವಿಚಾರದಲ್ಲಿ ಚರ್ಚೆಗೆ ಬಿತ್ತು. ಗೋವಿಂದಂಗೂ ಹೆಜ್ಜೇನ್ ಕುಯ್ಯೋದ್ ಗೊತ್ತಿತ್ತು. ಸಿದ್ದ ಹೇಳಿದ್ದಕ್ಕೆಲ್ಲಾ ಅವ. 'ಇವ ಭಾರಿ ಕಲ್ತವ, ಯಾರೂ ಕಾಣದ್ದು' ಅಂತ ಹೇಳಿ. 'ನೋಡೋಣ ಸೆಟ್ಟಿಮಕ್ಕಿಲಿರೋ ಧೂಪದ ಮರದ ಜೇನ್ ಕುಯ್ಯಿ, ಭಾರಿ ಹೇಳ್ತಿಯಲ್ಲ' ಅಂತ ಸವಾಲು ಹಾಕಿದ. ಅದಕ್ಕೆ ಸಿದ್ದ, 'ನೀವ್ ಹೇಳಿದಂತೆ ಆ ಮರದ ಜೇನ್ ಕುಯಿದ್ರೆ ಏನ್ ಕೊಡ್ತಿರಿ' ಅಂತ ಕೇಳ್ದ. ಅದಕ್ಕೆ, 'ಸೆಟ್ಟಿಮಕ್ಕಿ ಜೇನ್ ಕುಯಿದ್ರೆ ನಿನ್ ಮಾವ ಬಚ್ಚ ವಡೇರ ಮನೇಲಿ ಮಾಡಿದ ಸಾಲ ಎಲ್ಲ ಕುಲಾಸೆ ಮಾಡ್‌ಸ್ತೀನಿ' ಅಂದ ಗೋವಿಂದ. 'ಇಲ್‌ದಿದ್ರೆ ನೀವು ಬೇರೆ ಹೆಸ್ರು ಇಟ್ಕೊಳ್ತಿರಾ' ಅಂತ ಸಿದ್ದ ಮರು ಸವಾಲು ಹಾಕಿದ. ಆಗ ಗೋವಿಂದ ಸಿದ್ದನ ಪಂಥಕ್ಕೆ ಒಪ್ಪಿದ.

ಸಿದ್ದನ ಕೈಯಲ್ಲೂ ಸಾಧ್ಯವಿಲ್ಲ ಎಂಬ ಧೈರ್ಯದ ಮೇಲೆ ಗೋವಿಂದ ಸಿದ್ದಂಗೆ ಈ ಸವಾಲು ಹಾಕಿದ್ದ. ಆದ್ರೆ ಸಿದ್ದಂಗೆ ವೆಂಕ್ಟೇಗೌಡ್ರ ಮನೆಯಲ್ಲಿದ್ದಾಗಲೇ ದೈವ ಬನದಲ್ಲಿದ್ದ ಇದಕ್ಕಿಂತ ದೊಡ್ಡ ಮರಹತ್ತಿ ಜೇನ್ ಕುಯ್ದ ಅಭ್ಯಾಸವಿತ್ತು. ಅದಕ್ಕೆ ಸಿದ್ದ ಜೇನ್ ಕುಯ್ಯಕ್ಕೆ ಬೇಕಾದ ತಯಾರಿ ಮಾಡ್ಕೊಡಿ, ಆ ಜೇನ್ ಕುಯ್ದೆಯಿದ್ರೆ ನಿಮ್ಗೆ ಮುಖ ತೋರಿಸ್ದೆ ಊರ್ ಬಿಟ್‌ಹೋಗ್ತೀನಿ ಅಂತ ಮರು ಸವಾಲು ಹಾಕಿದ್ದ.

ಈ ಮಾತು ಕೇಳ್ದ ಉಳಿದ ಕೆಲ್ಸಗಾರರೆಲ್ಲಾ, ಸಿದ್ದ ಈ ಪಟಾಕಿಲಿ ಸಿಕ್ಕಿ ಬಿದ್ದ, ಇಂವ ಊರ್ ಬಿಡುದೇ ಸೈ ಅಂತ ಮಾತಾಡ್ಕೊಂಡ್ರು ಕೆಲವರು ಇದು ಆಗದ ಮಾತು ಅಂತ ಸಿದ್ದನ ಹೆದ್ರಿಸಿದ್ರು. ಆದ್ರೆ ಸಿದ್ದ, ಏನೇ ಆಗ್ಲಿ ಈ ಜೇನ್ ಕುಯ್ದೇ ಸಿದ್ಧ ಅಂತ ತೀರ್ಮಾನ ಮಾಡಿದ್ದ. ದಿನ ಕೂಡ ನಿಗದಿಯಾಯಿತು. ಆದ್ರೆ ಗೋವಿಂದಂಗೆ ಅನುಮಾನವಿತ್ತು.

ಅವ ಕೆಲ್ಸದೋರಿಗೆ ಪಾತ್ರೆ ಬೇಡ. ಉಳಿದಿದ್ದೆಲ್ಲಾ ವ್ಯವಸ್ಥೆ ಮಾಡಿ ಎಂದ. ಒಂದಿನ ಕೆಲ್ಸ ಬಿಟ್ಟು ಕತ್ಲಾಗುತ್ತಿದ್ದಂತೆ ಎಲ್ಲರೂ ಜೇನ್ ಕುಯ್ಯೋಕೆ ಹೊರಟ್ರು. ಎಲ್ಲರಿಗೂ ಪುಕು ಪುಕು. ಯಾಕಂದ್ರೆ ಬೈಲಲ್ಲಿರೋ ಮರದಲ್ಲಿ ಅಷ್ಟೋಂದು ಜೇನ್ ಕೂತವೆ ಅಂದ್ರೆ. ಅದರಲ್ಲಿ ದೈಯ ಉಂಟು ಅಂತ ಪ್ರಚಾರವಾಗಿತ್ತು. ಆದ್ರೆ ಸಿದ್ದ ಹಿಂದೆ–ಮುಂದೆ ನೋಡ್ದೆ, ಹುಲ್ ಕಟ್ಟು, ಬೆಂಕಿ ಪೊಟ್ಟಣ ಬೆನ್ನಿಗೆ ಕಟ್ಕೊಂಡು ಮರ ಹತ್ತೇಬಿಟ್ಟ. ಹುಲ್‌ಕಟ್ಟಿಗೆ ಬೆಂಕಿಕೊಟ್ಟು ಹುಳ ಹಾರಿಸಿದ ಗೋವಿಂದಂಗೆ ಪಾತ್ರೆ ಮೇಲ್ ಕಳ್ಸಿ ಅಂದ. ಕೊನೆಗೆ ಏನೇನೋ ಮಾಡಿ, ಕೊನೆನೇಣ್ ತಂದು ಪಾತ್ರೆ ಮೇಲೆ ಕಳ್ಸಿದ್ರು. ಸಿದ್ದ ಜೇನ್ ಕುಯ್ದು ಸವಾಲಿನಲ್ಲಿ ಗೆದ್ದೇ ಬಿಟ್ಟ. ಹಂಗೆ ವಡೇರ ಮನೆ ಸಾಲದಿಂದಲೂ ಕುಲಾಸೆ ಆದ. ಆದರೆ ಗೋವಿಂದನ ನಂಟು ಬಿಡದ ಬಂಟನಾದ.

ಅವತ್ತೊಂದು ದಿವಸ ಸಿದ್ದ ಗೋವಿಂದನ ಹತ್ರ ಬಂದು. 'ಇವತ್ತು ಅಮಾಸೆ ಶಿಕಾರಿ ಹೋಗನಾ' ಅಂತ ಕೇಳ್ದ. ಅದಕ್ಕೆ ಗೋವಿಂದ, 'ಬ್ಯಾಟ್ರಿ ಸೆಲ್ ಕಡಿಮೆ ಉಂಟು ನೋಡಣ, ಕತ್ಲಗೆ ಬಾ' ಅಂದ. ಅಷ್ಟು ಹೇಳಿದ್ಮೇಲೆ ಸಿದ್ಧಂಗೆ ಗೊತ್ತು. ಶಿಕಾರಿಗೆ ಹೋಗೋದು ಗ್ಯಾರಂಟಿ ಅಂತ. ಗೋವಿಂದ ವಡೇರ ಮನೇಲಿ ಇದ್ಗೊಂಡು, ಹೊರಚೌಕೀಲಿ ಅವನದ್ದೇ ಅಂತ ಒಂದು ಕ್ವಾಣೆ ಮಾಡ್ಕೊಂಡು ಅಲ್ಲೇ ಮಲಗುತ್ತಿದ್ದ. ರಾತ್ರಿ ಗೋವಿಂದ ಎಲ್ಲಿಗೇ ಹೋಗ್ಲಿ, ಬರ್ಲಿ ಒಳಗಿದ್ದೋರಿಗೆ ಗೊತ್ತಾಗ್ತಾ ಇರ್ಲಿಲ್ಲ. ಸಿದ್ದ ಲಾಟೀನು, ಕತ್ತಿ, ಕಂಬ್ಳಿ ಎಲ್ಲಾ ಹಿಡ್ಕೊಂಡು ಬರ್ತಿದಂಗೆ, ಗೋವಿಂದ ತಲೆಗೆ ಟವಲ್ ಕಟ್ಟಿ, ಹೆಡ್‌ಲೈಟ್ ಕಟ್ಕೊಂಡು ರೆಡಿ ಆಗಿ ನಿಂತಿದ್ದ. ಸರಿ ಇಬ್ರೂ ಕಾಡದಾರೀಲಿ ಹೊರಟ್ರು.

ಸ್ವಲ್ಪ ಹೊತ್ತು ಆದಮ್ಯಾಲೆ ಸಿದ್ದ ಗೋವಿಂದನ್ನ ಎಬ್ಬಿಸಿಕೊಂಡು ಹೊರಟ. ಗೋವಿಂದ ಬ್ಯಾಟ್ರಿ, ಹೆಡ್ಲೈಟನ್ನೆಲ್ಲಾ ಬಗಲ ಚೀಲಕ್ಕೆ ಹಾಕ್ಕೊಂಡು ಕೋವಿ ಹಿಡ್ಕೊಂಡು ಸಿದ್ದನ ಹಿಂದೆ ಹೋದ. ಸುಮಾರು ದೂರ ಗಡೀ ಗುಡ್ಡೆ ಕಾಡಿಂದ ಇಳಿದು, ಕೊಚ್ಚೊಳ್ಳಿ ಹೊಳೆ ಹತ್ರ ಸಂಕದ ಬೈಲು ಅಂತ ಕರೆಯೋ ಬೈಲಿಗೆ ದಾಟಿದ್ರು. ಕಾಡ್ಕೋಳಿ ಉದ್ದಕ್ಕೂ ಕೂಗ್ತಾ ಇರೋದು ಕೇಳ್ತಾ ಇತ್ತು. ಇವರು ಬೈಲಿಗೆ ದಾಟ

ಬೇಕು. ಇವ್ರು ಬರೋ ದಾರಿಗೆ ಎದುರಾಗಿ ಒಂದು ಪ್ರಾಣಿ ಬಂತು!

ಅದೊಂತರ ವಿಚಿತ್ರಪ್ರಾಣಿ. ಉಡಾನೂ ಅಲ್ಲ, ಮೊಸಳೇನೂ ಅಲ್ಲ. ಮೊಸಳೇ ತರ ಬಾಲ. ಬೆನ್ನು ಗುಗ್ಗರಿಸಿ ಕೊಂಡಿದೆ. ಆದರೆ ಅದರ ಹಿಂದೆ ಯಾವುದು ಮುಂದೆ ಯಾವುದು ಅಂಥ ಗೊತ್ತಾಗ್ತಿಲ್ಲ. ಹತ್ತಿರ ನೋಡಿದ್ರೆ ತಲೆಗಿಂತ ಬಾಲಾನೇ ದೊಡ್ಡದು. ಬೆನ್ನು ಎತ್ತರ ಮಾಡಿಕೊಂಡು ನವಿಲಿನ ತರ ನಧಾನಕ್ಕೆ ಒಂದೊಂದೇ ಹೆಜ್ಜೆ ಎತ್ತಿಡುತ್ತಿದೆ. ಕವಣ (ಮಂಜು, ಕಾವಳ) ದಟ್ಟವಾಗಿದ್ರೂ ಸ್ಪಷ್ಟವಾಗಿ ಆ ಪ್ರಾಣಿ ಕಾಣ್ತಾ ಇದೆ. ಸಿದ್ದ ಅಂಥ ಪ್ರಾಣೀನೇ ನೋಡಿರಲಿಲ್ಲ. ಅದು ಕಂಡ ಕೂಡ್ಲೇ ಗಕ್ ಅಂಥ ನಿಂತ. ಗೋವಿಂದನಿಗೆ, 'ಅದೆಂತದ್ರೋ ಅದು....' ಅಂತ ಪಿಸುಗುಟ್ಟಿದ, ಗೋವಿಂದ 'ತಡಿ.... ತಡೀ....' ಎಂದು ರಾತ್ರಿ ಶಿಕಾರಿಗೆ ಹಾಕಿದ್ದ ಈಡು ಹಂಗೆ ಇತ್ತಲ್ಲಾ 'ಢಂ' ಅಂತ ಹೊಡ್ದೇ ಬಿಟ್ಟ. ಅಷ್ಟುದ್ದದ ಪ್ರಾಣಿ ಓಡುಹುಳದ ಥರ ಮುದ್ದೆಯಾಗಿ ಚೆಂಡಿನಂತೆ ಉರುಳುರುಳಿ ಹೋಗಿ ಉಡಿ ಒಳಗೆ ಬಿತ್ತು.

ರಾತ್ರಿ ಶಿಕಾರಿ ಆಗದಿದ್ದರೆ ಏನಂತೆ, ಬೆಳಗ್ಗೆಯೇ ಪ್ರಾಣಿ ಸಿಕ್ಕಿದೆ. ಗೋವಿಂದ ಹೊಡೆದಿದ್ದಾನೆ, ಪ್ರಾಣಿ ಬಿದ್ದಿದೆ. ಕಾಲು ಕಡೀಬೇಕು ಅಂತ ಸಿದ್ದ ಓಡಿಹೋಗಿ ನೋಡಿದ್ರೆ, ಕಾಲೇ ಕಾಣ್ತಿಲ್ಲ. ಕೈಯು ಕಾಣ್ತಿಲ್ಲ! ಅಭ್ಯಾಸ ಬಲದಿಂದ ಸಿದ್ದ ಓಡಿ ಹೋದವನೇ ಎತ್ತಿದ ಕತ್ತಿಯಿಂದ ಒಂದು ಪೆಟ್ಟು ಹಾಕೇ ಬಿಟ್ಟಿದ್ದ. ಇವ ಕಡ್ದ ಹೊಡತಕ್ಕೆ ಕತ್ತಿ ತೆವುಂಟಿ ಹಾರಿ ಕತ್ತಿ ಬಾಯಿ ಹೋಯ್ತು. ಕಲ್ಲು ಕಡಿದಂಗೆ ಶಬ್ದ ಬಂತು. ತಾನು ಕಡದದ್ದು ಪ್ರಾಣೀನಾ ಅಥವಾ ಕಲ್ಲೋ ಒಂದೂ ಗೊತ್ತಾಗ್ಲಿಲ್ಲ ಸಿದ್ದಂಗೆ. ಅಷ್ಟೋತ್ತಿಗೆ ಗೋವಿಂದ ಕೆಲಸ ಕೆಡ್ತು ಅಂತ ಓಡಿಬಂದು ನೋಡ್ತಾನೆ ಚಿಪ್ಪಿನ ಹಂದಿ. ಅವ ಕೂಡಾ ಚಿಪ್ಪಿನ ಹಂದಿ ಬಗ್ಗೆ ಕೇಳಿದ್ನೆ ಹೊರೆತು ನೋಡಿದ್ದು, ಶಿಕಾರಿ ಮಾಡಿದ್ದು ಇದೇ ಮೊದಲು.

ಮಲೆನಾಡಿನ ಅಪರೂಪದ ಪ್ರಾಣಿಗಳಲ್ಲಿಯೇ ಅಪರೂಪವಾದದ್ದು ಈ ಚಿಪ್ಪಿನ ಹಂದಿ. ಇದು ಕೀಟಾಹಾರಿ. ಇರುವೆ, ಗೆದ್ದಲು ಗೂಡುಗಳಿರುವ ಹುತ್ತಗಳನ್ನು ಅಥವಾ ಮರದ ಪೊಟರೆಗಳನ್ನು ತನ್ನ ಬಲವಾದ ಉಗುರುಗಳಿಂದ ಕಿತ್ತು, ತನ್ನ ಚೂಪು ಮೂತಿ

ಒಳಹೋಗುವಂತೆ ತೂತು ಮಾಡುತ್ತದೆ. ಆಮೇಲೆ ತನ್ನ ಉದ್ದ ಮೂತಿಯನ್ನು ಹಾಕಿ, ಸ್ಟ್ರಾ ತರ ಬಳಸಿ ಉಸಿರಿನಲ್ಲೇ ಕೀಟಗಳನ್ನು ಎಳೆದು ಬಾಯಿ ತುಂಬಿಸಿಕೊಳ್ಳುತ್ತದೆ.

ಓಡಿ ಬಂದ ಗೋವಿಂದ ಶಿಕಾರಿಯಾದ ಹುಮ್ಮಸ್ಸಲ್ಲಿ ' ಅಟ್ಟೆಬೀಳ್ ಉಕ್ಕೋಂಡು ಬಾ' ಅಂತ ಸಿದ್ದನ್ನ ಕೂಗಿದ. ಅಟ್ಟೆಬೀಳು ಗಟ್ಟಿಯಾದ ನಾರಿನ ಬೀಳು. ಅದನ್ನು ಉಡಿದಷ್ಟು ಗಟ್ಟಿ (ತಿರುವಿದಷ್ಟು). ಅದಕ್ಕೆ ಅದನ್ನ ದನಗಳನ್ನು ಕೊಟ್ಟಿಗೆಯಲ್ಲಿ ಕಟ್ಟುವ ಜಾಬಕ್ಕೆ, ಮರುಗುಣಿ ಕಟ್ಟಲಿಕ್ಕೆ ಅಥವಾ ಹಗ್ಗದಂತೆ ಇತರ ಕೆಲಸಗಳಿಗೆ ಬಳಸುತ್ತಾರೆ. ಹಂಗೆ ಉದ್ದ ಬಡಿಗೆಯನ್ನೂ ಕಡ್ಕೊಂಡು ಬಾ ಅಂತ ಬೇರೆ ಹೇಳ್ದ.

ಅಟ್ಟೇಬೀಳಿನಲ್ಲಿ ಗೋವಿಂದ ಒಂದು ಒಳ್ಳೆ ಸಿಕ್ಕ ಮಾಡಿದ. ಸಿಕ್ಕ ಅಂದರೆ, ವಸ್ತುವನ್ನು ಸಿಕ್ಕಿಸಿ ಮೇಲೆ ನೇತುಹಾಕುವುದು. ಮನೆಯಲ್ಲಿ ಹಾಲು ಮೊಸರು ಮಾಂಸ ಇತ್ಯಾದಿ ಪದಾರ್ಥಗಳನ್ನು ಬೆಕ್ಕಿಗೆ ಸಿಕ್ಕದಂತೆ ಇಡಲು ಸಿಕ್ಕದಲ್ಲಿ ಮೇಲೆ ಇರುತ್ತಾರೆ. ಗೋವಿಂದ ಸಿಕ್ಕದಲ್ಲಿ ಆ ಪ್ರಾಣಿಯ ಉಂಡೆಯಂತೆ ದೇಹವನ್ನು ನಗಾರಿತರ ಸಿಕ್ಕಿಸಿ, ಬಡಿಗೆಯನ್ನು ಒಂದು ಕಡೆ ಗೋವಿಂದ ಮತ್ತೊಂದು ಕಡೆ ಸಿದ್ದ ಹೊತ್ತರು. ಗೋವಿಂದ ತನ್ನ ಕಂಬ್ಳಿಯನ್ನು ಸಿದ್ದನಿಗೆ ಕೊಟ್ಟು, ಅವನು ಒಂದು ಹೆಗಲಲ್ಲಿ ಕೋವಿ, ಇನ್ನೊಂದು ಹೆಗಲಲ್ಲಿ ಬಡಿಗೆಯನ್ನು ಹೊತ್ತಿದ್ದ ಸಿದ್ದನಿಗೆ, 'ಸಿದ್ದಾ ನಾವು ಇದನ್ನ ಹೊತ್ಕೊಂಡು ಹೋಗಿ ಹಸಿಗೆ ಮಾಡುವವರೆಗೂ ನೀನು ಹೀಗೇ ಇದನ್ನು ಬಡಿಯುತ್ತಲೇ ಇರಬೇಕು. ಬಡಿಯೋದು ನಿಲ್ಲಿಸಿದರೆ, ನನ್ನ ದೂರ್‌ಕೊಬ್ಯಾಡ. ನಿನ್ನ ತಲೆಗೇ ಬಾಯಿ ಕೊಟ್ರು ಕೊಡ್ತು. ಅದರಲ್ಲೇನ್ ಆಶ್ಚರ್ಯ ಇಲ್ಲಾ' ಅಂತ ಅಂದ. ಸಿದ್ದ ಬೆಳಗ್ಗೆ ಏಳುತ್ತಿದ್ದಂಗೆ ಗೋವಿಂದನ ಶಾಪ ಕೇಳಿ ಇವತ್ತು ಇವನ್ಯಾಕೋ ಸರಿಯಿಲ್ಲ, ಎಂತೆಂತದೋ ಮಾತಾಡ್ತಾನೆ. ಆದರೆ ಕೇಳದೇ ಬಗೆ ಇಲ್ಲ ಅಂದುಕೊಂಡು ಗೋವಿಂದ ಹೇಳಿದ್ದಕೆಲ್ಲಾ 'ಹುಂ... ಹುಂ...' ಅಂದ.

'ಸುಮ್ನೆ ಹೆಣ ಹೊತ್ಗೊಂಡು ಹೋದಂಗೆ ಎಂಥಾ ಹೋಗದು. ಇದೆಂಥಾ ಕಟ್ಟೆ ಹಂದಿನೇಂಡ್ರೋ, ಬಡಿದ್ರೂ ಕೂಗೋದಿಲ್ಲ, ಬೈದ್ರೂ ಕೂಗೋದಿಲ್ಲ. ಇದರ ಕತೆಯೆಂತಾ' ಅಂತ ಸಿದ್ದ ಕೇಳಿಯೇ ಬಿಟ್ಟ.

ಅದಕ್ಕೆ ಗೋವಿಂದ ಸರಿಯಾಗಿ ಉತ್ತರ ಕೊಡ್ಲಿಲ್ಲ. ಏನೋ ಬಹಳ ಯೋಚನೆ ಮಾಡ್ತಾ ಇರೋಹಾಗೆ ತಲೆಯಾಡಿಸಿದ ಅಷ್ಟೇ. ಕಟ್ಟೆ ಹಂದಿ ಎಂದರೆ ಬತ್ತದ ಪೈರಿಗೆ ರೋಗ ಬಂದಾಗ ಅಥವಾ ರೋಗ ಬರಬಾರದು ಅಂತ ಗದ್ದೆ ಕೊಗಿನಲ್ಲೆಲ್ಲ ಹಂದಿಯೊಂದನ್ನು ಕಾಲಿಗೆ ಬಡಿಗೆ ಕಟ್ಟಿ ಬಡಿಯುತ್ತ ಕೂಗಿಸುತ್ತ ಹೊತ್ತುಕೊಂಡು ಹೋಗುವ ಪರಿಪಾಠವಿದೆ.

ಗೋವಿಂದ ಸಿದ್ದನಿಗಿಂತ ಎತ್ತರದವ. ಹೊತ್ತುಕೊಂಡ ಬಾರ ಎಲ್ಲಾ ನನಗೆ ಬೀಳುತ್ತಿದೆ ಎಂದು ಸಿದ್ದನಿಗೆ ಅನ್ನಿಸುತ್ತಿತ್ತು. ಶಿಕಾರಿ ಮಾಡಿ ಯಾರ್‍ಯಾರೋ ಬಾಯಿ ಚಪಲ ತೀರಿಸುವುದು ಬಿಟ್ಟರೆ ನನಗೇನು ಲಾಭ? ಶಿಕಾರಿ ಮಾಡಿದ ತಪ್ಪಿಗೆ ಹೊರ್‍ಬೇಕು. ಇದು ನನ್ನ ಕರ್ಮ ಅಂತ ಹೊತ್ತುಕೊಂಡು, ಸಿದ್ದನಿಗೆ ಎಚ್ಚರಿಕೆ ಕೊಡುತ್ತಲೇ ಗೋವಿಂದ ಹೋಗ್ತಿದ್ದ. ಚಿಪ್ಪಂದಿಗೆ ಬಡೀತಾ ಬಡೀತಾ ಕೈ ಸೋತು, ಕತ್ತಿಲ್ಲೆಂತಾ ಬಡಿಯುವುದು ಅಂತ ಕೈಯಲ್ಲಿ ಬಡಿಯಕ್ಕೆ ಶುರು ಮಾಡ್ದ ಸಿದ್ದ. ಗೋವಿಂದ ಏನೇ ಹೇಳಿದ್ರೂ ಹಂದಿ ಸುಮ್ಮನಿದ್ದುದರಿಂದ ಕೈಯಲ್ಲಿ ಬಡೀತಾ ಬಡೀತಾ ಕಡೆಗೆ ಬಡಿಯುವುದನ್ನೂ ಬಿಟ್ಟು ಅದರ ಚಿಪ್ಪನ್ನು ಸವರಕ್ಕೆ ಶುರುಮಾಡ್ದ. ಸ್ವಲ್ಪ ಹೊತ್ತಾದ ಮೇಲೆ ಒಂದೇಕ್ಷಣದಲ್ಲಿ ಸಿದ್ದ. 'ಅಯ್ಯಯ್ಯೋ ನನ್ನ ಕೈಯ್ ಹೋತು' ಅಂತ ಕೂಗುತ್ತಾ, ಬಡಗೆ ಹೊತ್ತಾಕಿ ಬಲಗೈಯನ್ನು ಎಡಗೈಯಲ್ಲಿ ತೊಡೆ ಸಂದಿ ಒತ್ತಿ ಹಿಡಿದ.

ಸಿದ್ದ ಒಂದೇ ಸಾರಿ ಹೊತ್ತ ಹೊರೆಯನ್ನ ಬಿಸಾಡಿದ್ರಿಂದ ಗೋವಿಂದ ಹೆಗಲು ಸುಲ್ದ್ ಹೋಗಿತ್ತು. ಗೋವಿಂದನಿಗೆ ಸಿಟ್ಟು ಬಂದು ಸಿದ್ದನಿಗೆ ಕಪಾಳಕ್ಕೆ ಎರಡು ತಟ್ಟೇ ಬಿಡಬೇಕು ಅನ್ನಿಸ್ತು. 'ನೀನೇನ್ ನನ್ನ ತೆಗೆಯಬೇಕು ಅಂತಿದ್ದಿಯಾ..... ನಿನ್ನ ಜೊತೆ ಬರೋಕೆ ನಂಗೇನು ಗ್ರಹಚಾರ ಅಂದ್ಕೊಂಡಿದ್ಯಾ. ನಿಂಗೆ ನನ್ನ ಮೇಲೆ ಸಿಟ್ಟಿದ್ರೆ ಹೇಳು ನಿನ್ನ ಸವಾಸಕ್ಕೆ ಬರಲ್ಲ....' ಅವ ನೋವಿನಲ್ಲಿ ಅದೇನೇನ್ ಬೈದನೋ ಗೊತ್ತಿಲ್ಲ. ಸಿದ್ದ ಕೈ ಒತ್ತಿ ಹಿಡಿದುಕೊಂಡು ಬೊಬ್ಬೆಹೊಡೆಯುತ್ತಲೇ ಇದ್ದ. ಅವನ ಬಟ್ಟೆ ಬರೆ ಎಲ್ಲ ರಕ್ತಮಯ. ಇತ್ಲಗೆ ಗೋವಿಂದ ವಾಚಾಮಗೋಚರ ಬೈಯುತ್ತಲೇ ಇದ್ದ, ಸಿದ್ದಂಗೆ ಕೈ ಉರಿ, ಗೋವಿಂದನ ಸಿಟ್ಟಿನ ಉರಿ ಎರಡೂ ನೆತ್ತಿಗೆ ಏರಿತ್ತು. ಗೋವಿಂದನ ಮಾತನ್ನು ನಿರ್ಲಕ್ಷ್ಯ ಮಾಡಿ

ಸಿದ್ದ ತನ್ನ ಹೆಬ್ಬೆರಳನ್ನ ಕಳೆದು ಕೊಳ್ಳುವುದರಲ್ಲಿದ್ದ. ಅವನ ಹೆಂಡತಿಯ ಪುಣ್ಯ, ಚಿಪ್ಪಿನ ಹಂದಿ ಸಿದ್ದನ ಹೆಬ್ಬೆರಳಿನ ಬುಡಕ್ಕೆ ಗಾಯ ಮಾಡಿತ್ತು. ಸಿದ್ದ ಬೊಬ್ಬೆ ಹೊಡೆಯುತ್ತಿದ್ದರೆ, ಗೋವಿಂದ ತನ್ನ ಸಿಟ್ಟಿನಲ್ಲಿ ಸಿದ್ದನ ನೋವನ್ನು ಮರೆಸಲು ಪ್ರಯತ್ನಿಸುತ್ತಿದ್ದ.

ಕೇರಿಯಲ್ಲಿ ಎಲ್ಲರನ್ನೂ ಕರೆದ ಗೋವಿಂದ, ಚಿಪ್ಪಂದಿಯನ್ನು ತೋರಿಸಿ, ಅಪರೂಪದ ಬ್ಯಾಟೆ ತಂದೀನಿ ಎಂದ. 'ನಿಮಿಷಕ್ಕೆ ಒಂದು ಸಾರಿ ಅದನ್ನು ಬಡಿತಾನೇ ಇರಬೇಕು. ಇಲ್ಲ ಅಂದ್ರೆ ಅಪಾಯ ಆಗುತ್ತೆ' ಅಂತ ಎಚ್ಚರಿಸಿ ಅಲ್ಲಿಂದ ಹೊರಟ. ಸಿದ್ದನ ಕೇರಿಯವರೆಲ್ಲಾ ಅಪರೂಪದ ಬಾಡಿನ ಆಸೆಯಿಂದ ಎಲ್ಲ ಕೆಲಸವನ್ನು ಚಕಾಚಕ್ ಅಂತ ಮಾಡಿದ್ರು. ಒಳ್ಳೊಳ್ಳೇ ಕುಂತೆಗಳನ್ನು ತಂದು ಬೆಂಕಿ ಮಾಡಿದ್ರು. ಬೆಂಕಿ ದೊಡ್ಡ ಉರಿ ಎದ್ದ ಮೇಲೆ ಅದಕ್ಕೆ ಉಂಡೆಗಟ್ಟಿಕೊಂಡಿದ್ದ ಚಿಪ್ಪಿನ ಹಂದಿಯನ್ನು ಹಾಕಿದ್ರು, ಬೆಂಕಿ ಉರಿ ತಾಗುತ್ತಿದ್ದ ಹಾಗೇ ಹಂದಿಯು ಚಿಪ್ಪೆಲ್ಲಾ ಬಿಟ್ಟುಕೊಂಡು ನೆಟ್ಟಗಾಗಿತ್ತು. ಮೈಸುಟ್ಟಿದ್ದರಿಂದ ಅಷ್ಟರಲ್ಲಿ ಅದರ ಪ್ರಾಣ ಹೋಗಿತ್ತು. ಚೆನ್ನಾಗಿ ಸುಟ್ಟನಂತರ ಕತ್ತಿಯ ಹಿಂದಿನಿಂದ ಹೊಡೆದು ಚಿಪ್ಪು ಉದುರಿಸಿ ಹಸಿಗೆ ಮಾಡಿದ್ರು. 'ಹಂದಿ ಮಾಂಸಕ್ಕಿಂತ ರುಚಿಯಾಗಿತ್ತು' ಅಂತ ಆಮೇಲೆ ಅದನ್ನು ತಿಂದವರೆಲ್ಲಾ ಹೇಳಿದ್ರು. ಆದ್ರೂ ಸಿದ್ದನ ಕೈಗೊಂದು ಕಾಯಂ ಊನ ಆಗಿತ್ತು. ಅದು ಗುಣ ಆಗಬೇಕಾದ್ರೆ ಸೀತು ಆರು ತಿಂಗಳು ಮೆಣಸಿನ ಎಣ್ಣೆ ಹಚ್ಚಿ ಉಪಚಾರ ಮಾಡಬೇಕಾಯ್ತು.

*(ಮೂಲ : ಮಂಗನ ಬ್ಯಾಟೆ – ಮಲೆನಾಡ ಪರಿಸರ ಕಥನದಿಂದ ಆಯ್ದ ಭಾಗ)*

* * *

# ಕೊ ಕ್ಕೊ ಕ್ಕೋ.... ಕೋಳಿ ಅಂಕ

**–ಪಿ. ಸಾಯಿನಾಥ್**

**–ಕನ್ನಡಕ್ಕೆ : ಜಿ.ಎನ್.ಮೋಹನ**

ನನ್ನ ಜೊತೆ ತೆಲುಗು ಮಾತನಾಡಬಹುದು ಎನ್ನುವುದೇ ಧನುರ್ಜಯ ಹಂತಾಳ್‌ಗೆ ಖುಷಿ ತಂದಿತ್ತು. ತನ್ನ ಊರಿನ ಭಾಷೆ ಒರಿಯಾ ಹಾಗೂ ತೆಲುಗು ಎರಡೂ ಭಾಷೆ ಮಾತನಾಡನಲ್ಲ ಈತ ನನಗೆ ಸಿಕ್ಕಿದ್ದು ಮಲ್ಕಾನ್‌ಗಿರಿಯಲ್ಲಿನ ಕೋಳಿ ಅಂಕದಲ್ಲಿ.

ಕೇವಲ ೧೦ ರೂ.ಗಾಗಿ ದಿನಕ್ಕೆ ೧೪ ಗಂಟೆ ದುಡಿಯುವ ಜನರಿರುವ ಈ ಪ್ರದೇಶದಲ್ಲಿ ಕೋಳಿ ಅಂಕದಲ್ಲಿ ಕೆಲವೇ ನಿಮಿಷಗಳಲ್ಲಿ ಸಾವಿರಾರು ರೂ ಕೈದಾಟಿರುತ್ತದೆ. ಈ ಕೋಳಿ ಕಾದಾಟ ನಡೆಯುವ ಅಂಕಣಕ್ಕೆ ರೈತರು ಕೋಳಿಗಳನ್ನು ತರುತ್ತಿದ್ದಂತೆಯೇ ಏಜೆಂಟರು ಮಧ್ಯವರ್ತಿಗಳು ತಮ್ಮ ನೆಚ್ಚಿನ ಕೋಳಿಯ ಮೇಲೆ ಬಾಜಿ ಕಟ್ಟಲು ಆರಂಭಿಸುತ್ತಾರೆ. ಬಾಜಿ ಪ್ರವಾಹವೇ ಹರಿದು ಬರುತ್ತದೆ. ಕೆಲವು ಕೋಳಿಗಳು ೬೦೦ ರಿಂದ ೮೦೦ ರೂಗೆ ಮಾರಾಟವಾಗುತ್ತದೆ. ನೋಡಿದ ತಕ್ಷಣ ಕೋಳಿಯ ಕಾದಾಟದ ಹುಮ್ಮಸ್ಸು ಗುರುತು ಹಿಡಿಯುವ ಮಧ್ಯವರ್ತಿಗಳು ರೈತನಿಂದ ಕೋಳಿ ಕೊಂಡು ಇಡಿಗಂಟು ಮಾಡಿಕೊಳ್ಳಲು ಬಯಸುತ್ತಾರೆ. ಈ ಕೋಳಿಗಳನ್ನು 'ಸೂಕ್ತ' ಎದುರಾಳಿಯ ವಿರುದ್ಧ ಹೂಡಿ ಈ ಹಣ ಮಾಡಿಕೊಳ್ಳುತ್ತಾರೆ. ಕೆಲವರಂತೂ ಒಂದಕ್ಕಿಂತ ಹೆಚ್ಚು ಕೋಳಿ ಕೊಂಡುಕೊಳ್ಳುತ್ತಾರೆ.

ಕೆಲವೊಮ್ಮೆ ಈ ಏಜೆಂಟರು ಇನ್ನೂ ವಿಚಿತ್ರಕ್ಕೆ ಕೈ ಹಾಕುತ್ತಾರೆ. ಕೋಳಿ ಅಂಕಕ್ಕೆ ಇಳಿಯುವ ಎರಡೂ ಕೋಳಿಗಳನ್ನೂ ಇವರೇ ಕೊಂಡುಕೊಂಡುಬಿಡುತ್ತಾರೆ. ಹಾಗಾಗಿ ಇದರಿಂದ ಅವರಿಗೆ ಎರಡು ರೀತಿಯ ಲಾಭ, ಇವರಿಗೆ ಬೆಟ್ಟಿಂಗ್‌ನಿಂದಲೂ ಹಣ, ಫಲಿತಾಂಶ ಏನೇ ಆದರೂ ಇವಗೆ ಹಣ! ಆದರೆ ಈ ದಿನ ಮಾತ್ರ ಕೋಳಿಗಳನ್ನು

ಮಾರುವಂತೆ ಯಾರೆಂದರೆ ಯಾರೂ ಧನುರ್ಜಯನ ಮನ ಒಲಿಸಲು ಆಗಿರಲಿಲ್ಲ. ತನ್ನ ತೋಳಿನಲ್ಲಿ ಗತ್ತಿನಿಂದ ಬಿಳಿಹುಂಜವನ್ನು ಎತ್ತಿಕೊಂಡಿರುವ ಆತ 'ಈತ ಚಾಂಪಿಯನ್, ತನ್ನ ಎದುರಾಳಿಗೆ ಸರಿಯಾಗಿಯೇ ಮಣ್ಣುಮುಕ್ಕಿಸುತ್ತಾನೆ, ಇದರ ಮೇಲೆ ಬಾಜಿ ಕಟ್ಟಿ' ಎನ್ನುತ್ತಾ ತಿರುಗುತ್ತಿದ್ದ ಸಮೋಸ ಮಾರಾಟಗಾರರು, ತಾತ್ಕಾಲಿಕ ಟೀ ಅಂಗಡಿ ಮಾಲೀಕರು, ಜಿಲೇಬಿ ತಯಾರಿಸುವವರು, ಬಿಸ್ಕತ್ ಮಾರುವವರು ಎಲ್ಲರೂ ಮಲ್ಕಾನ್‌ಗಿರಿಗೆ ಕೆಲವು ಕಿಮೀ ದೂರದಲ್ಲಿರುವ ಈ ಸ್ಥಳಕ್ಕೆ ಧಾವಿಸಿದ್ದರು. ಏರು ದನಿಯಲ್ಲಿ ತಮ್ಮ ಸಾಮಗ್ರಿ ಮಾರಾಟಕ್ಕೆ ತೊಡಗಿದ್ದರು. ಮತ್ತೆ ಅಲ್ಲಿ ಹುಂಜಗಳೂ ಇದ್ದವು.

ನಾವು ಇನ್ನೂ ಸ್ಥಳಕ್ಕೆ ತಲುಪಲು ಒಂದು ಕಿಮೀ ಇದೆ ಎನ್ನುವಾಗಲೇ ಗದ್ದಲ ಗೌಜು ಕೇಳಿಬರುತ್ತಿತ್ತು. ಕೋಳಿಕಾಳಗಕ್ಕೆ ಇನ್ನೇನು ಸಜ್ಜಾಗುತ್ತಿರುವಾಗ ಜಿದ್ದಾಜಿದ್ದಿ ಮಾತು, ಕೇಕೆ, ಕೂಗಾಟ, ಶುರುವಾಯಿತು. ಇಡೀ ಸ್ಥಳ ವಿಚಿತ್ರ ರೀತಿಯಿಂದ ಕೂಡಿತ್ತು. ಹೊಡೆದಾಟದ ವಿವಿಧ ರೀತಿಯ ಕೂಗು ಕೇಳಿತ್ತು. ಈ ಕೋಳಿ ಅಂಕದ ಹೋರಾಟಗಾರರನ್ನು ಅಲ್ಲೇ ಒಂದೆಡೆ ಸಣ್ಣ ದಾರದಿಂದ ಕಟ್ಟಿಹಾಕಲಾಗಿತ್ತು.

ರೌಡಿ ಬಿಳೀಹುಂಜಗಳು ಅಲ್ಲೆ ಪಕ್ಕದಲ್ಲಿದ್ದ ತಮ್ಮ ಎದುರಾಳಿ ಕೆಂಪುಹುಂಜದ ಮೇಲೆ ದನಿ ಎತ್ತಿದ್ದವು. ದೊಡ್ಡ ಕಪ್ಪು ಹುಂಜಗಳು ತಮ್ಮ ವಿರೋಧಿಗಳ ಮೇಲೆ ಎಗರಿಬೀಳುತ್ತಿದ್ದವು. ದೂರದಿಂದ ಕೇಳಿದರೆ ಅಖಿಲ ಭಾರತ ಕುಕ್ಕುಟ ಸಮಾವೇಶದಲ್ಲಿ ಬಿಸಿಬಿಸಿ ಚರ್ಚೆ ನಡೆಯುತ್ತಿದೆಯೇನೋ ಎಂದು ಭಾಸವಾಗುತ್ತಿತ್ತು. ಇನ್ನೂ ಜನ ಸೇರುತ್ತಲೇ ಇದ್ದಾರೆ. ಗುಡ್ಡಗಾಡುಗಳಲ್ಲಿ ವಿವಿಧ ದಿಕ್ಕುಗಳಿಂದ ಅವರು ಬರುತ್ತಲೇ ಇದ್ದಾರೆ. ಅದರಲ್ಲಿ ಹಲವರು ತಮ್ಮ ಕಂಕುಳಲ್ಲಿ ಕಣ್ಣುಕಟ್ಟಿದ ಹುಂಜಗಳನ್ನು ಹೊತ್ತು ತಂದಿದ್ದಾರೆ. ಬೆಳೆಯನ್ನು ತುಳಿಯಬಾರದು ಎಂಬ ಕಾರಣಕ್ಕೆ ಈ ರೈತರು ಬದುವಿನ ಮೇಲೆ ಒಬ್ಬರ ಹಿಂದೆ ಒಬ್ಬರು ಸಾಗಿ ಬರುತ್ತಾರೆ. ಕೆಲವರಂತೂ ನೆರೆಯ ಆಂಧ್ರದಿಂದ ಬಂದಿದ್ದಾರೆ. ನಾವು ಈಗ ಇವರೆಲ್ಲರೂ ಬಂದು ಸೇರುತ್ತಿರುವ ಬಯಲಿನ ಮಧ್ಯೆ ನಿಂತಿದ್ದೇವೆ. ಇಲ್ಲಿಂದ ನೋಡಿದರೆ ಗುಟ್ಟಗಾಡುಗಳಿಂದ ನಡೆದು

ಬರುತ್ತಿರುವ ಜನಗಳ ಸಾಲು ಮನಮೋಹಕವಾಗಿ ಕಾಣಿಸುತ್ತಿದೆ.

ಮಲ್ಕಾನ್‌ಗಿರಿಯಲ್ಲಿ ಅಲ್ಲಲ್ಲಿ ಓಡಾಡುತ್ತಾ ಬೆಳಗಿನಿಂದಲೇ ಈ ಹುಂಜಗಳಿಗೆ ತರಬೇತಿ ನೀಡುವ ರೀತಿಯನ್ನು ನೋಡಿದ್ದೇನೆ. ಈ ಹುಂಜಗಳನ್ನು ಎತ್ತಿ ಗೋಡೆಗೆ ಅಪ್ಪಳಿಸುತ್ತಾರೆ. ಇದನ್ನು ನೋಡುವುದು ಕೂಡ ಕಷ್ಟವೇ. 'ಹುಂಜಗಳಿಗೆ ರೋಷ ಉಕ್ಕಬೇಕು ಸಿಟ್ಟಿನಿಂದ ರಭಸವಾಗಿ ಎರಗುವುದನ್ನು ಕಲಿಯಬೇಕು' ಎಂದು ಇಂತಹ ತರಬೇತುದಾರರಲ್ಲೊಬ್ಬನಾದ ಆನಂದ್ ಅನ್ನುತ್ತಾನೆ. ಈ ಕೋಳಿ ಅಂಕಕ್ಕಾಗಿಯೇ ಬಂದಿರುವ ಕೃಷ್ಣಾರೆಡ್ಡಿಯ ಕೈಯಲ್ಲಿದ್ದ ಕಣ್ಣು ಕಟ್ಟಿದ ಕೋಳಿ ಬೆಳಗ್ಗೆ ೫ ಗಂಟೆಗೇ ಇನ್ನೂ ತಾನು ನೋಡಿಯೂ ಇರದ ತನ್ನ ಎದುರಾಳಿಯ ಮೇಲೆ ಆವೇಶದಿಂದ ಕೂಗು ಹಾಕುತ್ತಿತ್ತು. ಇದರಿಂದಲೇ ನಮಗೆ ಕೋಳಿ ಅಂಕ ನಡೆಯುವ ಜಾಗ ಹಾಗೂ ಸಮಯ ಗೊತ್ತಾಗಿದ್ದು. ನಾವು ಹೊರಡುವಾಗ ಕೋಳಿಗಳಿಗೆ ಇನ್ನೂ ರೋಷ, ಆವೇಶವನ್ನು ಕಲಿಸಲಾಗುತ್ತಿತ್ತು.

ಕೋಳಿ ಅಂಕ ಆರಂಭವಾಗಲು ಇನ್ನೂ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿತ್ತು. ಹುಂಜಗಳನ್ನು ಹೊಂದಿಸುವ, ಏಜೆಂಟ್ ಹಾಗೂ ಮಧ್ಯವರ್ತಿಗಳ ನಡುವಿನ ಜಿಗುಟು ವ್ಯವಹಾರಗಳು ಕೋಳಿಕಾಳಗ ಆರಂಭವಾಗುವುದನ್ನು ತಡಮಾಡುತ್ತಲೇ ಇದೆ. ಅಂತೂ ಕೊನೆಗೆ ಹುಂಜಗಳನ್ನು ಹೊಂದಿಸಿಯಾಯಿತು. ಈಗ ಬಾಜಿಯ ಸಮಯ. ಕೆಂಪಿನ ಮೇಲೆ ಹತ್ತು, ಬಿಳಿಯದರ ಮೇಲೆ ೨೦ ಹೀಗೆ ಬಾಜಿ ಏರುತ್ತಲೇ ಇದೆ. ಈ ಬಾಜಿ ಕಟ್ಟುತ್ತಿರುವವರ ಪೈಕಿ ಸಂಭಾವಿತರಂತೆ ಕಾಣುತ್ತಿರುವ ಹಿರಿಯರೊಬ್ಬರೂ ಇದ್ದಾರೆ. ಅವರು ಇಲ್ಲಿ ಪಕ್ಕದ ಪ್ರದೇಶವೊಂದರ ಹೆಡ್ ಮಾಸ್ಟರ್ ಎಂದು ಧನುರ್ಜಯ ತಿಳಿಸಿದ.

ಕೋಳಿಅಂಕ ಮಲ್ಕಾನ್‌ಗಿರಿಯಿಲ್ಲಿ ಶತಮಾನಗಳಿಂದ ನಡೆದುಬಂದಿರುವ ಸಂಪ್ರದಾಯ. ಜೂಜು ಇದರ ಅವಿಭಾಜ್ಯ ಅಂಗ. ಕೋಳಿಕಾಳಗದ ಮೇಲಿನ ಪ್ರೀತಿಯಿಂದ ಸಾಕಷ್ಟು ಬಡರೈತರು ಇದಕ್ಕೆ ಧುಮುಕುತ್ತಾರೆ. ಆದರೆ ಈ ಕೋಳಿ ಅಂಕವೂ ಇತ್ತೀಚೆಗೆ ಸಿಕ್ಕಾಪಟ್ಟೆ ವಾಣಿಜ್ಯೀಕರಣಗೊಳ್ಳುತ್ತಿದೆ. ಬೇಗ ಬೇಗ ಫಲಿತಾಂಶ ಬರಲಿ ಎಂದು

ಮಾಲೀಕರು ಈಗ ಕೋಳಿ ಕಾಲಿಗೆ ಕತ್ತಿ ಕಟ್ಟುತ್ತಾರೆ.

ಈ ಬೆಳವಣಿಗೆ ಈ ಕೋಳಿಅಂಕದ ಮೂಲಸ್ವರೂಪವನ್ನೇ ಬದಲಿಸಿ ಹಾಕಿದೆ. ಮೊದಲು ಒಂದು ಕಾಳಗ ಒಂದು ಗಂಟೆ ಅಥವಾ ಅದಕ್ಕಿಂತ ಹೆಚ್ಚು ನಡೆಯುತ್ತಿತ್ತು. ಈಗ ಈ ಕತ್ತಿ ಉಪಯೋಗಿಸುವುದರಿಂದ ಕೆಲವೇ ನಿಮಿಷದಲ್ಲೇ ಕಾಳಗ ಖಲ್ಲಾಸ್. ಧನುರ್ಜಯ್ ಒಂದೊಂದು ಹುಂಜದ ಕಾಲಿಗೆ ಕಟ್ಟುವ ಒಂದೊಂದು ರೀತಿಯ ಐದು ಮಾದರಿಯ ಕತ್ತಿಗಳನ್ನು ತೋರಿಸಿದ.

ಕೋಳಿ ಅಂಕದ ಅಂಕಣ ೨೫ ಅಡಿ ಸುತ್ತಳತೆಯದ್ದು. ಬೊಂಬು ಹಾಗೂ ರೆಂಬೆ ಕೊಂಬೆ ಬಳಸಿ ಸೃಜನಾತ್ಮಕವಾಗಿ ಅಂಕಣವನ್ನು ರೂಪಿಸಲಾಗಿದೆ. ಪ್ರತೀ ಹುಂಜದ ಮಾಲೀಕನಿಂದ ಇಂತಿಷ್ಟು ಅಂತ ಪ್ರವೇಶಧನ ವಸೂಲು ಮಾಡಲಾಗುತ್ತದೆ. ಅಲ್ಲದೇ ಬಾಜಿ ಮೊತ್ತದಿಂದ ಹಿಡಿದು ಏನಾದರೂ ಹೊಡೆದಾಟವಾದರೆ ಅದರಲ್ಲೂ ಪಾಲು ಕೊಡಬೇಕು. ನಾನು ಅಂಕಣದಲ್ಲಿ ಆಮೇಲೆ ಸಾಕಷ್ಟು ಫೋಟೋಗಳನ್ನು ತೆಗೆಯಲು ಇದರ ಸಂಯೋಜಕ ಅನುಮತಿ ನೀಡಿದ.

ಮೊದಲು ಹಗುರ ಹುಂಜಗಳ ಸರದಿ. ಆಮೇಲೆ ಸಾಕಷ್ಟು ಜನಸೇರುತ್ತಾ, ಬಾಜಿಮೊತ್ತ ಏರುತ್ತಾ ಹೋದಹಾಗೆ ಭಾರಿ ಕೋಳಿಗಳು ಎಂಟ್ರಿ ಕೊಡುತ್ತವೆ. ಆರಂಭದ ಕಾಳಗ ಅತಿ ಬೇಗ ಮುಗಿದುಹೋಗುತ್ತದೆ, ಕೆಂಪು ಹುಂಜದ ವಿರುದ್ಧ ಕಾಳಗಕ್ಕೆ ನಿಂತಿರುವ ಬಿಳಿಹುಂಜ ಗೆಲುವಿನ ಕೇಕೆ ಹಾಕಿತು. ಅದರ ಮಾಲೀಕ ಹತಾಶೆಯಿಂದ ನಿಟ್ಟುಸಿರಿಟ್ಟ. ಕೋಳಿಅಂಕದಲ್ಲಿ ಸೋತ ಮಾಲೀಕ ಹಣವನ್ನು ಮಾತ್ರವಲ್ಲ, ಹುಂಜವನ್ನೂ ಕಳೆದುಕೊಳ್ಳುತ್ತಾನೆ. ಅದು ಎದುರಾಳಿ ಮಾಲಿಕನಿಗೆ ಆ ರಾತ್ರಿಯ ಊಟಕ್ಕೆ.

ಹಗುರ ಹುಂಜಗಳು ಅಂಕಣ ಖಾಲಿ ಮಾಡಿದ ನಂತರ ಮಧ್ಯಮ ರೀತಿಯ ಹುಂಜಗಳು ಅಂಕಣ ಪ್ರವೇಶಿಸುತ್ತವೆ.ಈ ಸುತ್ತಿನಲ್ಲಿ ಮಾಲೀಕರಿಬ್ಬರೂ ತಮ್ಮ ಹುಂಜಗಳನ್ನು ಹಿಡಿದು ಮೂರು ಬಾರಿ ಕೊಕ್ಕಿಗೆ ಕೊಕ್ಕು ತಾಕಿಸುವುದರೊಂದಿಗೆ ಪಂದ್ಯ ಆರಂಭವಾಗುತ್ತದೆ.

ಇದು ಪ್ರತಿಸ್ಪರ್ಧಿ ಹುಂಜಗಳು ತಮ್ಮ ಎದುರಾಳಿಯ ಶಕ್ತಿ ಸಾಮರ್ಥ್ಯಗಳನ್ನು ಅಂದಾಜು ಮಾಡಲು ಇರುವ ವಿಧಾನ. ಮೂರನೇ ಸುತ್ತು ಮುಗಿದು ನಾಲ್ಕನೆಯ ಸುತ್ತಿನಲ್ಲಿ ನಡುಗಾಳಿಯಲ್ಲಿ ಜಿಗಿದು ಕುಕ್ಕುವುದರೊಂದಿಗೆ ಕಾಳಗ ಆರಂಭ.

ಇದು ಯಾವಾಗಲೂ ಹೀಗೆಯೇ ಆಗುವುದಿಲ್ಲ. ತರಬೇತಿ ಸಮಯದಲ್ಲಿ ನಮಗೆ ಗೊತ್ತಾಗುವಂತೆ ಈ ಹುಂಜಗಳಿಗೆ ವಿಚಿತ್ರ ಮೂಡುಗಳಿರುತ್ತವೆ, ಒಮ್ಮೆ ಪಿತ್ತ ಕೆದರಿದಂತೆ ಎದುರಾಳಿಯನ್ನು ಮುಗಿಸೇಬಿಡುವಂತೆ ಹೊಡೆದಾಡುತ್ತವೆ. ನಂತರ ಏನೂ ಆಗದೆ ಎಷ್ಟೋ ಹೊತ್ತು ಸಮಯ ಕಳೆದು ಹೋಗುತ್ತದೆ. ಮತ್ತೆ ಮರುಕ್ಷಣ ಕಿತ್ತಾಟ.

ಬೆಳಗ್ಗೆ ಹೊರಗೆ ಒಂದು ಟೀ ಸ್ಟಾಲ್ ಬಳಿ ಎರಡೂ ಹುಂಜಗಳು ಶಾಂತಿಯುತವಾಗಿ ಕಾಳು ಕುಕ್ಕುತ್ತಾ ಓಡಾಡುತ್ತಿದ್ದವು. ಇದ್ದಕ್ಕಿದ್ದಂತೇ ಅವೆರಡೂ ಗುರ್ರಾಯಿಸಿ, ದನಿ ತೆಗೆದು ಕೂಗಿ ಯುದ್ಧಕ್ಕೇ ನಿಂತುಬಿಡುತ್ತಿದ್ದವು. ಆ ನಂತರ ಒಂದಷ್ಟು ಕ್ಷಣಗಳಂತೂ ನಾವು ಉಸಿರು ಬಿಗಿಹಿಡಿದು ನೋಡುವಂತೆ ಪುಕ್ಕಗಳು ಕಿತ್ತು ಹೋಗುವಂತೆ ಹಾರಾಡುತ್ತಿದ್ದವು. ನಂತರ ನಾವು ನೋಡಿದ್ದೇ ಸುಳ್ಳೇನೋ ಎನ್ನುವಂತೆ ಅವು ಮತ್ತೆ ಶಾಂತಿಯುತವಾಗಿ ಕಾಳು ಹೆಕ್ಕಲು ಹೋಗುತ್ತಿದ್ದವು. ಮರುಕ್ಷಣ ಯಾವುದೇ ಸೂಚನೆ ಇಲ್ಲದೆ ಶರವೇಗದಲ್ಲಿ ಯುದ್ಧಕ್ಕೆ ಬಿದ್ದವು. ಈ ಶಾಂತಿ, ಈ ಯುದ್ಧ ಸಾವಧಾನವಾಗಿ ಮುಂದಿನ ಅರ್ಧಗಂಟೆಯವರೆಗೂ ನಡೆಯಿತು.

ಆದರೆ ಕೋಳಿ ಅಂಕದ ಅಂಕಣದಲ್ಲಿ ಇಷ್ಟು ಸುಖ ಇಲ್ಲ. ಇದು ನಿಜವಾದ ಹೋರಾಟ. ಒಮ್ಮೆ ಹುಂಜಗಳನ್ನು ಒಂದರ ವಿರುದ್ಧ ಒಂದನ್ನು ಹೂಡಿದರೆ, ಅದರ ಮಾಲೀಕರು ಈ ಹುಂಜಗಳಿಗೆ ಕೊಕ್ಕು ಹಚ್ಚುತ್ತಾ, ಬೈಯುತ್ತಾ, ಅವು ದೂರ ಹೋಗಿ ನಿಂತರೆ ಮತ್ತೆ ಎಳೆದು ತಂದು ಕಾಳಗಕ್ಕೆ ಹಚ್ಚುತ್ತಾ ಓಡಾಡುತ್ತಿದ್ದರು.

ಇನ್ನೂ ಒಂದಷ್ಟು ಸುತ್ತು ಮುಗಿದ ನಂತರ ಧನುರ್ಜಯನ ಸರದಿ ಬಂತು. ಆತನ ಬಳಿ ಹುಂಜವನ್ನು ಕೆಂಪು ಹುಂಜದ ವಿರುದ್ಧ

ಹೂಡಲಾಯಿತು. ಇಬ್ಬರು ಮಾಲೀಕರು, ಎರಡು ಹುಂಜಗಳ ಕೊಕ್ಕು ಉಜ್ಜಿಸಿ, ಪರಸ್ಪರರ ಬಲ ಅರ್ಥ ಮಾಡಿಸಿದ ನಂತರ ನೋಡ ನೋಡುತ್ತಿದ್ದಂತೆಯೇ ಕೆಂಪು ಹುಂಜ ಹಾರಿ ಧನುರ್ಜಯನ ಬಿಳಿ ಹುಂಜದ ಕುತ್ತಿಗೆಗೇ ಏಟು ನೀಡಿತು. ಈ ಹಂತದಲ್ಲಿ ಯಾವುದೇ ಪೂರ್ವಾಗ್ರಹವಿಲ್ಲದ ಅಂಪೈರ್ ಕಾಳಗವನ್ನು ನಿಲ್ಲಿಸಬಹುದಾಗಿತ್ತು. ಆದರೆ ಆತ ಗೇಟ್‌ನಲ್ಲಿ ಆದ ಸಂಗ್ರಹವನ್ನು ಎಣಿಸುವುದರಲ್ಲಿ ಬ್ಯುಸಿ. ಇದರಿಂದಾಗಿ ಧನುರ್ಜಯನ ಹುಂಜ ರಕ್ತ ಸುರಿಸುತ್ತಾ ಮೊದಲ ಸುತ್ತಿಗೆ ಪ್ರವೇಶ ಕೊಟ್ಟಿತ್ತು.

ಮೊದಲ ಸುತ್ತು; ಹುಂಜಗಳೆರಡೂ ಶರವೇಗದಲ್ಲಿ, ಭಾರಿ ರಭಸದಿಂದ ಪರಸ್ಪರರ ಮೇಲೆರಗಿದವು. ಆದರೆ ನಮ್ಮ ಚಾಂಪಿಯನ್ ಬಿಳಿ ಹುಂಜ ಮಾತ್ರ ಬಣ್ಣ ಕಳೆದುಕೊಂಡಂತಾಗಿತ್ತು. ಕೆಂಪು ಹುಂಜ ಎಲ್ಲಾ ದಿಕ್ಕಿನಿಂದಲೂ ಧಾಳಿ ಮುಂದುವರಿಸಿತು. ಕಾಲಿಗೆ ಕಟ್ಟಿದ್ದ ಕತ್ತಿ, ಕೊಕ್ಕು ಎರಡೂ ಧನುರ್ಜಯನ ಬಿಳಿ ಭರವಸೆಯನ್ನು ಹುಸಿಮಾಡುತ್ತಾ ಇತ್ತು.

ಬಿಳಿ ಹುಂಜದ ರೆಕ್ಕೆಯಡಿ, ಎದೆಯ ಮೇಲೆ ಏನಿಲ್ಲೆಂದರೂ ನಾಲ್ಕು ಭಾರೀ ಏಟು ಬಿತ್ತು. ನೋಡುತ್ತಿರುವವರು ಹುಚ್ಚೆದ್ದರು. ಆದರೆ ಈ ಹುಂಜಗಳೆರಡರ ಕಾಲಿಗೆ ಕಟ್ಟಿದ್ದ ಕತ್ತಿ ಸಡಿಲವಾಗಲು ಆರಂಭಿಸಿತು. ಅದನ್ನು ಪುನಃ ಸರಿಯಾಗಿ ಕಟ್ಟಲು ಮಾಲಿಕರಿಬ್ಬರೂ ತಾತ್ಕಾಲಿಕ ಯುದ್ಧವಿರಾಮ ಘೋಷಿಸಿದರು. ಇದು ಎರಡನೇ ಸುತ್ತಿಗೆ ಮೊದಲು ಸಿಕ್ಕ ತಾತ್ಕಾಲಿಕ ವಿರಾಮ.

ಎರಡನೆಯ ಸುತ್ತು: ಮತ್ತೆ ಎರಡು ಹುಂಜಗಳೂ ಗಾಳಿಯಲ್ಲಿ ಹಾರಿದವು. ಮೊದಲ ಸುತ್ತಿನ ಏಟಿನಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದ ಧನುರ್ಜಯನ 'ಚಾಂಪಿಯನ್' ಒಂದು ಕ್ಷಣದಷ್ಟು ನಿಧಾನವಾಯಿತು. ಆತನ ಎದುರಾಳಿ ರೆಕ್ಕೆ ಬಡಿಯುತ್ತಾ, ಕುತ್ತಿಗೆಯನ್ನು ಇರಿಯಿತು. ಆನಂತರ ಕೆಂಪು ಹುಂಜದ್ದೇ ಆಟ. ಎರಡು ಕತ್ತಿಯೇಟು ಅಷ್ಟೇ ಬಿಳಿ ಹುಂಜದ ಎದೆ ರಕ್ತದ ಕಲೆಯಿಂದ ತುಂಬಿಹೋಯಿತು.

ಈ ಹಂತದಲ್ಲಿ ಬಿಳಿಹುಂಜಕ್ಕೆ ವೈರಾಗ್ಯ ಆವರಿಸಿಕೊಂಡಿತು. ಅದು ಯುದ್ಧ ವೈರಾಗ್ಯ ತಳೆದು ಅಂಕಣದ ಮೂಲೆಗೆ ಹೋಗಿ ತಪಸ್ಸಿಗೆ ಕುಳಿತುಬಿಟ್ಟಿತು. ಪ್ರೇಕ್ಷಕರ ಗದ್ದಲ, ಮಾಲೀಕನ ಕರುಣೆ ಇಲ್ಲದ ಬೈಗುಳವನ್ನು ಕಿವಿಗೇ ಹಾಕಿಕೊಳ್ಳದಂತೆ ತಪಸ್ಸು ಆರಂಭವಾಯಿತು. ಬಹುಶಃ ಅದು ತಲೆಯಲ್ಲಿದ್ದದ್ದು ಈ ಕುಸ್ತಿ ಅಂಕಣದಿಂದ ಜೀವ ಉಳಿಸಿಕೊಂಡು ಪಾರಾಗುವುದು ಹೇಗೆ ಎಂಬುದು ಮಾತ್ರ.

ಧನುರ್ಜಯನ ಬಾಯಿಂದ ಯಾವ ಶಾಸನ ಸಭೆಯಲ್ಲೂ ತಾಳಿಕೊಳ್ಳಲಾಗದಂತಹ ಬೈಗುಳದ ಅಣಿಮುತ್ತು ಸುರಿಯುತ್ತಾ ಹೋಯಿತು. ನಾನು ಮತ್ತೆ ಆತನನ್ನು ನೋಡಿದಾಗ ಆ ಬಿಳಿಹುಂಜ ಆತನ ತೋಳಲ್ಲಿತ್ತು. ಹುಂಜದ ತುರಾಯಿ ಕಳಚಿ ಬಿದ್ದಿತ್ತೋ ಅಥವಾ ಅದರ ಮಾಲೀಕ ಧನುರ್ಜಯನದ್ದೋ ಎಂದು ಹೇಳಲು ಸಾಧ್ಯವಿಲ್ಲದಂತಾಗಿ ಹೋಗಿತ್ತು. ಆನಂತರ ಗೆದ್ದ ಹುಂಜಗಳು ಸಹ ಕೆಂಪು ಹಾಗೂ ಕಪ್ಪು ಬಣ್ಣದವು. ಯಾಕೋ ಈ ದಿನ ಬಿಳಿ ಜಂಬದ ಕೋಳಿಗಳಿಗೆ ಸರಿಯಾದ ಕಾಲವಲ್ಲ!

ಗೆದ್ದ ಕೆಂಪು ಹುಂಜವನ್ನು ಹಿಡಿದುಕೊಂಡಿದ್ದ ಕೃಷ್ಣಾರೆಡ್ಡಿ ಒಂದಲ್ಲಾ ಒಂದು ಕಡೆ ಇಡೀ ವಾರ ಈ ರೀತಿಯ ಕೋಳಿ ಅಂಕ ನಡೆಯುತ್ತಲೇ ಇರುತ್ತದೆ ಎಂದು ಹೇಳಿದ. ಕೆಲವಂತೂ ಸಿಕ್ಕಾಪಟ್ಟೆ ಜನರನ್ನು ಸೆಳೆಯುತ್ತದೆ. ಅಕ್ಟೋಬರ್‌ನಲ್ಲಿ ಆರಂಭವಾಗುವ ಕೋಳಿ ಅಂಕದ ಕಾಲ ಫೆಬ್ರವರಿಗೆ ಮುಕ್ತಾಯವಾಗುತ್ತದೆ.

ಈಗ ಫೋಟೋ ತೆಗೆಯಲು ಸಾಧ್ಯವೇ ಆಗದಂತಹ ಬೆಳಕಿದೆ. ನನ್ನ ಕ್ಯಾಮೆರಾದ ಫ್ಲ್ಯಾಷ್ ಸಹಾ ಕೈಕೊಡುತ್ತಿದೆ.ನಾವು ಹೊರಡಲು ಅಣಿಯಾಗುವ ವೇಳೆಗೆ ಬಾಜಿಯ ಮೊತ್ತ ಹಲವಾರು ಪಟ್ಟು ಏರಿತ್ತು. ಜನಜಂಗುಳಿ ಹಾಗೂ ಗದ್ದಲ ಊಹೆ ಮಾಡಲಾರದಷ್ಟು ಮೇರೆ ಮೀರಿತ್ತು. ನಾವು ಮಾತನಾಡಿಸಿದ ಕೃಷ್ಣಾರೆಡ್ಡಿ, ಮಾಧವಗೊಡ, ವಸಂತ ಪಿಂಕಿ ಈ ಎಲ್ಲರೂ ದಶಕಗಳಿಂದ ಈ ಹವ್ಯಾಸದಲ್ಲಿ ತೊಡಗಿಸಿ ಕೊಂಡಿದ್ದಾರೆ.

ನಾವು ಧನುರ್ಜಯನನ್ನು ಹಾದು ಹೋದೆವು. ಆತನ ಕೈ ಖಾಲಿಯಾಗಿತ್ತು. ಕತ್ತಿಗಳು ಬಳಸದೆ ನೇತಾಡುತ್ತಿದ್ದವು. ಏಟು ತಿಂದರೂ ಕುಸಿಯದ ಆತ ತಮ್ಮ ಹಳ್ಳಿಯ ಕಡೆ ಹೆಜ್ಜೆ ಹಾಕುತ್ತಿದ್ದ. ಎಂದಾದರೂ ಒಂದು ದಿನ, ಇನ್ನೊಂದು ಹುಂಜ, ಇನ್ನೊಂದು ಕಾಳಗ, ಇನ್ನೊಂದು ಬಾಜಿ ಎನ್ನುವುದು ಇದ್ದೇ ಇರುತ್ತದೆ ಅಲ್ಲವೇ?

*(ಮೂಲ : ಬರ ಅಂದ್ರೆ ಎಲ್ಲರಿಗೂ ಇಷ್ಟ)*

* * *

**ಓದು ಪತ್ಯ**

# ಹಾಕಿ ಕ್ರೀಡೆಯ ಸುತ್ತ–ಮುತ್ತ

**–ಎಂ.ಎ. ಪೊನ್ನಪ್ಪ**

ಹಾಕಿ ಭಾರತದ ರಾಷ್ಟ್ರೀಯ ಕ್ರೀಡೆ. ಕ್ರಿಕೆಟ್ ಜನಪ್ರಿಯಗೊಳ್ಳುವ ಮುನ್ನ ಹಾಕಿ ರಾಷ್ಟ್ರದಲ್ಲಿ ನಂ.೧ ಕ್ರೀಡೆಯಾಗಿತ್ತು. ಈ ಕ್ರೀಡೆಯಲ್ಲಿ ೮ ಬಾರಿ ಒಲಿಂಪಿಕ್ಸ್ ಚಿನ್ನ ಗೆದ್ದಿರುವುದು ಭಾರತದ ಹಿರಿಮೆ. ಹಾಕಿ ಎರಡು ತಂಡಗಳ ನಡುವಿನ ಕ್ರೀಡೆ. ಇದರಲ್ಲಿ ಉಭಯ ತಂಡಗಳು ಗಟ್ಟಿಯಾದ ಸಣ್ಣ ಚೆಂಡನ್ನು ಸ್ಟಿಕ್‌ನ ನೆರವಿನಿಂದ ಎದುರಾಳಿಯ ನೆಟ್ ಅಥವಾ ಗೋಲುಪೆಟ್ಟಿಗೆಯೊಳಕ್ಕೆ ತಳ್ಳಲು ಯತ್ನ ನಡೆಸುತ್ತವೆ. ಹಾಕಿಯಲ್ಲಿ ಹಲವು ವಿಧ. ಫೀಲ್ಡ್ ಹಾಕಿ, ಐಸ್ ಹಾಕಿ, ರೋಲರ್ ಹಾಕಿ, ಸ್ಟ್ರೀಟ್ ಹಾಕಿ, ಇತ್ಯಾದಿ. ಫೀಲ್ಡ್ ಹಾಕಿಯನ್ನು ಸಹಜ ಹಸಿರು ಹುಲ್ಲಿನ ಅಂಕಣ ಅಥವಾ ಕೃತಕ ಟರ್ಫ್ ಮೇಲೆ ಆಡಲಾಗುತ್ತದೆ. ಇದು ವಿಶ್ವದ ಹಲವು ಭಾಗಗಳಲ್ಲಿ ಪುರುಷರು ಹಾಗೂ ಮಹಿಳೆಯರ ತಂಡ ಕ್ರೀಡೆಯಾಗಿ ಪ್ರಸಿದ್ಧ. ವಿಶೇಷವಾಗಿ ಯುರೋಪ್, ಏಷ್ಯಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಜನಪ್ರಿಯ ಕ್ರೀಡೆ.

ಅಂತಾರಾಷ್ಟ್ರೀಯ ಹಾಕಿ ಒಕ್ಕೂಟ (ಎಫ್‌ಐಎಚ್) ಹಾಕಿಯ ವಿಶ್ವ ಆಡಳಿತ ಸಂಸ್ಥೆ. ಪುರುಷರ ಹಾಕಿ ೧೯೦೮ರಿಂದ (೧೯೧೨ ಮತ್ತು ೧೯೨೪ ಹೊರತುಪಡಿಸಿ) ಒಲಿಂಪಿಕ್ಸ್ ಕ್ರೀಡೆಗಳ ಭಾಗವಾಗಿದೆ. ಮಹಿಳಾ ಹಾಕಿ ೧೯೮೦ರಿಂದ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆದಿದೆ. ಆಧುನಿಕ ಹಾಕಿ ಸ್ಟಿಕ್ ಜೆ ಆಕಾರದಲ್ಲಿರುತ್ತದೆ. ಇದನ್ನು ಮರ, ಗ್ರಾಸ್ ಫೈಬರ್ ಅಥವಾ ಕಾರ್ಬನ್ ಫೈಬರ್(ಕೆಲವೊಮ್ಮೆ ಎರಡೂ)ನಿಂದ ತಯಾರಿಸಲಾಗುತ್ತದೆ. ಈ ಸ್ಟಿಕ್ ಚೆಂಡನ್ನು ಹೊಡೆಯುವ ಭಾಗದಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ಬಾಗಿರುತ್ತದೆ.

ಇತಿಹಾಸದ ಪುರಾವೆಗಳ ಪ್ರಕಾರ ಹಾಕಿಯ ಕಚ್ಚಾ ಮಾದರಿಯನ್ನು ಈಜಿಪ್ಟ್‌ನಲ್ಲಿ ೪೦೦೦ ವರ್ಷಗಳ ಹಿಂದೆ ಹಾಗೂ ಇಥಿಯೋಪಿಯದಲ್ಲಿ

ಕ್ರಿಸ್ತಪೂರ್ವ ೧೦೦೦ ದ ಸುಮಾರಿಗೆ ಆಡಲಾಗುತ್ತಿತ್ತು. ರೋಮನ್ನರು, ಗ್ರೀಕರು ಮತ್ತು ಕೊಲಂಬಸ್ ಆಗಮಿಸುವುದಕ್ಕೆ ಹಲವು ಶತಮಾನಗಳ ಮುಂಚೆಯೇ ದಕ್ಷಿಣ ಅಮೆರಿಕದಲ್ಲಿ ಈ ಕ್ರೀಡೆ ಆಡಲಾಗುತ್ತಿತ್ತು ಎನ್ನುವುದಕ್ಕೆ ಹಲವು ಪುರಾವೆಗಳು ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ದೊರಕುತ್ತವೆ. ಆದರೆ, ಆಧುನಿಕ ಹಾಕಿ ಅರಳಿದ್ದು ೧೮ನೇ ಶತಮಾನದ ಮಧ್ಯಭಾಗದಲ್ಲಿ, ಇಂಗ್ಲೆಂಡಿನಲ್ಲಿ. ಅದರಲ್ಲೂ ಮುಖ್ಯವಾಗಿ ಶಾಲೆಗಳಲ್ಲಿ. ಮೊದಲ ಹಾಕಿ ಕ್ಲಬ್ ೧೮೪೯ರಲ್ಲಿ ವಾಯುವ್ಯ ಲಂಡನ್ನಿನ ಬ್ಲಾಕ್‌ಹೀತ್‌ನಲ್ಲಿ ಪ್ರಾರಂಭವಾಯಿತು. ಹಾಕಿ ಭಾರತದಂತೆಯೇ, ಪಾಕಿಸ್ತಾನದ ರಾಷ್ಟ್ರೀಯ ಕ್ರೀಡೆಯೂ ಹೌದು.

ಲಂಡನ್ನಿನಲ್ಲಿ ನಡೆದ ೧೯೦೮ರ ಒಲಿಂಪಿಕ್ಸ್‌ನ ಹಾಕಿ ಸ್ಪರ್ಧೆಯಲ್ಲಿ ಇಂಗ್ಲೆಂಡ್, ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ೧೯೨೧ರ ಸ್ಟಾಕ್ ಹೋಮ್ ಒಲಿಂಪಿಕ್ಸ್‌ನಿಂದ ಹಾಕಿ ಕೈಬಿಡಲಾಯಿತು. ೧೯೨೦ರ ಆಂಟ್‌ವರ್ಪ್ ಕೂಟಕ್ಕೆ ಮರಳಿತಾದರೂ, ಕ್ರೀಡೆಗೆ ಅಂತಾರಾಷ್ಟ್ರೀಯ ಒಕ್ಕೂಟ ಇಲ್ಲ ಎಂಬ ಕಾರಣ ನೀಡಿ ೧೯೨೪ ರಲ್ಲಿ ಪ್ಯಾರಿಸ್ ಕೂಟದ ಸಂಘಟಕರು ಕೈಬಿಟ್ಟರು. ಅಂತಾರಾಷ್ಟ್ರೀಯ ಹಾಕಿ ಒಕ್ಕೂಟದ ಸ್ಥಾಪನೆಗೆ ಇದು ಕಾರಣವಾಯಿತು. ೧೯೨೪ರಲ್ಲಿ ಪ್ಯಾರಿಸ್‌ನಲ್ಲಿ ಫ್ರಾನ್ಸ್‌ನ ಪಾಲ್ ಲ್ಯೂಟಿ ಎಂಬವರು ಎಫ್‌ಐಎಚ್ ಸ್ಥಾಪಿಸಿದರು. ಅವರೇ ಇದರ ಪ್ರಥಮ ಅಧ್ಯಕ್ಷರು. ಇದರ ಆರು ಸಂಸ್ಥಾಪಕ ಸದಸ್ಯ ರಾಷ್ಟ್ರಗಳೆಂದರೆ, ಆಸ್ಟ್ರಿಯಾ, ಬೆಲ್ಜಿಯಂ, ಜೆಕೊಸ್ಲಾವೇಕಿಯಾ, ಫ್ರಾನ್ಸ್, ಹಂಗೆರಿ, ಸಪೇನ್ ಮತ್ತು ಸ್ವಿಡ್ಜರ್‌ಲೆಂಡ್.

ಮಹಿಳೆಯರ ಹಾಕಿಯ ಅಂತಾರಾಷ್ಟ್ರೀಯ ಒಕ್ಕೂಟ ೧೯೨೭ರಲ್ಲಿ ಸ್ಥಾಪನೆಯಾಯಿತು. ೧೯೮೨ರಲ್ಲಿ ಪುರುಷರು ಹಾಗೂ ಮಹಿಳೆಯರ ಒಕ್ಕೂಟಗಳು ವಿಲೀನಗೊಂಡು ಅಂತಾರಾಷ್ಟ್ರೀಯ ಹಾಕಿ ಒಕ್ಕೂಟ ಸಮಗ್ರ ರೂಪ ಪಡೆಯಿತು. ಭಾರತ ಒಕ್ಕೂಟದ ಮೊದಲ ಯುರೋಪೇತರ ಸದಸ್ಯ. ೧೯೬೪ರ ಹೊತ್ತಿಗೆ ೫೦ ರಾಷ್ಟ್ರಗಳು ಸದಸ್ಯತ್ವ ಪಡೆದಿದ್ದವು. ೧೯೭೪ರಲ್ಲಿ ಸದಸ್ಯತ್ವ ೭೧ಕ್ಕೆ ಏರಿತ್ತು. ಸದ್ಯ ಐದು ಖಂಡಗಳ ೧೨೭ ರಾಷ್ಟ್ರಗಳು ಎಫ್‌ಐಎಚ್ ಸದಸ್ಯತ್ವ ಹೊಂದಿವೆ.

ಇದರ ಕೇಂದ್ರ ಕಚೇರಿ ಲೌಸೇನ್‌ನಲ್ಲಿದೆ.

ಹಾಕಿ ಬ್ರಿಟಿಷರ ಮೂಲಕ ಭಾರತವನ್ನು ಪ್ರವೇಶಿಸಿತು. ೧೮೮೫ ರಲ್ಲಿ ಕೋಲ್ಕತ್ತದಲ್ಲಿ ಮೊದಲ ಕ್ಲಬ್ ಸ್ಥಾಪನೆಯಾಯಿತು. ಇದಾದ ೧೦ ವರ್ಷಗಳಲ್ಲಿ ಬೇಟನ್ ಕಪ್ ಮತ್ತು ಆಘಾ ಖಾನ್ ಟೂರ್ನಿಗಳು ಆರಂಭವಾದವು. ೧೯೨೮ರಲ್ಲಿ ಒಲಿಂಪಿಕ್ಸ್ ಪ್ರವೇಶಿಸಿದ ಭಾರತ ಮೊದಲ ೫ ಪಂದ್ಯಗಳನ್ನು ಒಂದೂ ಗೋಲು ಬಿಟ್ಟುಕೊಡದೆ ಜಯಿಸಿತು. ನಂತರ ೧೯೩೨ರಿಂದ ೧೯೫೬ರವರೆಗೆ ಸತತ ಒಲಿಂಪಿಕ್ಸ್‌ಗಳಲ್ಲಿ ಗೆದ್ದ ಭಾರತ ೧೯೬೫, ೧೯೮೦ರಲ್ಲೂ ಚಿನ್ನ ಗೆದ್ದಿದೆ. ಭಾರತದಲ್ಲಿ ಹಾಕಿ ಆಡಳಿತದ ಉಸ್ತುವಾರಿ ಹೊತ್ತಿದ್ದ ಭಾರತೀಯ ಹಾಕಿ ಒಕ್ಕೂಟ (ಐಡಬ್ಲ್ಯುಎಚ್) ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ೨೦೦೮ರಲ್ಲಿ ಬರ್ಖಾಸ್ತುಗೊಂಡ ಬಳಿಕ ೨೦೦೯ರಲ್ಲಿ ಪುರುಷರು ಹಾಗೂ ಮಹಿಳಾ ಹಾಕಿಯ ಏಕೀಕೃತ ಸಂಸ್ಥೆ ಹಾಕಿ ಇಂಡಿಯಾ ಸ್ಥಾಪನೆಯಾಗಿದೆ.

ಭಾರತದಲ್ಲಿ ಪಂಜಾಬ್ ಮತ್ತು ಕೊಡಗು ಹಾಕಿ ತೊಟ್ಟಿಲು ಎಂದೇ ಪರಿಗಣಿಸಲಾಗುತ್ತದೆ. ಈ ಭಾಗಗಳಿಂದ ಗರಿಷ್ಠ ಆಟಗಾರರು ರಾಷ್ಟ್ರ ಪ್ರತಿನಿಧಿಸಿದ್ದಾರೆ. ಕೊಡಗಿನಲ್ಲಿ ಮಕ್ಕಳು ಜನಿಸುವಾಗಲೇ ಕೈಯಲ್ಲಿ ಬಂದೂಕು ಮತ್ತು ಹಾಕಿ ಸ್ಟಿಕ್ ಹಿಡಿದಿರುತ್ತವೆ ಎಂಬ ಪ್ರತೀತಿ ಇದೆ. ಕ್ರಿಕೆಟ್‌ಗೆ ಡಾನ್ ಬ್ರಾಡ್ಮನ್ ಇರುವಂತೆ ಹಾಕಿಗೆ ಭಾರತದ ಧ್ಯಾನ್‌ಚಂದ್. ಇವರು ಹಾಕಿ ವಿಶ್ವದ ಸರ್ವಶ್ರೇಷ್ಠ ಆಟಗಾರ. ಭಾರತ ಸರ್ಕಾರವು ಧ್ಯಾನ್‌ಚಂದ್ ಜನ್ಮ ದಿನವಾದ ಆಗಸ್ಟ್ ೨೯ರಂದು ವಾರ್ಷಿಕ ಕ್ರೀಡಾ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತದೆ.

ಕರ್ನಾಟಕದಲ್ಲಿ ಕರ್ನಾಟಕ ಹಾಕಿ ಸಂಸ್ಥೆ ಕ್ರಿಯಾಶೀಲವಾಗಿದೆ. ವರ್ಷಂಪ್ರತಿ ವಿವಿಧ ವಯೋಮಾನದ, ಲೀಗ್ ಟೂರ್ನಿಗಳನ್ನು ಸಂಘಟಿಸುತ್ತದೆ. ಸದ್ಯ ಕರ್ನಾಟಕದ ಅರ್ಜುನ್ ಹಾಲಪ್ಪ, ವಿ.ಎಸ್. ವಿನಯ, ರಘುನಾಥ್ ಮೊದಲಾದವರು ಭಾರತ ತಂಡದಲ್ಲಿದ್ದಾರೆ. ಕರ್ನಾಟಕದ ಅಂಪೈರ್ ರಘು ವಿಶ್ವ ಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ಹಾಕಿಯ ವಾಣಿಜ್ಯೀಕರಣಕ್ಕೆ ಇದು ಭಾರತದ ಕೊಡುಗೆ. ಕ್ರಿಕೆಟ್‌ನ ಇಂಡಿಯನ್ ಪ್ರೀಮಿಯರ್ ಲೀಗ್ ಪರಿಕಲ್ಪನೆಗೂ ಮುನ್ನವೇ ಇದು

ಜಾರಿಗೆ ಬಂದಿತ್ತು. ಫ್ರಾಂಚೈಸಿ ತಂಡಗಳ ಪರಿಕಲ್ಪನೆ, ಟೈಮ್ ಔಟ್ ಇವೆಲ್ಲವೂ ಹಾಕಿ ಜನಪ್ರಿಯಗೊಳಿಸಲು ನೆರವಾದವು.

ಒಲಿಂಪಿಕ್ಸ್ ಅಲ್ಲದೆ ೪ ವರ್ಷಗಳಿಗೊಮ್ಮೆ ಹಾಕಿ ವಿಶ್ವಕಪ್ ನಡೆಯುತ್ತಿದೆ. ಭಾರತ ಪ್ರಪ್ರಥಮ ಬಾರಿ ವಿಶ್ವಕಪ್ ಆತಿಥ್ಯ ವಹಿಸಿತ್ತು. ಇದಲ್ಲದೆ ಚಾಂಪಿಯನ್ಸ್ ಟ್ರೋಫಿ, ಚಾಂಪಿಯನ್ಸ್ ಚಾಲೆಂಜ್ ಪ್ರಮುಖ ಟೂರ್ನಿಗಳು. ಅಲ್ಲದೆ, ಏಷ್ಯಾಡ್, ಅಜ್ಲಾನ್ ಷಾ ಹಾಕಿಯಂಥ ವಿವಿಧ ಖಂಡಾಂತರ ಟೂರ್ನಿಗಳು ನಡೆಯುತ್ತವೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲೂ ಹಾಕಿ ಭಾಗವಾಗಿದೆ. ದ್ವಿಪಕ್ಷೀಯ ಸರಣಿಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಭಾರತದಲ್ಲಿ ಹಾಕಿ ಜನಪ್ರಿಯುಗೊಳ್ಳುವಲ್ಲಿ ಧ್ಯಾನ್‌ಚಂದ್ ಕೊಡುಗೆ ದೊಡ್ಡದು. ಪರ್ಗತ್‌ಸಿಂಗ್, ಧನರಾಜ್ ಪಿಳ್ಳೈ, ಸೋಮಯ್ಯ, ಎಂ.ಪಿ. ಗಣೇಶ್, ಆಶಿಶ್ ಬಲ್ಲಾಳ್, ದಿಲೀಪ್ ಟರ್ಕಿ ಮೊದಲಾದ ಆಟಗಾರರು ಕ್ರೀಡೆಯಲ್ಲಿ ಮಹೋನ್ನತ ಸಾಧನೆ ಮಾಡಿದ್ದಾರೆ.

ಪ್ರತೀ ತಂಡ ೧೧ ಆಟಗಾರರನ್ನು ಆಟದ ನಡುವೆ ೫ ಬಾರಿ ಆಟಗಾರರನ್ನು ಬದಲಾಯಿಸಲು ಅವಕಾಶವಿರುತ್ತದೆ. ತಂಡದಲ್ಲಿ ಓರ್ವ ಗೋಲ್‌ಕೀಪರ್ ಕಡ್ಡಾಯ. ಉಳಿದ ೧೦ ಆಟಗಾರರನ್ನು ಮುಖ್ಯವಾಗಿ ಮುನ್ಪಡೆ (ಎದುರಾಳಿಯ ಗೋಲು ಆವರಣದಲ್ಲಿ ಆಕ್ರಮಣ ಮಾಡುವವರು), ಮಿಡ್ ಫೀಲ್ಡರ್ಸ್ (ಅಂಕಣದ ಮಧ್ಯಭಾಗದಲ್ಲಿ ಆಟ ನಿಯಂತ್ರಿಸುವವರು) ಮತ್ತು ರಕ್ಷಣಾ ಆಟಗಾರರೆಂದು (ತಮ್ಮ ಗೋಲು ಆವರಣದಲ್ಲಿ ಕಾವಲು ಕಾಯುವವರು) ವಿಂಗಡಿಸಲಾಗುತ್ತದೆ.

ಆಟಗಾರರು ಚೆಂಡನ್ನು ಕಾಲು ಅಥವಾ ದೇಹದ ಯಾವುದೇ ಭಾಗದಿಂದ ತಡೆಯುವಂತಿಲ್ಲ. ಗೋಲಿ ಮಾತ್ರ ಗೋಲು ಆವರಣದಲ್ಲಿ ಕೈ, ಕಾಲು, ದೇಹದಿಂದ ತಡೆಯಬಹುದು. ಗೋಲನ್ನು ಮುಕ್ತ ಗೋಲು, ಪೆನಾಲ್ಟಿ ಕಾರ್ನರ್ ಮತ್ತು ಪೆನಾಲ್ಟಿ ಸ್ಟ್ರೋಕ್ ರೂಪದಲ್ಲಿ ಹೀಗೆ ಮೂರು ಬಗೆಯಲ್ಲಿ ಗಳಿಸಬಹುದು. ಮುಕ್ತ ಗೋಲನ್ನು ಆಟಗಾರರು ಕೌಶಲ್ಯಪೂರ್ಣ ಆಟದಿಂದ ಗಳಿಸುತ್ತಾರೆ. ಆದರೆ, ಇದರಲ್ಲಿ ಆಟಗಾರ ಗೋಲನ್ನು ಎದುರಾಳಿ ಆವರಣದ ಗೋಲು ವರ್ತುಲದೊಳಗಿಂದ

ಗಳಿಸಿರಬೇಕು. ಹೊರಭಾಗದಿಂದ ಹೊಡೆದ ಚೆಂಡು ಗೋಲು ಪೆಟ್ಟಿಗೆ ಪ್ರವೇಶಿಸಿದರೂ, ಗೋಲೆಂದು ಪರಿಗಣಿಸಲಾಗುವುದಿಲ್ಲ. ಎದುರಾಳಿ ತಂಡಗಳು ಗೋಲು ಆವರಣದಲ್ಲಿ ತಪ್ಪು ಮಾಡಿದಾಗ, ನಿಯಮ ಉಲ್ಲಂಘಿಸಿದಾಗ ಪೆನಾಲ್ಟಿ ಕಾರ್ನರ್ ನೀಡಲಾಗುತ್ತದೆ. ರಕ್ಷಣಾ ಆಟಗಾರ ಚೆಂಡನ್ನು ತಡೆಯುವಾಗ ಒರಟಾಟ ಪ್ರದರ್ಶಿಸಿದರೂ, ಪೆನಾಲ್ಟಿ ಕಾರ್ನರ್ ನೀಡಲಾಗುತ್ತದೆ.

ಪೆನಾಲ್ಟಿ ಸ್ಟ್ರೋಕ್‌ಗಳನ್ನು, ಆಟಗಾರ ಗೋಲು ಗಳಿಸದಂತೆ ತಡೆಯುವ ಯತ್ನದಲ್ಲಿ ರಕ್ಷಣಾ ಆಟಗಾರರು ನಿಯಮ ಉಲ್ಲಂಘಿಸಿದರೆ ಹಾಗೂ ಇನ್ನೂ ಹಲವು ಗಂಭೀರ ಪ್ರಮಾದಗಳಿಗೆ ನೀಡಲಾಗುತ್ತದೆ. ಮುಂಭಾಗದಲ್ಲಿ ಓರ್ವ ನಿರ್ದಿಷ್ಟ ಆಟಗಾರ ಗೋಲು ಯತ್ನ ನಡೆಸುತ್ತಾನೆ. ೬.೪ ಮೀ (೭ ಗಜ) ಅಂತರದಿಂದ ಚೆಂಡು ಹೊಡೆಯಬೇಕು. ಉಳಿದೆಲ್ಲಾ ಆಟಗಾರರು ಸುಮಾರು ೨೩ ಮೀ ದೂರದಲ್ಲಿರುತ್ತಾರೆ. ಪೆನಾಲ್ಟಿ ಸ್ಟ್ರೋಕ್ ನೀಡುವ ಸಂದರ್ಭದಲ್ಲಿ ಪಂದ್ಯವನ್ನು ಗಡಿಯಾರ ಸ್ಥಗಿತಗೊಳಿಸಲಾಗಿರುತ್ತದೆ.

**ಧ್ಯಾನ್‌ಚಂದ್:** ಮೇಜರ್ ಧ್ಯಾನ್‌ಚಂದ್ ಭಾರತವಷ್ಟೇ ಅಲ್ಲ, ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಹಾಕಿಪಟು. ಇಡೀ ಪ್ರಪಂಚದಲ್ಲಿಯೇ ಇಲ್ಲಿಯವರೆಗೆ ಇವರನ್ನು ಸರಿಗಟ್ಟುವ ಆಟಗಾರನೂ ಇಲ್ಲ ಎಂಬುದು ಅಚ್ಚರಿಯ ಸಂಗತಿ. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನನ್ನು ಬೆರಗುಗೊಳಿಸಿದ ಕ್ರೀಡಾ ಮಾಂತ್ರಿಕ. ಭಾರತ ಸರ್ಕಾರವು ಇವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿದೆ. ದಾದಾ ಎಂದು ಪ್ರೀತಿಯಿಂದ ಕರೆಯಲ್ಪಡುತ್ತಿದ್ದ 'ಧ್ಯಾನ್'ರವರನ್ನು ಅವರ ಕೋಚ್ 'ಪಂಕಜ್ ಗುಪ್ತ' ಅವರು 'ಚಾಂದ್' (ಚಂದ್ರ) ಎಂದು ಕರೆಯುತ್ತಿದ್ದರು. ಅಲ್ಲದೇ ತಮ್ಮ ಶಿಷ್ಯ ಚಂದ್ರನಂತೆ ಬೆಳಗುತ್ತಾನೆ ಎಂದೂ ಭವಿಷ್ಯ ನುಡಿದಿದ್ದರು.

ಉತ್ತರಪ್ರದೇಶದ ಪ್ರಯಾಗ್‌ನಲ್ಲಿ ರಜಪೂತ್ ಕುಟುಂಬವೊಂದರಲ್ಲಿ ಆಗಸ್ಟ್ ೨೯, ೧೯೦೫ರಲ್ಲಿ ಧ್ಯಾನ್‌ಚಂದ್ ಜನಿಸಿದರು. ಅವರ ತಂದೆ ಭಾರತೀಯ ಬ್ರಿಟಿಷ್ ಸೈನ್ಯದಲ್ಲಿ ಹವಾಲ್ದಾರ್ ಆಗಿದ್ದರು. ಪ್ರಯಾಗದಿಂದ ತದನಂತರ ಕುಟುಂಬವು 'ಝಾನ್ಸಿ' ನಗರಕ್ಕೆ ವಲಸೆ ಬಂದಿತು. ಇಲ್ಲಿಯೇ

ಇವರ ಕ್ರೀಡಾ ದಿನಗಳು ಪ್ರಾರಂಭವಾದವು. ೧೬ನೇ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಭಾರತೀಯ ಸೈನ್ಯದಲ್ಲಿ ಸಿಪಾಯಿಯಾಗಿ ೧೪ನೇ ಪಂಜಾಬ್ ರೆಜಿಮೆಂಟ್ ಸೇರಿದ ಧ್ಯಾನ್‌ನನ್ನು ಸುಬೇದಾರ್–ಮೇಜರ್ ಭೋಲೆ ತಿವಾರಿಯವರು ಗಮನಿಸಿ ಪ್ರೋತ್ಸಾಹಿಸಿದರು.

೧೯೨೮ರಲ್ಲಿ ಭಾರತೀಯ ಹಾಕಿ ತಂಡವನ್ನು ಸೇರಿದ ಧ್ಯಾನ್‌ಚಂದ್ ಅವರಿಗೆ, ನೆದರ್‌ಲ್ಯಾಂಡನ್ ಆಮ್‌ಸ್ಟರ್ ಡ್ಯಾಮ್‌ನಲ್ಲಿ ಆಯೋಜಿಸಲಾದ ೧೯೨೮ ರ ಒಲಿಂಪಿಕ್‌ನಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ೩–೦ ಗೋಲುಗಳನ್ನು ಗಳಿಸುವ ಮೂಲಕ ಭಾರತೀಯ ತಂಡಕ್ಕೆ ನೆದರ್‌ಲ್ಯಾಂಡ್ ತಂಡವನ್ನು ಸೋಲಿಸಲು ಸಹಾಯ ಮಾಡಿದ ಧ್ಯಾನ್‌ಚಂದರ ಆಟಕ್ಕೆ ನೆರೆದ ಜನರು ಬೆರಗಾದರು. ಈ ಸರಣಿಯಲ್ಲಿ ಭಾರತೀಯ ಹಾಕಿ ತಂಡಕ್ಕೆ ಒಲಿಂಪಿಕ್ ಸ್ವರ್ಣ ಪದಕವು ದೊರೆತಿತು. ಧ್ಯಾನ್‌ಚಂದ್ ೧೯೩೨ ಹಾಗೂ ೧೯೩೬ರಲ್ಲಿ ನಡೆದ ಒಲಿಂಪಿಕ್ಸ್‌ಗಳಲ್ಲಿ ಸ್ವರ್ಣ ಪದಕ ಪಡೆದ ಭಾರತದ ತಂಡದ ಸದಸ್ಯರಾಗಿದ್ದರು. ಎರಡನೇ ವಿಶ್ವಯುದ್ಧ ಮುಗಿದ ಬಳಿಕವೂ ಕೆಲಕಾಲ ಆಡಿದ ಧ್ಯಾನ್‌ಚಂದ್ ೧೯೪೮ರಲ್ಲಿ ತಮ್ಮ ೨೪ನೇ ವಯಸ್ಸಿನಲ್ಲಿ ಹಾಕಿ ಆಟದಿಂದ ನಿವೃತ್ತರಾದರು. ಧ್ಯಾನ್‌ಚಂದರ ಸಹೋದರ ರೂಪ್‌ಸಿಂಗ್ ಕೂಡ ಉತ್ತಮ ಆಟಗಾರರಾಗಿದ್ದರು. ಧ್ಯಾನ್‌ಚಂದರ ಪುತ್ರ ಅಶೋಕ್‌ಕುಮಾರ್ ಕೂಡ ಹಾಕಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಧ್ಯಾನ್‌ಚಂದ್ ಜನ್ಮದಿನ ೨೯ ಆಗಸ್ಟನ್ನು ಭಾರತದಲ್ಲಿ ಕ್ರೀಡಾ ದಿನವನ್ನಾಗಿ ಆಚರಿಸಲಾಗುತ್ತದೆ. ೧೯೭೯ ಡಿಸೆಂಬರ್ ೩ರಂದು ಧ್ಯಾನ್‌ಚಂದ್ ಸ್ವರ್ಗಸ್ಥರಾದರು.

*(ಮೂಲ: ಕ್ರೀಡಾಂತರಂಗ)*

* * *

# ಕನ್ನಡಾಭಿಮಾನ

ಕನ್ನಡ ನೆಲದ ಪುಲ್ಲೆನಗೆ ಪರಮಪಾವನ ತುಳಸಿ
ಕನ್ನಡ ನೆಲದ ನೀರ್ವೊನಲು ಎನಗೆ ದೇವನದಿ
ಕನ್ನಡ ನೆಲದ ಕಲ್ಲೆನೆಗೆ ಶಾಲಿಗ್ರಾಮಲೆ! ಕನ್ನಡಂ ದೈವಮ್ಮೈ

**–ಶ್ರೀ ಸಾಲಿ ರಾಮಚಂದ್ರರಾಯರು**

ಸ್ವಾತಂತ್ರ್ಯ ಹೋರಾಟದ ಜೊತೆಗೆ ಕರ್ನಾಟಕ ಏಕೀಕರಣದ ಹೋರಾಟವೂ ತೀವ್ರವಾಗಿದ್ದ ಕಾಲದಲ್ಲಿ ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು ಹಾಗೂ ಸ್ವಾಭಿಮಾನಿ ಕನ್ನಡಿಗರ ಹೋರಾಟದ ಫಲವಾಗಿ ೧೯೫೬, ನವೆಂಬರ್ ೧ರಂದು ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ನಂತರ ೧೯೭೩ ನವೆಂಬರ್ ೧ರಂದು 'ಕರ್ನಾಟಕ' ಎಂದು ಮರುನಾಮಕರಣವಾಯಿತು. 'ಕರ್' ಮತ್ತು 'ನಾಡು' ಸೇರಿ ಕರ್ನಾಟಕ, ಅಂದರೆ ಕರಿಯ ಮಣ್ಣಿನ ನಾಡು, ಎತ್ತರದ ನಾಡು ಎಂದರ್ಥ. 'ಕರ್ನಾಟಕ ಎಂಬುದೇನು ಹೆಸರೆ ಬರಿಯ ಮಣ್ಣಿಗೆ? ಮಂತ್ರ ಕಣಾ! ಶಕ್ತಿ ಕಣಾ! ತಾಯಿ ಕಣಾ! ದೇವಿ ಕಣಾ!' ಎನ್ನುತ್ತಾರೆ ಕುವೆಂಪು. ಕರ್ನಾಟಕ ಎಂಬುದು ಕೇವಲ ಹೆಸರಲ್ಲ, ಕನ್ನಡ ಕೇವಲ ಭಾಷೆಯಲ್ಲ, ಅದು ನಮ್ಮ ಅಸ್ಮಿತೆ ಮತ್ತು ಸ್ವಾಭಿಮಾನದ ಸಂಕೇತ.

"ಪ್ರಪಂಚದಲ್ಲಿ ಕನ್ನಡಕ್ಕೆ ಎಲ್ಲಾದರೂ ಮಾನ್ಯ ಸ್ಥಾನ ದೊರೆಯಬೇಕಾದರೆ ಅದು ಇಲ್ಲೇ, ಕರ್ನಾಟಕದಲ್ಲೇ. ಇನ್ನೆಲ್ಲಿಯೂ ಅಲ್ಲ. ..... ನೀವು ಇಲ್ಲಿ ಕನ್ನಡಕ್ಕೆ, ಕನ್ನಡದವರಿಗೆ ಎಡೆ ಕೊಡದಿದ್ದರೆ ಜಗತ್ತಿನ ಮತ್ಯಾವ ಭಾಗವೂ ಕನ್ನಡದ ಕೈ ಹಿಡಿಯುವುದಿಲ್ಲ. ನೀವು ಕೈಬಿಟ್ಟರೆ ಅದಕ್ಕೆ ಸಮುದ್ರವೇ ಗತಿ' ಎಂದು ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಕುವೆಂಪು ಕರೆ ನೀಡಿದ್ದಾರೆ.

ಕನ್ನಡವು ನಮ್ಮೆಲ್ಲರ ತಾಯಿ ಭಾಷೆ, ಹಾಗಾಗಿ ಅದು ನಮ್ಮ

ಹೆಮ್ಮೆ. ತಾಯಿಯೊಂದಿಗೆ ಮಕ್ಕಳಿಗೆ ಭಾವನಾತ್ಮಕ ಸಂಬಂಧ ವಿರುವಂತೆಯೇ ತಾಯಿ ಭಾಷೆಯ ಜೊತೆಗೂ ಬಿಡಿಸಲಾಗದ ನಂಟು ಮತ್ತು ಆತ್ಮೀಯತೆ ಇರುತ್ತದೆ. ಮನುಷ್ಯ ಆಧುನಿಕವಾದಂತೆಲ್ಲ ಅವನಿಗೆ ಭಾವನೆಗಳ ಜೊತೆಗೆ ವ್ಯವಹಾರವೂ ಮುಖ್ಯವಾಯಿತು. ಜಾಗತೀಕರಣದ ನಂತರವಂತೂ ಯಾವ ಭಾಷೆ ವ್ಯಾವಹಾರಿಕವಾಗಿ ಶಕ್ತಿ ಪಡೆದುಕೊಂಡಿತೋ ಆ ಭಾಷೆ ಬೆಳೆಯತೊಡಗಿತು.

ಕನ್ನಡ ಭಾಷೆಗೆ ಎರಡು ಸಾವಿರ ವರುಷಗಳ ಇತಿಹಾಸವಿದೆ. ಸಾಹಿತ್ಯ ವೈವಿಧ್ಯಮಯವಾಗಿದೆ. ಹಲವಾರು ರಾಷ್ಟ್ರಮಟ್ಟದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದು ರಾಷ್ಟ್ರವ್ಯಾಪಿ ಹೆಸರು ಗಳಿಸಿದೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನವೂ ದೊರೆತಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ 'ತ್ರಿಭಾಷಾ ಸೂತ್ರ'ದ ಶಿಕ್ಷಣನೀತಿಯನ್ನು ಅನುಸರಿಸುವಿಕೆಯಲ್ಲಿ ಕನ್ನಡ ಭಾಷೆಯ ಸ್ಥಾನವೇನು? ಕರ್ನಾಟಕದಲ್ಲೇ ನಾವು ನಮ್ಮ ಭಾಷೆಯ ಉಳಿವಿಗೆ ಹಪಹಪಿಸುವಂತಾಗಬಾರದು, ಅಲ್ಲವೇ? ನಮ್ಮದು ವೈವಿಧ್ಯಮಯ ಭಾಷೆ – ಕನ್ನಡಗಳು ಹಲವಾರು.

ಇದನ್ನು ಅರ್ಥ ಮಾಡಿಕೊಂಡಿದ್ದ ಕಾರಣಕ್ಕೆ ನಮ್ಮ ಹಿರಿಯರು ವಿಜ್ಞಾನ, ತತ್ವಜ್ಞಾನ, ಕಾವ್ಯ, ಸಾಹಿತ್ಯ ಮುಂತಾದ ಜ್ಞಾನ ಸಮಸ್ತವನ್ನೂ ಕನ್ನಡ ಭಾಷೆಯಲ್ಲಿ ಹೇಳಲು ಪ್ರಯತ್ನಿಸಿದ್ದಾರೆ. ಯಾವ ಭಾಷೆಯಲ್ಲಿ ವಿಜ್ಞಾನ ಮತ್ತು ತತ್ವಜ್ಞಾನವನ್ನು ಹೇಳಲು ಸಾಧ್ಯವಾಗುತ್ತದೆಯೋ ಅದು ಜಗತ್ತಿನ ಅತ್ಯಂತ ಪರಿಣಾಮಕಾರಿಯಾದ ಭಾಷೆಯಾಗುತ್ತದೆ. ಹಾಗಾಗಿ ಎಲ್ಲಾ ಜ್ಞಾನ ಶಾಖೆಗಳ ಜ್ಞಾನವು ಕನ್ನಡದಲ್ಲೇ ಇದ್ದಾಗ, ಕನ್ನಡದಲ್ಲೇ ಕಲಿತಾಗ ಮಾತ್ರ ಕನ್ನಡ ಬೆಳೆಯುತ್ತದೆ. ಭಾಷೆಯೊಂದು ತನ್ನ ಮಕ್ಕಳಿಗೆ ಅನ್ನ ನೀಡುವಂತಾದಾಗ, ಆ ಭಾಷೆಗೆ ವ್ಯಾವಹಾರಿಕ ಮತ್ತು ಲೌಕಿಕ ಶಕ್ತಿ ಬರುತ್ತದೆ.

ತಲಾದಾಯದಲ್ಲಿ ಮುಂದಿರುವ ಮೊದಲ ಇಪ್ಪತ್ತು ದೇಶಗಳ ಆಡಳಿತ ಭಾಷೆ ಅವರ ಮಾತೃಭಾಷೆಯೇ ಆಗಿದೆ. ಅಂದರೆ ಯಾವ ನಾಡು ತನ್ನ ಜನರ ಭಾಷೆಯಲ್ಲಿ ವ್ಯಾಪಾರ, ವ್ಯವಹಾರ, ತಂತ್ರಜ್ಞಾನ, ವಿಜ್ಞಾನಗಳನ್ನು ಕಲಿಸುತ್ತದೆಯೋ ಅದು ಶ್ರೀಮಂತವಾಗುತ್ತದೆ.

ಕರ್ನಾಟಕದಲ್ಲಿ ಕನ್ನಡವೇ ಮಾತೃಭಾಷೆ. ಅದು ನಮ್ಮ ಆಡಳಿತ ಭಾಷೆಯೂ ಆಗಿರುವುದರಿಂದ ಎಲ್ಲಾ ಜ್ಞಾನಶಾಖೆಗಳು ಮತ್ತು ವ್ಯವಹಾರ ಕ್ಷೇತ್ರಗಳಲ್ಲಿ ಕನ್ನಡವನ್ನು ಇನ್ನಷ್ಟು ಶಕ್ತಿಯುತವಾಗಿಸಬೇಕು. ನಮ್ಮ ಭಾಷೆಯ ಮೇಲೆ ಅಭಿಮಾನವಿಟ್ಟು ಅದನ್ನು ಜಗತ್ತಿನ ಜ್ಞಾನದ ಭಾಷೆಯಾಗಿಸು ತ್ತೇನೆಂದು ಪ್ರತಿಯೊಬ್ಬ ಕನ್ನಡಿಗನೂ ಹಠ ತೊಡಬೇಕು.

ಜಾಗತೀಕರಣದ ಪ್ರಭಾವದಿಂದ ಇಂದು ಸ್ವತಂತ್ರ ಭಾರತದಲ್ಲಿ ಪ್ರಾದೇಶಿಕ ಭಾಷೆಗಳು, ಸಂಸ್ಕೃತಿಗಳು ಅವಸಾನವಾಗುವ ಸ್ಥಿತಿ ತಲುಪುತ್ತಿರುವಾಗ ಸ್ಥಳೀಯ ಭಾಷೆಗಳ ಉಳಿವಿಗಾಗಿ ಎಲ್ಲರನ್ನೂ ಬಡಿದೆಚ್ಚರಿಸುವ, ಸತ್ತಂತಿಹರನ್ನು ಎದ್ದು ಕೂರಿಸುವ ಕೆಲಸವನ್ನು ಮಾಡುವ ಅವಶ್ಯಕತೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರ, ರಾಜ್ಯ ಸರ್ಕಾರಗಳು, ರಾಜಕಾರಣಿಗಳು, ಚಿಂತಕರು ಜನತೆಗೆ ಸ್ಥಳೀಯ ಭಾಷೆಗಳ ಸತ್ವ ಮತ್ತು ಮಹತ್ವವನ್ನು ಮನಗಾಣಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಬರಗೂರು ರಾಮಚಂದ್ರಪ್ಪ ಅವರು ಹೇಳಿದಂತೆ ಕನ್ನಡವು ಕರ್ನಾಟಕದಲ್ಲಿ ಕರುಳಿನ ಭಾಷೆಯಾಗಬೇಕೆ ಹೊರತು ಕೇವಲ ಕೊರಳಿನ ಕೂಗಾಗಬಾರದು. ಕನ್ನಡಾಭಿಮಾನವು ಕೇವಲ ಗತಕಾಲದ ವೈಭವದ ಕನವರಿಕೆಯಾಗದೆ, ಸದಾ ಸಮಕಾಲೀನವಾಗುತ್ತಾ ಹೋಗುವ ಸಾರ್ಥಕ ಸಂವೇದನೆಯಾಗಬೇಕು.

ಕೊನೆಯಲ್ಲಿ ರಾಜರತ್ನಂ ಅವರು ಎಂಡ್ಕುಡುಕ ರತ್ನನ ಭಾಷೆಯಲ್ಲಿ ಹೇಳುವಂತೆ **"ನರಕಕ್ಕೆ ಇಳಿಸಿ, ನಾಲ್ಗೆ ಸೀಳಿ, ಬಾಯಿ ಒಲಿದಾಕ್ದ್ರೂನೂವೇ ಮೂಗ್ನಲ್ಲೇ ಕನ್ನಡ ಪದವಾಡ್ತೀನಿ"** ಎನ್ನುವ ಹಟ, ಛಲ ಪ್ರತಿಯೊಬ್ಬ ಕನ್ನಡಿಗನಿಗೆ ಬರಬೇಕು.

* * *

# ಏಕೀಕರಣ

**–(ನಾಟಕದ ಪ್ರಥಮ ಭಾಗ)**

**–ಬೀಚಿ**

ಸೂತ್ರ : ಎಲ್ರಿಗೂ ನಮಸ್ಕಾರ, ಅಂದ್ರೆ ಏಕೀಕರಣ ಅನ್ನೋ ನಾಟಕಕ್ಕೆ ಉಪೋದ್ಘಾತ. ಆನಿಯಷ್ಟು ವಿಷಯಾನ್ನ ಇರಿಬೆ ಅಷ್ಟು ಮಾತಿನಲ್ಲಿ ಹೇಳಿ ನಾಟಕ ಪ್ರಾರಂಭ. ಸಂದರ್ಭ ಇಷ್ಟೇ : ಹಣಮಂತ ಕೊನ್ಹೇರ ದೇಸಾಯಿ, ಬಿ.ಎಸ್‌ಸಿ. ಹೆಲ್ಡೆಲ್ಬಿ ಅಡ್ವಾಕೇಟ, ಗದಗ, ಇವರ ಪಂಚಮ ಪತ್ನಿ (ನಾಲ್ವರಿಗೆ ಮುತ್ತೈದಿ ಸಾವು) ಕೋಲಾರದ ವೆಂಕಟಲಕ್ಷ್ಮು, ಮೈಸೂರು ಸೀಮೆಯವರು ಅಂತ ಬೇರೆ ಹೇಳಬೇಕೇ! ಬಳ್ಳಾರಿ ನರಸಮ್ಮ– ತೌರುಮನೆ ಮಾತ್ರ ಬಳ್ಳಾರಿ–ದೇಸಾಯರ ತಾಯಿ, ಅರ್ಥಾತ್ ವೆಂಕಟಲಕ್ಷ್ಮೂನ ಅತ್ತೆ, ಕುಂದಾಪುರದ ಕೃಷ್ಣ–ಅನ್ನದಾತ, ಮನೇಲಿ ಅಡಿಗೇ ಮಾಡೋ ಮಾಣಿ. ಕೊಯಂತ್ತೂರು ರಹೋತ್ತರಾವು–ಅತಿಥಿ. ಹೈದರಾಬಾದಿನಲ್ಲಿ ಜರುಗಲಿರುವ ಏಕೀಕರಣ ಪರಿಷತ್ತಿಗೆ ಇವರೆಲ್ಲರೂ ಹೋಗಲಿದ್ದಾರೆ. ಇವರೆಲ್ಲರೂ ಕನ್ನಡಿಗರೇ, ಎಲ್ಲರ ಮನೆ ಮಾತು ಕನ್ನಡವೇ. ಆದರೆ ಸ್ವಾರಸ್ಯ ಇಷ್ಟೆ, ಒಬ್ಬರ ಮಾತು ಮಾತ್ರ ಇನ್ನೊಬ್ಬರಿಗೆ ತಿಳಿಯುವಂತಿಲ್ಲ. ನಮ್ಮ ಹಣಮಂತ ದೇಸಾಯರೇ ಏಕೀಕರಣ ಪರಿಷತ್ತಿಗೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ.

## ದೃಶ್ಯ ೧

[ದೇಸಾಯರ ಮನೆ. ಮುಳುಗುವ ಸೂರ್ಯನ ಪ್ರಕಾಶಕ್ಕೆ ಮಾಣಿ ಅಕ್ಕಿಯಲ್ಲಿ ಹರಳನ್ನು ಆರಿಸುತ್ತಿದ್ದಾನೆ. ತುಳು ಹಾಡನ್ನು ಗೊಣಗುಟ್ಟುತ್ತಿದ್ದಾನೆ.]

ಮಾಣಿ : ಈ ಅಕ್ಕಿನಲ್ಲಿ ಕಲ್ಲು ಎಂಥದು ಮಾರಾಯ್ರೆ ಹೆಕ್ಕಿ ತೆಗೆಯೋದು? ಇದರಲ್ಲಿ ಅಕ್ಕಿ ತೆಗೆಯೋದು ಮೇಲಲ್ವ? ಈ ಜನಕ್ಕೆ ಅಡಿಗೆ ಮಾಡಿ ಬಡಿಸೋದು ನನ್ನ–ನನ್ನ ಕೈಯಿಂದ ಎಂದೂ ಆಗಲಿಕ್ಕಿಲ್ಲ. ಈ ಅಜ್ಜಿ, ಈ ರಾಯರ ಕಾಟಕ್ಕೆ ಬೇರೆ ಯಾವ ಜನ ಈ ಮನೇಲಿ ಒಂದು ಗಂಟೆ ಸಹ ಇರಲಿಕ್ಕಿಲ್ಲ. ನಾನು ಅಮ್ಮನಿಗೆ ಹೇಳಿ ತಂಗಿ ಮದುವೆಗೆ ಹೋಗಿ ಹಾಗೆ ಊರಲ್ಲಿ ನಿಂತು ಬಿಡುವ ಅಂತ ನೆನಸಿದ್ದು. ಮಾತಿಮಾತಿಗೆ ದಮ್ಮಯ್ಯ ಹಾಕಿ ಇಲ್ಲಿರೋದು ನನ್ನ ಕೈಯಿಂದಾಗುತ್ತೆ? ಬೇಡ ಮಾರಾಯ್ರೆ. ನನಗೆ ಆಗಲಿಕ್ಕಿಲ್ಲ. ಇಲ್ಲಿ ನನಗೆ ಸುಖ ಉಂಟು ಎಂಥದು? ಬೆಳಿಗ್ಗೆ ಒಂದು ಗಂಜಿ ಊಟ ಮಾಡಿ ಆಯ್ತು. ಮತ್ತೆ ಮೂರು ಗಂಟೆಗೆ ಊಟ ಮಾರಾಯ್ರೆ. ಬೇಡ, ಈ ಜನರ ಬಾಯಿಂದ ಮಾತು ಆದರೂ ಒಳ್ಳೆದುಂಟಾ? ಪಿರಿ ಪಿರಿ, ಪಿರಿ ಪಿರಿ, ಇಡೀ ದಿವಸ ಪಿರಿಪಿರಿ. ಇವರ ಬಾಸೆ ನನಗೆ ಏನೊಂದು ಗೊತ್ತಾಗಲಿಕ್ಕಿಲ್ಲ. ಅದು ಕನ್ನಡವೋ ! ಇವರ ಬಾಸೆ ಬೇಡ, ಇವರ ದೇಶ ಬೇಡ, ಇವರ ತಿಳ್ಳಿ ಬೇಡ. ನಾ ಊರಿಗೆ ಹೋಗಿ ಬಿಡುತ್ತೆ. (ಅಕ್ಕಿಯ ಕಡೆ ನೋಡಿ) ಈ ಹಾಳು ಅಕ್ಕಿ ಬೇರೆ. ಇದರಿಂದ ಅನ್ನ ಮಾಡೋದು ಎಂಥದು? ನನಗೇನು ತೋರೋಲ್ಲ. ಒಂದಲ್ಲ ಮಾರಾಯ್ರೆ, ಮೂರು ಜನ ಉಂಟು, ನನ್ನ ಮೇಲೆ ಸಮಾಜೇರು ಮಾಡೋದು.

ನರ : (ಬಾಗಿಲಲ್ಲಿ) ಕ್ರಿಷ್ಟ್ಯಾ, ಕ್ರಿಷ್ಟ್ಯಾ, (ಗಟಿಯಾಗಿ) ಏ, ಕ್ರಿಷ್ಟ್ಯಾ.

ಮಾಣಿ : (ಒಳಗಿನಿಂದ) ಬಂದೆ ಅಜ್ಜೀ, ಬಂದೆ

ನರ : ಬಾಗಿಲ ಯಾಕ ಬಂದು ಮಾಡೀಯೋ? ಬಾಗಿಲ ತಗಿ ಏ, ಕ್ರಿಷ್ಟ್ಯಾ.

ಮಾಣಿ : (ಕೋಪದಿಂದ) ಈ ಜನಕ್ಕೆ ಪ್ರಾಣ ಹೋಗುತ್ತ ? ಅದೆಂಥದು ಅಷ್ಟು ಅವಸರ ಮಾಡೋದು ? ಕೈಲಿ ಕೆಲಸ ಉಂಟಲ್ಲ.

ನರ : ಏ ಕ್ರಿಷ್ಟ್ಯಾ, ಕಿವೀರರ ಕೇಳ್ತಾವೊ ಇಲ್ಲೋ ? ಬಾಗಿಲ ಬಂದು ಮಾಡಿ ಏನು ನಡಿಸೀದಿ ಒಳಗ ? ಏ ಕ್ರಿಷ್ಟ್ಯಾ.

ಮಾಣಿ : ಬಂದೆ ಅಜ್ಜಿ. (ಬಾಗಿಲನ್ನು ತೆಗೆಯುವನು.)

ನರ : (ಕೈಯಲ್ಲಿ ಬತ್ತಿಯ ಬುಟ್ಟಿ, ಮಾಣಿಯನ್ನು ದುರದುರನೆ ನೋಡುತ್ತ ಪ್ರವೇಶಿಸಿ) ಬಾಗಿಲ ತಗಲಿಕ್ಕೆ ನಿನಗೆ ತಾಸು ಹತ್ತೇನು ? ಏನು ಕಾರಭಾರ ನಡಸಿದ್ದಿ ಒಳಗ?

ಮಾಣಿ : ಭಾರ ಎಂಥದು ಮಾರಾಯ್ರೆ ನಡಸೋದು? ನನಗೆ ಗೊತ್ತ ಭಾರ ?

ನರ : ಹಂಗಾರಽ ಬಾಗಲ ತಗೀಲಿಕ್ಕೆ ಯಾಕ ಅರ್ಧ ಘಂಟ ಹತ್ತ್ಯೋ ನಿನಗ ?

ಮಾಣಿ : ಗಂಟಿ ಹತ್ತೋದು ಎಂಥದು ? ದೇವರ ಕಟ್ಟೆ ಮೇಲಿನ ಗಂಟ ನನಗ ಗೊತ್ತುಂಟ ?

ನರ : ನಿನ್ನ ತಽಲಿ. ಬಾಗಿಲ ಯಾಕ ತಗಿಲಿಲ್ಲ ನಾ ಕೂಗ್ತಾನ ಅಂದೆ. ಕೂಗಿ ಕೂಗಿ ಗಂಟ್ಲ ಹರಕೊಂಡ್ನೆಲ್ಲಾ ಪಾವು ಘಂಟೇದ ಹೊತ್ತು.

ಮಾಣಿ : ಹೌದಾ ? ನನಗೆ ಇಲ್ಲಿ ಕೆಲಸ ಇಲ್ವಾ ? ನನ್ನ ಕೈ ಕಡಲಿ ತಿನ್ತಿದ್ದು ಹೇಳಿ ನೆನಸಿದ್ದ ನೀವು?

ನರ : ಹಾ, ಹಂಗ್ಹೇಳು. ಒಳಗಿನ ಕಡ್ಲೀಗ ಮಕಾ ಹತ್ತೀದ್ಯಾ ನೀನು. ಕಡ್ಲೀಗ ಕಡ್ಲೀನ ಬಾದು, ಚುರುಮುರೀಗ ಚುರುಮುರೀನ ಬಾದು ! ಹಿಂಗಾರ ಮನಿ ಮುಂದಾತು. (ಮಾಣಿಯ ಬಾಯಿಯನ್ನು ನೋಡಿ) ಏನೋ ಅದು ಬಾಯಾಗs, ಕುರಿ ಆಡಿನ್ಹಂಗ ನಮಲು ಹಾಕ್ತಾನ ಇದ್ದೀಯಲ್ಲ, ಏನದು ?

ಮಾಣಿ : ಇದು ಒಳ್ಳೆ ಅನುಮಾನ ಜನ ಮಾರಾಯ್ರೆ. ನನ್ನ ಬಾಯಲ್ಲಿ ಉಂಟು ಎಂಥದು ?... ಅಜ್ಜಿಗೆ ಈಗ ಒಂದು ತಮಾಸೆ ಮಾಡುವ. (ತಿನ್ನುವಂತೆ ನಟಿಸುವನು)

ನರ : ತಗೀತಿಯೊ ಇಲ್ಲೊ ಬಾಯಿ. ಈ ಮಗನ ಘಳಿಕೀಗೆ ಆ ಸೊಸಿ ದುಂದುಗಾರಿಕಿ ಒಂದು ಸಾಲ್ದೇ ? ನೀನು ಬ್ಯಾರೆ ಒಳಗೇ ಹೆಗ್ಗಣ ಮೇದ್ಹಂಗ ಮೇಯಿತೀಯಾ? ತಗಿ ಬಾಯಿ. (ಹತ್ತಿರ ಹೋಗುತ್ತ) ತಗೀತೀಯೊ ಇಲ್ಲೊ (ಮೂಗು ಹಿಡಿಯುವಳು.)

ಮಾಣಿ : (ಆ ಎಂದು ಬಾಯಿ ತೆಗೆದು) ನಾಲಿಗಿ ಅಜ್ಜಿ ನಾಲಿಗಿ ತಿನ್ತಾ ಇದ್ದದ್ದು. ತಿನ್ನೋದು ಎಂಥದು ಈ ಮನೇಲಿ? ಉಪ್ಪಿಗೆ ಕೂಡ ಬೀಗ ಮುದ್ರೆ, ಬೀಗದ ಕೈ ರಾಯರ ಜನಿವಾರದಲ್ಲಿ, ರಾಯರ ಜನಿವಾರ ಅಮ್ಮ ಅವರ ಕೈಯಲ್ಲಿ. ನಾನು ತಿನ್ನೋದು ಎಂಥದು ಉಂಟು, ಬುರ್ನಾಸು.

ನರ : ತಲಿ ಕೆಟ್ಟು ಮಾತಾಡ್ಲಿಕ್ಕೆ ಹತ್ಯಾನ ಇವ. ಇವನ ಸರಿ ಯಾರು ಮಾತಾಡ್ಯಾರು. ಇರಲಿ ಹೋಗೋ, ಯಾಕ ಸನ್ನಿ ಬಡದವರ್ಹಂಗ ಬಡಬಡಸ್ತಿ. ಹೋಗು ದೀಪ ಹಚ್ಹೋಗು. ಹಿಂಗ ಕತ್ಲ ಮಾಡಿಡಬಾರ್ದು ಮನೀನ, ಅವಲಕ್ಷಣ, ಲಕ್ಷ್ಮೀದೇವಿ ಬರೊ ಹೊತ್ತು.

ಮಾಣಿ : ಅವರು ಕ್ಲಬ್ಬಿಗೆ ಹೋಗಾಯ್ತಲ್ಲ. ಅವರು ಬರಲಿಕ್ಕೆ

ಇನ್ನ ತುಂಬ ಹೊತ್ತುಂಟು. ಇಷ್ಟು ಬೇಗ ಅಮ್ಮ ಎಂದಾದರೂ ಬಂದದ್ದು ಉಂಟ?

ನರ : ಇವಗೇನು ಖರೇ ಹುಚ್ಚೇ ಹಿಡಿತೇ ಹೆಂಗ? ಮೂರೋಸಂಜಿ ಹೊತ್ತು. ದೀಗೀ ಮುಟ್ಟಸೋ ಅಂದ್ರೆ ಅಮ್ಮ ಕ್ಲಬ್ಬು ಅಂತ ಹಚ್ಯಾನಲ್ಲ ಇವ. ಯಾರೋ ನೀ ಅನ್ನೋದು?

ಮಾಣಿ : ಅಮ್ಮ ಅಂದರೆ ಬೇರೆ ಇನ್ನೊಂದು ಜನ ಉಂಟು ಮಾರಾಯ್ರೆ ಈ ಮನೇಲಿ? ಅಮ್ಮ, ವೆಂಕಟಲಕ್ಷ್ಮಮ್ಮ, ನಿಮ್ಮ ಸೊಸೆ ಕ್ಲಬ್ಬಿಗೆ ಹೋಗಿಲ್ವಾ?

ನರ : ಕ್ಲಬ್ಬಿಗೆ ಹೋಗಿರೋ ಆ ಮಡ್ಡಮ್ಮನ ಸುದ್ದೀಗೆ ನಾನ್ಯಾಕೆ ಹೋಗಲಿ ? ಆಕಿ ಹಂಗ (ವೆಂಕಟಲಕ್ಷ್ಮಿ ಪ್ರವೇಶಿಸಿ ಕೇಳುತ್ತ ನಿಂತಿರುವಳು) ಬೆಂದ ಮನಿ ಯಾವುದು, ಬೇಯ್ದ ಮನಿ ಯಾವುದು ಅಂತ ಲಂಗ ಉಟುಗೊಂಡು ತಿರಗತಾನ ಇರ್ಲಿ. ಆ ದೊರೆಸಾನಿ ಬರ್ತಾಳೆ ಅಂತ ದೀಪ ಹಚ್ಚಿ ಇಡಸ್ಲೇನು ನಾನು ? ಆಕಿ ನೋಡಿದ್ರೆ ಒಂದತ್ತಿನ್ನ ನೋಡ್ಯಾಳೆ. ಇಂಥಾ ನಾಲ್ಕು ಸೊಸೇರು ನನ ಕೈಯಾಗ ಉರುದು ಹೋದ್ರು. ಆ ಮಗಾ ಹಣುಮ್ಯಾ ಒಂದು ಮಂಗ್ಯಾನ್ಹಂಗ ಆಕಿ ಮುಂದ ಕುಣಿತದ ಅಂತ ಬಿಟ್ಟೀನಿ. ಇಲ್ಲ ಅಂದ್ರೆ ಪಂಚರ ಹೊಂಡದಿಂದ ಡುಬ್ಬ ಕೆತ್ತುಹಂಗ ನೀರು ಹೊರಲಿಕ್ಕೆ ಎಂದೋ ಹಚ್ತಿದ್ದೆ. ಏನಂದುಕೊಂಡಾಳೋ ಬಳ್ಳಾರಿ ನರಸಮ್ಮ ಅಂದರ. ಇರಲಿ ಹೋಗೋ, ನೀನು ಮದಲು ದೀಪ ಮುಟ್ಟಸು.

ಮಾಣಿ : ದೀಪ ಮುಟ್ಟಿಸೋದು ಎಂಥದು ಮಾರಾಯ್ರೆ, ಯಾರಿಗೆ ಮುಟ್ಟಿಸೋದು?

ನರ : (ಕೋಪದಿಂದ) ಹೋಗ್ತೀದೋ ಇಲ್ಲೋ

(ಹೊಡೆಯಲು ಹೋಗುವಳು.)

ಮಾಣಿ : ಆದೀತು ಮಾರಾಯ್ರೆ (ಒಳಗೆ ಓಡುವನು.)

ನರ : (ಜನದ ಕಡೆ ತಿರುಗಿ) ಏನು ಛಲೋ ಪುರಾಣ ಹೇಳ್ತಾರೆ ಅಂದ್ರೆ ವಾಹಿನಿ ಆಚಾರ್ರು ! ಆ ಯುದ್ಧಖಾಂಡಂತೂ ಕೇಳಿದ್ದಂಗೆಲ್ಲ ಮೈ ತುಂಬಿದ್ಹಾಂಗಾಗ್ತಾದ ಹಂಗ.

ವೆ.ಲ : (ಕೈಯಲ್ಲಿ ಛತ್ರಿ, ಜಂಬದ ಚೀಲದೊಂದಿಗೆ ಪ್ರವೇಶಿಸಿ) ಕ್ರಿಷ್ಣಾ, ಏ ಕ್ರಿಷ್ಣಾ.

ಮಾಣಿ : (ಒಳಗಿನಿಂದ) ಬಂದೆ, ಬಂದೆ ಅಮ್ಮ.

ವೆ.ಲ : ಬಾರೋ ಬೇಗ.

ಮಾಣಿ : ಇಗೋ, ಬಂದೆ ಅಮ್ಮ.

ವೆ.ಲ : ಕೇಳಲ್ವೇನೋ ಕಿರಿಚಿಗೊಳ್ತಾ ಇರೋದು ? ಬಾರೋ ಬೇಗ.

ಮಾಣಿ : ಬಂದ್ಬಿಟ್ಟೆ ಅಮ್ಮ, ದೀಪ ಹಚ್ಚಾಯ್ತು, ಬಂದೆ. (ಬಂದು) ಎಂಥಾದ್ದು ಮಾರಾಯ್ರೆ ನೀವು ಕರೆದದ್ದು?

ವೆ.ಲ : ನಾನು ಇಲ್ಲಿ ಕೂಗ್ತಾ ಇದ್ರೆ ಏನೋ ನೀನಲ್ಲಿ ಮಾಡ್ತಾ ಇದ್ದದ್ದು?

ಮಾಣಿ : ನಾನು ಮಾಡಿದ್ದು ಉಂಟು ಏನಲ್ಲಿ ? ದೀಪ ಹಚ್ಚಿ ಬಂದದ್ದು.

ವೆ.ಲ : ಯಾರೋ ನಿನಗೆ ದೀಪ ಮುಟ್ಟಿಸಲಿಕ್ಕೆ ಹೇಳಿದ್ದು ?

ಮಾಣಿ : ಅಜ್ಜಿ ಹೇಳಲಿಲ್ವ ?

ನರ : ಹೌದವ್ವ, ನಾನ್ಹೇಳ್ದೆ ಅವಗೆ ದೀವಿಗಿ ಹಚ್ಚು ಅಂತ.

ವೆ.ಲ : ಈಗ ನಾನು ಹೇಳ್ತೇನೆ ಹೋಗು, ಅದನ್ನ ನಂದಿಸಿ ಬಾ. ಹೂ ಬೇಗ.

ನರ : ಕ್ರಿಷ್ಟ್ಯಾ, ಸುಕ್ರವಾರ ಮೂರೋ ಸಂಜೀ ಹೊತ್ತು, ಹಚ್ಚಿ ದೀಪಾನ ನಂದಿಸ್ತೀಯಾ ? ನಿನ ಚರ್ಮಾನ ಸುಲಿಸ್ತೀನಿ, ಅವ ಹಣಮ್ಯ ಒಂದು ಮನಿಗೆ ಬರ್ಲಿ.

ವೆ.ಲ : ಯಾರಿಗೋ ಕೃಷ್ಣ ನಾನು ಹೇಳ್ತಾ ಇರೋದು ? ದೀಪ ನಂದಿಸು ಅಂತ ನಾನು ಹೇಳ್ತಾ ಇದ್ರೂನೂವೆ ಕಲ್ಲು ನಿಂತಹಾಗೆ ನಿಲ್ತೀಯಾ. ಅವರು ಬರ್ಲಿ ನಿಲ್ಲು, ನಿನಗೆ ನೇಣು ಹಾಕಿಸ್ತೇನೆ, ನೇಣು.

ಮಾಣಿ : ಈಗ ನಾನು ಮಾಡೋದು ಎಂಥದು ಮಾರಾಯ್ರೆ? ದಮ್ಮಯ್ಯ. ಪಿರಿ ಪಿರಿ ಜನ.

ವೆ.ಲ : ಹೋಗೋ ಬೇಗ, ದೀಪ ನಂದಿಸೋ.

ನರ : ಕ್ರಿಷ್ಟ್ಯಾ, ಹುಷಾರ್.

ಮಾಣಿ : ದೀಪ ಹಚ್ಚಿ ನಿಮ್ಮ ಮಾತು ಕೇಳಿ ಆಯ್ತಲ್ಲ. ಇನ್ನು ಅದನ್ನು ತೆಗೆದು ಅಮ್ಮನ ಮಾತು ಕೇಳೋದು. ಮತ್ತೆ ಮಾಡೋದು ಎಂಥದು ಬೇರೆ ! (ದೀಪ ಆರಿಸಿ ಬಂದು) ಆರಿಸಾಯ್ತು ಮಾರಾಯ್ರೆ.

ವೆ.ಲ : ನಂದಿಸಾಯ್ತೆ ? ಹೂ ಹೋಗು ಈಗ ದೀಪ ಹಚ್ಚಿಡು.

ಮಾಣಿ : ಇದು ಎಂಥದು ಮಾರಾಯ್ರೆ, ಉರಿತ ಇದ್ದ ದೀಪ ಆರಿಸಿದ್ದು ಏಕೆ ಮತ್ತೆ ಹಚ್ಚೋದಕ್ಕಾ ?

ವೆ.ಲ : ನಿನಗೇಕೋ ಅದೆಲ್ಲ ಅಧಿಕಪ್ರಸಂಗ ? ಹೇಳಿದಷ್ಟು ಮಾಡು ಅಂತ ಹೇಳ್ಳಿಲ್ವಾ. ಹೋಗೋ ಬೇಗ, ದೀಪ ಹಚ್ಚು.

ಮಾಣಿ : ಆದೀತು ಮಾರಾಯ್ರೆ, ನೀವು ನನ್ನ ಮೇಲೆ ಕೋಪ ಮಾಡೋದು ಬೇಡ. ಈ ಕತ್ತಲಲ್ಲಿ ಬೆಂಕಿಪೆಟ್ಟಿಗೆ ಹುಡುಕೋದಾ?

ನರ : ಏ ಕ್ರಿಷ್ಟ್ಯಾ, ದೀವಿಗಿ ಹಚ್ಚಬ್ಯಾಡ. ಹಚ್ಚು ಅಂದಾಗ ಹಚ್ಚಲಿಕ್ಕೆ ಆರಿಸು ಅಂದಾಗ ಆರಿಸಲಿಕ್ಕೆ ಇದೇನು ಗೌಡನ ಕ್ವಾಳ ಆತೇನು ? ಸಾಪ ಸಾಪ ಹಚ್ಯಾಡ. ಹಚ್ಚಿದಿ ಅಂದ್ರ ಹಣಿವ್ಯಾ ಬಂದವ್ಯಾಲೆ ನಿನ್ನ ಖತೀನ ಮಾಡಿಸ್ತೀನಿ ನೋಡು.

ವೆ.ಲ : ಹಚ್ಚದೆ ಒಂದಿರು. ಅವರು ಬಂದ ಮೇಲೆ ಚೆನ್ನಾಗಿ ಮದುವೆ ಆಗುತ್ತೆ.

ಮಾಣಿ : ದಮ್ಮಯ್ಯ ಮಾರಾಯ್ರೆ, ಅಜ್ಜಿ ಮಾಡಿಸೋ ಖತಿ ಎಂತದು, ನೀವು ಮಾಡಿಸೋ ಮದುವೆ ಎಂಥದು? ನನಗೆ ಈ ಗೌಜೇ ಬೇಡ. ಈ ಪಿರಿ ಪಿರಿ, ಯಾರಿಗೆ ತಾನೆ ತಲೆ ಸಮ ಇರುತ್ತ ? ನೀವು ನನ್ನ ಮೇಲೆ ಬೀಳೋದು ಬೇಡ. ನನಗೂ ಮನೇಲಿ ತಾಯಿ–ತಂಗಿ ಉಂಟು. ನಾನು ನನ್ನ ಸಾಮಾನು ಕಟ್ಟಿ ಊರಿಗೆ ಹೊರಟೆ. ಇದು ಎಂಥದು ಮಾರಾಯ್ರೆ ದೀಪ ಹಚ್ಚಿದರೆ ಮೂಳೆ ಮುರದೀತು, ಬಿಟ್ಟರೆ ತಲೆ ಒಡದೀತು. ಬೇಡ, ನನ್ನ ಬಟ್ಟೆ ಗಂಟು ಕಟ್ಟಿ ನಾ ಹೋತೆ. (ಒಳಗೆ ಹೋಗುವನು.)

ವೆ.ಲ : ಏಳ್ರೂಪಾಯದ ಒಬ್ಬ ಅಡಿಗೆ ಹುಡುಗ ಕೂಡ ನನ್ನ ಮಾತು ಕೇಳೋಲ್ಲ ಅಂದ್ರೆ ನಾನೇಕೆ ಈ ಮನೇಲಿರಬೇಕೋ ನಾ ಬೇರೆ ಕಾಣೆ. ಕೋಲಾರದ ವೆಂಕಟಸುಬ್ಬರಾಯರ ಮಗಳು ವೆಂಕಟಲಕ್ಷ್ಮ ಅಂದ್ರೆ ಅಷ್ಟೊಂದು ಕೆಟ್ಟು ಬಂದ್ಲು ಅಂತ ತಿಳಿದಿದ್ದಾರೇನೋ! ಈ ಮನೇಲಿ ಇನ್ನೊಂದು ನಿಮಿಷಾನೂ ಇರೋಲ್ಲ.

ನರ : ಯಾಕ ಇರೋದಿಲ್ಲವ್ವ, ಇರು, ಕಂಕಣದ ಕೈಯಾಕಿನ್ನ ಆರಿಸಿ ತಂದಾನ, ಅಗತ್ಯ ಇರು. ದೇಸಾಯರ ಮನಿ ನಷ್ಟ ಸಂತತಿ ಆಗ್ಬಾರ್ದು, ಮನೀಗ ದೀಪ ಹಚ್ಚೋ

ಲಕ್ಷ್ಮೀ ಅಂತ ಹುಡಿಹುಡಿಕಿ ತಂದಾನ. ಅದಕ್ಕ ಸುಕ್ರವಾರ, ಮೂರೋಸಂಜಿ ಹೊತ್ತು ಹಚ್ಚಿದ ದೀಪ ಆರಿಸಿದೆವ್ವ. ದೀಪ ಹಚ್ಚೋ ಲಕ್ಷ್ಮಿನ್ನ ಮಾಡಿಕೊಳ್ಳೊ ಮಂಗಮುಂಡೆ ಮಗನೆ, – ಅಲ್ಲ ಗಂಡ, ಅಂದ್ರೆ ದೀಪ ಆರಿಸೋ ಮಾರೆವ್ವನ ತಂದಾನ ಮನ್ಯಾಗ.

ವೆ.ಲ: : ಬಾಯಿ ಮುಚ್ಕೊಂಡು ಇರೋಕಾಗದಿದ್ರೆ ನಾನು ಮನೆ ಬಿಟ್ಟು ಹೋಗೋವರೆಗೂ ಹೊರಗೆ ಹೋಗಿ ಜಗುಲಿ ಮೇಲಾದರೂ ಕುಳಿತುಗೊಳ್ಳಿ.

ನರ : ಯಾರನ್ನs ಗಯ್ಯಾಳಿ, ಮನಿ ಬಿಟ್ಟು ಹೋಗು ಅಂತೀದಿ? ನನಗs ನನಗs ಹೀಂಗ ಅಂತೀಯಾ? ಇವತ್ತು ಬಂದ ಕೋಡು ನಿನ್ನೆ ಬಂದ ಕಿವಿ ಮುಂದೆ ಅಂತ ನನ್ನs ಹೊರಗ ಹಾಕ್ತೀಯಾ ?

ವೆ.ಲ : ನಿಮ್ಮ ಕಂತೆ ಪುರಾಣಯೆಲ್ಲ ನನ್ನ ಮುಂದೆ ಬಿಚ್ಚಬೇಡಿ ಅಂದ್ರೆ. ಬಹಳ ನೋಡಿದ್ದೇನೆ ಇಂಥೋರ್ನ. ಯಾರಿಗೆ ನೀವು ಮಾರೆವ್ವ ಅನ್ನೋದು?

ನರ : ಹೌದೇ ಅಂತೀನಿ, ಮಾರೆವ್ವ, ಮಾರೆವ್ವ, ಮಾರೆವ್ವ ಇನ್ನೂ ಹತ್ತು ಬ್ಯಾರೆ ಅಂತೀನಿ.

ವೆ.ಲ: : ಇಲ್ಲಿ ನೋಡಿ, ನನ್ನ ತಂದೆ–ತಾಯೀಗೆ ನಾನೊಬ್ಬಳು ಭಾರವಾಗಿರಲಿಲ್ಲ ತಿಳೀತೇ. ಅವರ ಮಗಳು ಇಂಥಾ ದರಿದ್ರರ ಮನೇಲಿರಬೇಕಾಗುತ್ತೆ ಅಂತ ತಿಳಿದಿದ್ರೆ ಅವರು ನನ್ನನ್ನು ಕೊಳದಲ್ಲಾದರೂ ದೂಡಿ ಬಿಡ್ತಾ ಇದ್ರು. ನಾನು ಸಾಯೋವರೆಗೂ ಅವರ ಮನೇಲಿದ್ರೂನೂವೆ ಅವರೇನು ಅನ್ನೋಲ್ಲ. ಮುದೀ ಗಂಡನ್ನ ಮಾಡ್ಕೊಂಡು ಸ್ನೇಹಿತರಲ್ಲಿ ಈಗ ಆಗಿರೋ ಅಪಹಾಸ್ಯ ಸಾಕು ಸದ್ಯ. ಇನ್ನೂ ಪೂರ್ತಿ ಮಾನ ಹೋಗೋದು ಬೇಡ. ಈಗಲೆ ಹೊರಟೆ ನಾನು. ನನಗೇಕೆ ಬೇಕು ಈ ಹಂಗಿನ ಮನೆ?

ಕ್ರಿಷ್ಣಾ ಕ್ರಿಷ್ಣಾ, ಇವನೂ ಸಹ ಮಾಡೋಲ್ಲ. ನನ್ನ ಸಾಮಾನುಗಳನ್ನೆಲ್ಲ ನಾನೇ ಪ್ಯಾಕ್ ಮಾಡ್ಬಿಟ್ಟು ಹೊರಟ್ಬಿಡ್ತೇನೆ.

[ಕತ್ತಲಲ್ಲಿಯೇ ಕೈ ಸವರುತ್ತ ಸೂಟ್‌ಕೇಸಿಗೆ ಸಾಮಾನುಗಳನ್ನು ತುಂಬುವಳು]

ನರ : ನೀನ್ಯಾಕ ಹೋಗ್ತೀದವ್ವ ಮನಿ ಬಿಟ್ಟು? ನಾನೇ ಹೋಗ್ತೀನಿ. ನೀನೇ ಇರು. ನಾನು ಆಗಲೆ ಕುಯ್ಯೋ ಮರ್‍ರ್ಯೋ ಅಂದೆ. ಇವರು ಪಾಲಾಗೋ ಮುಂದೆ ನನಗ ಗೊತ್ತಿತ್ತು–ನೀನು ಹೇಳಿಕೇಳಿ ಮೈಸೂರು ಗಯ್ಯಾಳಿ. ನನ್ನ ಹುರಕೊಂಡು ಕುಡಿತಿ ಅಂತ. ಅದಕ್ಕs ನಾನು ವಲ್ಲ್ನೋ, ಸಾಪು, ಸಾಪು ವಲ್ಲೆ, ಈ ಹಿರೇ ಮಗ ಧಡ್ಡ ಖೋಡಿ, ಎಂಥಾ ಉನ್ನತ್ತ ಆದರೂ ಚಿಕ್ಕವನೇ ವಾಸಿ ಅಂದೆ. ಮುಪ್ಪಿನ ಕಾಲಕ್ಕ ನಮ್ಮನ್ನೂ–ಗಂಡ–ಹೆಣ್ತಿನ್ನೂ ಅಗಲಿಸಿ (ಅಳುವ ದನಿಯಲ್ಲಿ) ಉರ್‍ಲಿಗೆ ಹಾಕ್ತೀರಾ. ಅಗತ್ಯ ಇರವ್ವ, ನೀನೇ ಇರು, ಇಗೋ ನಾನು ಹೊರಟೆ.

[ಒಂದು ತಂಬಿಗೆ, ಸೀರೆ ಕೈಯಲ್ಲಿ ಹಿಡಿದು ಹೊರಡಲನುವಾಗುವಳು.]

ಮಾಣಿ : (ಅಡಿಗೆ ಸೌಟು, ಅಂಗವಸ್ತ್ರ ಗೋಣಿಪಟ್ಟೆಯಲ್ಲಿ ಸುತ್ತಿ ಕಂಕುಳಲ್ಲಿಟ್ಟು) ಈ ಮನೆಗೆ ನಾನು ಇನ್ನೊಂದು ಸಲ ಎಂದಾದರೂ ಬರೋದು ಉಂಟಾ? ಅನ್ನ ಇಲ್ಲದೆ ಪ್ರಾಣ ಹೋದರೂ ಸಿವ ಈ ಮನೆ ಬೇಡ ಮಾರಾಯ್ರೆ.

[ಮೂವರು ಹೊರಡಲು ಅನುವಾಗುವರು.]

ಹಣ : (ಪ್ರವೇಶಿಸಿ) ಅವ್ವಾ, ಏ ಅವ್ವಾ, ಇದೇನು ದೀವಿಗಿ ಹಚ್ಚಧಾಂಗ ಕತ್ಲದಾಗ ಇದ್ದೀರೋ ಏನ್ಗತಿ?

ನರ : ಹಚ್ಚಿಸಿಗೊಳ್ಳಪಾ ದೀವಿಗೀನ. ಅಗತ್ಯ ಹಚ್ಚಿಸಿಗೋ. ಮನಿ ದೀಪ ಹಚ್ಚಲಿ ಅಂತ ಮೂವತ್ತು ಗಾವುದದಿಂದ ತಂದೀದಿ ರಂಭಿನ್ನ. ಸುಕ್ಕರವಾರಾ ಮೂರೋಸಂಜಿ, ಆರಸಬಾರ್ದು ಅಪಶಕುನ ಅಂದ್ರೆ, ಆರಿಸಿದ್ಳು. (ಅಳುವ ದನಿಯಲ್ಲಿ) ಮೂರು ಸರ್ತೆ ಬದರಿ ಯಾತ್ರಿ ಮಾಡಿ ಬಂದ ನನಗ ಆಡಬಾರದ ಮಾತುಗಳು ಆಡಿದಳಪಾ ಹಣಿಮ್ಯಾ ನಿನ ಹೇಣ್ತಿ. ಆಕೀನಽ ಅಗತ್ಯ ಮನ್ಯಾಗಿರ್ಲಿ. ನಾ ಹೊರಟೆ.

ಹಣ : (ಅಡ್ಡಗಟ್ಟಿ) ತುಸು ತಡಿಯವಾ, ಹಿಂಗ್ಯಾಕ ಒಂದೇ ಸವನೆ ಬಡಕೊಳ್ಳಿಕ್ಕೆ ಹತ್ತೀದಿ? ಆದ್ದಾರ ಏನು ಆತೂ? ಮೊದಲು ದೀವಿಗಿ ಹಚ್ಚಲೆಲಾ. ಆ ಕ್ರಿಷ್ಟ್ಯಾ ಎಲ್ಹೋದ ಅವ? ಕ್ರಿಷ್ಟ್ಯಾ, ಕ್ರಿಷ್ಟ್ಯಾ, ಏ ಕ್ರಿಷ್ಟ್ಯಾ.

ಮಾಣಿ : ನೀವು ಏನಾದರೂ ಹೇಳಿ ಮಾರಾಯ್ರೆ, ಆದೀತು. ನಾನು ದಮ್ಮಯ್ಯ ಹಾಕ್ತೆ ನನ್ನ ಬಿಟ್ಟುಬಿಡಿ. ನನಗೆ ಮಾತ್ರ ಈ ಮನೇಲಿ ಇರಲಿಕ್ಕೆ ಹೇಳೋದು ಬೇಡ. ನಾನು ಕಂಡಿತ ಊರಿಗೆ ಹೋಗೋದು ಮಾರಾಯ್ರೆ.

ಹಣ : (ಅಡ್ಡ ನಿಂತು) ಎಲಾ ಇವನ, ಇವಗೂ ಏನು ಬಂತು ಅಂತೀನಿ. ಹಿಂಗ್ಯಾಕ ಬಂತು ಪ್ರಸಂಗ? ಆದ್ದಾರ ಏನಾತು? ಅದನಾರ ಬಾಯಿಬಿಡಲಾ.

ವೆ.ಲ : (ಕೋಪದಿಂದ) ಇಲ್ಲಿ ಬನ್ನಿ ಇಲ್ಲೆ.

ಹಣ : (ಚಕಿತನಾಗಿ) ಅರೆ, ನೀನು ಸುದ್ಧಾ ಇಲ್ಲೆ ಕತ್ಲದಾಗ !

ವೆ.ಲ : ಇಲ್ಲಿ ಬನ್ನಿ ಅಂದ್ರೆ.

ಹಣ : ಬಂದೆ, ಬಂದೆ ಲಗೂನ ಬಂದೆ. (ಹೋಗಿ ಮುಂದೆ ನಿಂತು) ಏನದೂ ?

ನರ : (ಜನದ ಕಡೆ ತಿರುಗಿ) ಹೋಗಪ್ಪ, ಓಡಿಕೋತ ಹೋಗು.

ಅದೇನು ಅಂತ್ರಾನs ಬರಿಸ್ಯಾಳೋ, ಬೂದೀನs ಹಾಕಿಶ್ಯಾಳೋ, ಸಾಯಿತಾನ ಆಕಿ ಧನಿ ಕೇಳಿದರ. ಕುಣಿ ಹೋಗು ಆಕಿ ಮುಂದ ತಕತಕ ಅಂತ.

ವೆ.ಲ : ಹೂ, ತೆಗೆದುಕೊಳ್ಳಿ (ಕೈಯಲ್ಲಿ ಬುಟ್ಟಿ ಕೊಡುವಳು) ಇದನ್ನು ತೆಗೆದುಕೊಳ್ಳಿ (ಸೂಟ್ ಕೇಸನ್ನು ಕಂಕುಳಲ್ಲಿಟ್ಟು ಕೊಳ್ಳುವನು) ಇದೊಂದು ತಕ್ಕೊಳ್ಳಿ (ದೊಡ್ಡ ಹಾರನ್ನುಳ್ಳ ಗ್ರಾಮಫೋನು ಪೆಟ್ಟಿಗೆಯನ್ನು ತಲೆಯ ಮೇಲೆ ಇಡುವಳು)

ಹಣ : ಏನೇ ಇದೆಲ್ಲ?

ವೆ.ಲ : (ದರ್ಪದಿಂದ) ಹೂ, ಹೊರಡಿ ಸುಮ್ಮನೆ ಅಂದ್ರೆ !

ಹಣ : ಎಲ್ಲಿಗೆ ಹೊರಡೋದು ?

ನರ : (ಹಣೆ ಬಡೆದುಕೊಳ್ಳುತ್ತ) ಅಯ್ಯೋ, ಅಯ್ಯೋ, ಅಯ್ಯೋ ಏನು ಬಂತೋ ಹಣವ್ಯಾ ನಿನಗೆ? ಆರಿಸಿ ಮಾಡಿಕೊಂಡಿ ಅಲ್ಲೋ ಈ ಮಾರೆವ್ವನ್ನ.

ವೆ.ಲ : ಅಗೋ ನೋಡಿ, ನಿಮ್ಮ ತಾಯಿಗೆ ಬಾಯಿ ಮುಚ್ಚಿಗೊಂಡು ಬಿದ್ದಿರೋಕೆ ಹೇಳಿ ಮೊದಲು. ನನ್ನ ತಂದೆ–ತಾಯಿ ಸರಿ ಸಹ ನಾನು ಅನಿಸಿಗೊಂಡವಳಲ್ಲ. ಇಲ್ಲಿ ಬಂದು ಈ ಮುದಿಗೂಬೆ ಸರಿ ಅನಿಸಿಗೊಳ್ಳೋದಾಯ್ತು. ನನ್ನ ಗಿಳೀ ಸಾಕಿದ ಹಾಗೆ ಸಾಕಿ ನನ್ತಂದೆ–ತಾಯಿ ಈ ಬೆಕ್ಕಿನ ಬಾಯಲ್ಲಿ ಕೊಟ್ರು.

ಹಣ : ಹೌದೇ, ಅದಿರ್ಲಿ. ಈ ಸಾಮಾನೆಲ್ಲ ಏಕೆ ತಲಿಮ್ಯಾಲಿಟ್ಟಿ?

ವೆ.ಲ : ಹೂ ಹೊರಡಿ ಅಂದ್ರೆ.

ಹಣ : ಎಲ್ಲಿಗೆ ನೀ ಹೊರಟು ನಿಂತಿರೋದಾದ್ರೂ, ಅದನಾರ ಹೇಳಲ ಒಂದಿಷ್ಟು.

ವೆ.ಲ : ನಿಮಗೇಕೆ ಅಲ್ಲದ ಅಧಿಕಪ್ರಸಂಗ? ಹೊರಡಿ ಅಂದ್ರೆ ಹೊರಡಿ ಅಷ್ಟೆ. ನಾನಂತೂ ಈ ಮನೇಲಿ ನಿಂತು ನೀರು ಸಹ ಕುಡಿಯೋಲ್ಲ.

ಹಣ : ಹಂಗs ಮಾಡವಲ್ಯಾಕೇ, ಇದೇನ್ನಡಿಸಿದಿ ಕತ್ಲದಾಗ? ಹೊರಡೂದಾದರೂ ಎಲ್ಲಿಗೆ ಹೇಳಲಾ.

ವೆ.ಲ : ಇನ್ನೆಲ್ಲಿಗೆ, ರೇಲ್ವೇ ಸ್ಟೇಷನ್ನಿಗೆ.

ಹಣ : ರೈಲ್ವೆ ಸ್ಟೇಷನ್ನಿಗೆ ! ಯಾಕ? ಹಿಂಗ್ಯಾಕ ಒಮ್ಮೆಲೆ ! ಛೆಛೇ, ಹಿಂಗ್ಯಾಕ ಮಾಡ್ಲಿಕ್ಕೆ ಹತ್ತೀರಿ ಮೂರೂ ಮಂದೀನೂ ಇವತ್ತು? (ಸಾಮಾನುಗಳನ್ನು ಒಂದೊಂದಾಗಿ ಕೆಳಗಿಡುವನು.)

ವೆ.ಲ : ಹಾಗಾದ್ರೆ ನೀವು ಇದನ್ನು ತರೋಲ್ಲ ತಾನೆ ? ನಾನು ಸ್ಟೇಷನ್ನಿಗೆ ಹೋಗ್ತೇನೆ.

ಹಣ : (ಅಡ್ಡಗಟ್ಟಿ) ಹ್ಯಾ, ಹ್ಯಾ, ನಿಂದ್ರು ಮಾರಾಯಳೆ ಹಿಂಗ್ಯಾಕ ಒಂದs ಸವನ ದೊಡ್ಡಾಟಾನ ನಡಿಸೀದಿ ?

ವೆ.ಲ : ನನಗೆ ರಸ್ತೆ ಬಿಡ್ರಿ ಅಂದ್ರೆ; ನಾನೀ ಮನೇಲಿರೋದಿಲ್ಲ.

ನರ : ಹಾದೀ ತಗಿಯಪ ಹಣಿಮ್ಯಾ, ಸರ್ವಸರ್ವಥಾ ಈ ಮನ್ಯಾಗಿರಲಾರೆ.

ಮಾಣಿ : ನನಗೆ ಈಗ ಊರಿಗೆ ಹೋಗೋದು ಉಂಟು ಮಾರಾಯ್ರೆ. ನಿಮಗೆ ದಮ್ಮಯ್ಯ ಹೇಳ್ತೆ. ನನಗೆ ಹೊರಗೆ ಬಿಡಿ.

[ಮೂವರೂ ಸಾಲಾಗಿ ನಿಲ್ಲುವರು.]

ರಘು : (ಬಾಗಿಲಲ್ಲಿ) ರಾಯ್ರೇ, ರಾಯ್ರೇ.

ಹಣ : (ಚಕಿತನಾಗಿ) ಅಯ್ಯೊ ! ಯಾರೋ ಕಕ್ಷಿದಾರ್ರು ! (ಅಂಗಲಾಚಿ ಬೇಡುವಂತೆ) ಹೋಗ್ರಿ ಮಹರಾಯ್ರೆ

ಒಳಗs ಮೂರೂ ಮಂದೀನೂ. ಒಳಗ ಹೋಗ್ರಿ ದಯಮಾಡಿ. ಕಕ್ಷಿದಾರ್ರ ಮುಂದೆ ಸುದ್ಧಾ ನನ್ನ ಮರ್ಯಾದಿ ಕಾಸಿಗೆ ಪಂಥೇರು ಮಾಡಬ್ಯಾಡ್ರಿ.

ರಘು : ರಾಯ್ರೇ, ರಾಯ್ರೇ.

ಹಣ : ಬಂದೆ, ಬಂದೆ. ದಯಮಾಡಿ ಹೋಗ್ರಿ ಒಳಗ, ನಿಮಗೆ ಕೈಮುಗಿದು, ಕಾಲುಬಿದ್ದು, ಗಲ್ಲಗಲ್ಲ ಬಡಕೊಂಡು ಘಂಟೀ ಹೋಡೀತೀನಿ ಬೇಕಾದ್ರ. ಹೋಗ್ರಿ ದಯ ಮಾಡಿ ಒಳಗೆ. ಈಗ ಬಾಳ್ವಿ ಆಗಿರೋ ಹಂಡಾ ವರ್ಣಾನ ಸಾಕು. ದಯಮಾಡಿ ಹೋಗ್ರಿ (ಉದ್ದಕ್ಕೂ ಮಲಗಿ ಮೂವರಿಗೂ ನಮಸ್ಕರಿಸುವನು.)

ರಘು : ರಾಯ್ರೇ, ರಾಯ್ರೇ !

ಹಣ : (ನಮಸ್ಕರಿಸುತ್ತ) ಬಂದೆ, ಬಂದೆ. ಹೋಗ್ರಿ ದಯಮಾಡಿ ಒಳಗೆ. (ಎಲ್ಲರೂ ಒಳಗೆ ಹೋಗುವರು) (ಅಧಿಕಾರವಾಣಿಯಿಂದ) ಕ್ರಿಷ್ಟ್ಯಾ ಕ್ರಿಷ್ಟ್ಯಾ, ದೀವಿಗಿ ಹಚ್ಚಿಡಲಾ.

ಮಾಣಿ : (ದೀಪದೊಂದಿಗೆ ಬಂದು) ಈ ಮನೆ ಕೆಲಸ ನನಗೆ ತಪ್ಪುತ್ತ ? ನನ್ನ ಹಣೇಲಿ ಬರಿಲಿಲ್ಲ ಬ್ರಹ್ಮ.

ಹಣ : ಒಳಗೆ ಕರಿಯಲ, ಕಕ್ಷಿಗಾರ್ರನ್ನ (ಒಳಗೆ ಹೋಗುವನು.)

ಮಾಣಿ : ಆದೀತು ಮಾರಾಯ್ರೆ (ಬಾಗಿಲನ್ನು ತೆಗೆದು ನೋಡಿ) ಆ ಜನ ಕಕ್ಷಿದಾರ ಉಂಟ ? ನನಗೆ ಹಾಗೆ ತೋರೋಲ್ಲ. ತಲೆ ಮೇಲೆ ರುಮಾಲು ಬೇಡವಾ ?

ವೆ.ಲ : ಅಯ್ಯೋ, ಇದಕ್ಕೆ ನಿನಗೆ ಬೆಪ್ಪು ತಕ್ಕಡಿ ಅನ್ನೋದು. ಕಕ್ಷಿದಾರ್ರನ್ನ ಒಳಗೆ ಕರೆಯದೆ ರಸ್ತೆಯಲ್ಲಿ ನಿಲ್ಲಿಸೇನೋ ಮಾತನಾಡೋದು.

ಮಾಣಿ : ನನಗೆ ಗೊತ್ತುಂಟ ರಾಯರ ಕಾನೂನೆಲ್ಲ? ರುಮಾಲು

ಜನ ಬಂದದ್ದಕ್ಕೆ ಕಕ್ಸಿದಾರ ಎಂದು ಹೇಳಿದ್ದು ಸಮ ಗೊತ್ತುಂಟು. ಆದೀತು, ನೀವು ನನ್ನ ಮೇಲೆ ಕೋಪ ಮಾಡೋದು ಬೇಡ (ವೆಂಕಟಲಕ್ಷ್ಮ ಒಳಗೆ ಹೋಗುವಳು.) (ರಘೋತ್ತಮರಾಯನ ಪ್ರವೇಶ) ಹೌದಾ, ನೀವು ಕಕ್ಸಿದಾರ ಹೌದಾ ಮಾರಾಯ್ರೆ ?

ರಘು : ನಂದು ಊರು ಕೊಯತ್ತೂರು. ಊರು ಬಿಟ್ಟು ಮೂರು ಮಾಸ ಆಯ್ತು. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಫಂಡರ ಪುರಕ್ಕೆ ಹೋಯಿಟ್ಟಟ್ಟು ಕಾಲೀಲೆ ಟ್ರೈನ್ ಬರೋಣ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಮೂರು ಹಗಲು, ಮೂರು ರಾತ್ರಿ ಆತು ಕೂಳುಂಡು.

ಮಾಣಿ : (ದಿಗ್ಭ್ರಾಂತನಾಗಿ) ಅಮ್ಮಾ, ಈ ಜನ ಆಡೋ ಬಾಸೆ ಎಂಥದು ಮಾರಾಯ್ರೆ ! ದಮ್ಮಯ್ಯ ನಂಗೆ ಬೇಡ. ಇದೆಂಥದು 'ಕೂಳುಂಡು' ಅಂತ ಹೇಳುತ್ತೆ ಈ ಜನ.

ವೆ.ಲ : (ಪ್ರವೇಶಿಸಿ) ಏನೋ ಕ್ರಿಷ್ಟಾ, ಬಾಗಿಲಲ್ಲಿ ನಿಲ್ಲಸಿಯೇ ಚರ್ಚೆ ಮಾಡೋದು? ಬನ್ನಿ ಸ್ವಾಮಿ ಒಳಗೆ, ಕುಳಿತುಕೊಳ್ಳಿ. ಈಗ ತಾನೆ ಒಳಗೆ ಹೋಗಿದಾರೆ. ಬರ್ತಾರೆ ಕುಳಿತುಕೊಳ್ಳಿ. ಏನು ಕೇಸು ಕೊಡಬೇಕಾಗಿದೆಯೆ? ಕುಳಿತುಕೊಳ್ಳಿ (ರಘೋತ್ತಮ ರಾಯನು ಕೂಡುವನು.) ಯಾವ ಊರು ತಮ್ಮದು?

ರಘು: : ನನ್ನ ಸ್ವಸ್ಥಾನ ಕೊಯತ್ತೂರು. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಸೇಲತಲೆ, ಕುಂಭಕೋಣತಲೆ ಯಲ್ಲ ತುಂಬ ಜನ ನನ್ನವರಿರೋಣ. ನಾನು ತುಂಬ ದಿನ ಆಯ್ತು ಕೊಯತ್ತೂರು ಬಿಟ್ಟಟ್ಟು.

ವೆ.ಲ : ಸ್ವಲ್ಪ ತಾಳಿ ತಾಳಿ, ಅವರನ್ನೇ ಕರೀತೇನೆ. ಕೇಸಿನ ವಿಷಯ ಅವರಿಗೆ ತಾನೆ ಹೇಳಿ. ಏನ್ರೀ, ಅಲ್ಲ ಇವರೇ.

ಇಲ್ಲಿ ಬನ್ನಿ ಅಂದ್ರೆ ಬಂದ್ರ್ಯಾ.

ರಘು : (ಎದ್ದು ಮುಂದೆ ಬಂದು) ಭಾಳ ಯೋಗ್ಯ ಹೆಣ್ಮಗಳ್ಹಾಂಗ ಕಾಣ್ತಾಳೆ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ತುಂಭ ಒಳ್ಳೆ ಹೆಣ್ಮಗಳು. ಬಂದವರ ಸರಿ ಕೂಡೋಣ ಮಾತಾಡೋಣ.

ಹಣ: : (ಒಂದು ಮೇಜಿನ ಮೇಲೆ ಕುಳಿತು ಕನ್ನಡಕವನ್ನು ಹಾಕಿಕೊಳ್ಳುತ್ತ) ಬರ್‍ರೆಲಾ ಕೂಡ್ರಿ. (ರಘೂತ್ತಮರಾಯನು ಕೂಡುವನು.) ಏನ್ರೆಪಾ ಹಕೀಕತು? ಕಾಗದಪತ್ರ ತಂದೀರೋ ಹೆಂಗ ದಾಖಲ ಮಾಡಲಿಕ್ಕೆ ?

ರಘು : ನನಗೆ ನಿಮ್ಮ ಕೇಳೋಣ ?

ಹಣ : (ಕೋಪದಿಂದ) ನಿಮಗss ಮತ್ತ. ಇಲ್ಲದಿದ್ದರ ಏನು ಎದುರು ಗ್ವಾಡೀಗೆ ಕೇಳ್ಲಾ ?

ರಘು : (ವೇಗವಾಗಿ) ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ನಾ ಕೊಯತ್ತೂರು ಬಿಟ್ಟಟ್ಟು ಮೂರು ತಿಂಗ್ಳಾತು. ಕಾಂಚೀವರ ತಲೆ, ಸೇಲತಲೆ ಯಲ್ಲ ನನ್ನ ಬಂಧುಗಳಿರೋಣ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ, ನನ್ನ ಭಾವ ಮೈದುನ ಶಾಮ ಪಟ್ಟಣತ್ಲೆ ತಿರುವಳ್ಕೇಣೇಲಿ ಇರೋಣ. ಅವಗೆ ಎಲೆಟ್ರ ಆಫೀಸು ಕೆಲ್ಸ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ, ಡಿಯರ್ನೆಸ್ಸು ಅಲವನ್ಸು ಸೇರಿ ಹಕ್ಕೊಂಡು ಅವಗ ಎಪ್ಪತ್ನಾಲ್ಕು ರೂಪಾಯಿ ಸಂಬ್ಳ ಬರೋಣ.

ಹಣ : (ಬರೆಯಲು ಹವಣಿಸಿ) ಏ, ಏ ತುಸು ನಿಂದರ್‍ರೆಲಾ.

ರಘು : (ಚಟ್ಟನೆ ಕುರ್ಚಿಯಿಂದೆದ್ದು) ನಾನ ಕೂಡೋಣ ಅಂದ್ರೆ ತುಂಭ ಇಷ್ಟಿಲ್ಲ.

ಹಣ : ಎಲೇ ಇವ್ರಾ, ತುಸು ನಿಂದ್ರೂ ಅಂದ್ರ ಎದ್ದೇ ನಿಂತ್ರಲ್ಲ

ಇವರು ! ಕೂಡ್ರೆಲ, ಹಿಂಗ ಮೇಲು ಟ್ರೈನ್ ಓಡಸಬ್ಯಾಡ್ರೀ ಅಂದೆ.

ರಘು : (ಕೂಡುತ್ತ) ಇಂದು ನಾನು ಕಾಲೀಲೆ ಬಂದದ್ದು ಮೇಲು ಟ್ರೈನು.

ಹಣ : ಕಾಲೀಲೆ ಬಂದದ್ದು ಅಂದ್ರೇನು, ಯಾರರ ಕೈಲೆ ಬರ್ತಾರೋ ಹೆಂಗ? ಅದಿರ್ಲಿ, ತುಸು ಚಹ ಕುಡುದು ಹೇಳ್ರೆಲಾ ಎಲ್ಲ ಸುದ್ದೀನ. ಏ ಏನೇ –

ವೆ.ಲ : ಬಂದೆ ಕಣ್ರೀ (ಬರುವಳು.)

ಹಣ : ಅವ ಕ್ರಿಷ್ಟ್ಯಾ ಹೇಳು. ತುಸ ಚಹಾನಾರ ಮಾಡ್ಲಿಕ್ಕೆ.

ವೆ.ಲ : (ಬದಿಗೆ ಬಂದು) ಕೃಷ್ಣಾ, ಕೃಷ್ಣಾ.

ಮಾಣಿ : ಬಂದೆಮ್ಮಾ ಬಂದೆ.

ವೆ.ಲ : ಅದೇನು ಬಂದ್ಯೋ ನಾ ಬೇರೆ ಕಾಣೆ. ಏನೋ ನೀನಲ್ಲಿ ಮಾಡ್ತಾ ಇರೋದು?

ಮಾಣಿ : (ಪ್ರವೇಶಿಸಿ ಕೋಪದಿಂದ) ಕಡಲೆ ತಿಂತಿದ್ದು. ಎಂಥದು ಮಾರಾಯ್ರೆ, ನನಗೆ ಕೈ ನಾಲ್ಕು ಉಂಟಾ?

ವೆ.ಲ : ಕೈ ಅಲ್ವೋ ನಿನಗೆ ನಾಲ್ಕು, ಕಾಲು. ಬಂದವರೆದುರಿನಲ್ಲಿ ನಿನ್ನ ಕಂತೆ ಪುರಾಣ ಬಿಚ್ಚೋದು ಬೇಡ, ತಿಳೀಯತೇ? ಅವರಿಗೆರಡು ಲೋಟ ಟೀ ಅಂತೆ, ಬೇಗ ಮಾಡಿ ಕೊಡು.

ಮಾಣಿ : ಟೀ ಮಾಡು, ಟೀ ಮಾಡು. ಟೀ ಎಂಥದು ಮಾರಾಯ್ರೆ ಮಾಡೋದು? ಟೀ ಡಬ್ಬನಲ್ಲಿ ಉಂಟು ಎಂಥದು?

ವೆ.ಲ : ಟೀ ಇಲ್ವೇನು ಮನೇಲಿ?

ಮಾಣಿ : ಉಂಟಾ ಮತ್ತೆ? ಉಂಟು ಎಂಥದು ಬುರ್ನಾಸು.

ಹಣ : ಏ ಕ್ರಿಷ್ಟ್ಯಾ, ಏನು ಕೆತ್ತೆಬಜೇ ನಡಿಸೀದಲ್ಲೆ? ಈಗ ಯಾಕ ಬೇಕವು ಬುರ್ನಾಸು, ರಗ್ಗು–ಹಚಡ, ತಲಿದಿಂಡು ಯಲ್ಲಾ? ಹಾಸಗಿ ಹಾಸಲಿಕ್ಕೆ ಇನ್ನೂ ವ್ಯಾಳ್ಯ ಚಾರು ಘಂಟೇದ ಟೈಮು ಬಿದ್ದಿದೆ.

ಮಾಣಿ : ಇವರು ಎಂಥದು ಮಾರಾಯ್ರೆ ಹೇಳೋದು? ನನಗೆ ಬೇಕ ಇವರ ಮಾತು. ಪಿರಿ ಪಿರಿ ಜನ ಮಾರಾಯ್ರೆ ಕಾಪಿ ಪುಡಿ ಉಂಟು, ಡಬ್ಬನಲ್ಲಿ. ಕಾಪಿ ಮಾಡಿ ನಾ ಕೊಟ್ಟು ಬಿಡೋದು, ಪಂಚಾಯತಿ ಬೇಡ. (ಒಳಗೆ ಹೋಗುವನು.)

ಹಣ : (ಬರೆಯಲುದ್ಯುಕ್ತನಾಗಿ) ನಿಮ್ದೆಸರೇನ್ರೆಪಾ?

ರಘು : ಕೊಯತ್ತೂರು ರಹೋತ್ತರಾ ಅಂತ ಬರಿಯೋಣ ಸಾಂಪ್ರದಾಯ. ಕೊಯತ್ತೂರು ಅಂದ್ರೆ ಕೊಯತ್ತೂರು ಅಂತ ಹೆಸರಾಗೋಣ ಒಂದೇ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಕೊಯುತ್ತೂರಿನಲ್ಲಿ ಸಂಬಂಧಿಗಳು ಕೂಡ ಇಲ್ಲ. ಇವರೆಲ್ಲ ಕುಂಭಕೋಣ ತಲೆ, ಕಾಂಚೀ ವರತಲೆ, ಸೇಲತಲೇದಾ ಇರೋಣ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ನಾನು ಕೊಯತ್ತೂರು ಬಿಟ್ಟಟ್ಟು ತುಂಭ ದಿನ ಆಯ್ತು. ಅವ್ಳು ಮೂರು ತಿಂಗಳ ಕೊಳಂದು ಕೈಯಲ್ಲಿ ಕೊಟ್ಟಿಟು ಕಣ್ಮುಚ್ಚಿ ಕೈಲಾಸ ಹೊರಟಾಯ್ತು. ನನಗೀಗ ಈ ನಾಪತ್ಮೂಣು ಸಂವತ್ಸರದಾಗ ಕಲ್ಯಾಣ ಮಾಡಿ ಮತ್ತೊಬ್ಬಳೊಟ್ಟಿಗೆ ಏನು ಅಳೋದು ಅಂತ ಹೇಳಿ ನನ್ನ ಭಾವ ಮೈದುನ ಶಾಮಗೆ–ವಂಜೆ ಇಲ್ಲ ಪಿಂಜೆ ಅವಳು ನನ್ನ ಅಕ್ಕನ ಮಗಳಾಗೋದು. ಅವಳ ಗಂಡ ಶ್ಯಾಮು. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಅವ ಪಟ್ಟಣತಲೆ ತಿರುವಳ್ಕೇಣೀಲಿ ಮನಿ. ಎಲಿಟ್ರಿ ಆಫೀಸು ಕೆಲಸ. ಅವಗೆ ಎಪ್ಪತ್ನಾಲ್ಕು ರೂಪಾಯಿ

ಸಂಬ್ಳ ಬರೋದು, ಡಿಯರ್‌ನೆಸ್ ಅಲೆವೆನ್ಸು ಸೇರಿಹಾಕ್ಕಂಡು. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಆ ಕೊಳಂದಿಗೆ ಕಡವುಳ್ದಯಬೇಕು.

ಹಣ : ಏನ್ತಲಿ ಬರಕೊಳ್ರೆಪಾ ನೀವು ಹೀಂಗ ಮಾತು ಉಳ್ಳಿಸಿದರೆ ? ಈ ಒಂದು ಪುಟ ಬರಿಯೋ ಅಷ್ಟು ಹೇಳಿದ್ರೆಲ್ಲಾ, ಅದೆಲ್ಲ, ನಿಮ್ಮ ಹೆಸರನಃ? ಅದೆಲ್ಲ ಪುರಾಣ ಇರ್ಲಿ, ಹೆಸರೇನು ಹೆಸರು?

ರಘು: : ಅದಕ್ಕ ಹೆಸರಿಡೋಣ ಎಲ್ಲಿಂದ ? ಮೂರು ತಿಂಗಳು ಕೊಳಂದು (ದುಃಖದಿಂದ) ತಾಯಿ ಸತ್ತದ್ದು, ಅದಕಾಹ ಶಾಮಗೆ ಕೊಟ್ಟಿಟ್ಟು ಬಂದಿಟೆ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ–

ಹಣ : ಯಾಕ ಹೇಳ್ಳಿಕ್ಕೆ ಬಂತು ಅದನಾರ ಹೇಳೀದರ ಸೈ ಅಂದೇನು. ಒಳ್ಳೇ ರಬಟೀನ ಹಚ್ಚಿಟ್ಟ ಮಹರಾಯ. ಹೆಸರು ಕೇಳಿದರೆ ನಾಲ್ವತ್ತೈದು ಸಾಲಿನ ಒಂದು ಪುಟ ಆಗೋವಷ್ಟು ಹೇಳ್ತಾನೆ. ನಿಮ್ಮ ಹೆಸರೇನು ಹೆಸರು ?

ರಘು : ನೀವು ಕೇಳೋಣ ನನ್ನ ಹೆಸರಾ?

ಹಣ : ಮತ್ಯಾರದು, ನನ್ನ ಹೆಸರು ನಿಮ್ಮನ್ನ ಕೇಳ್ಬೇನು? ಹೂ, ನಿಮ್ಮ ಹೆಸರೇ !

ರಘು : ಕೊಯತ್ತೂರು ರಹೋತ್ತರಾ

ಹಣ : ಯಾವ ತೂರು ಅಂದ್ರಿ?

ರಘು : ಕೊಯ್ತೂರು, ಕೊಯ್‌ತೂರು, ದಕ್ಷಿಣ ದೇಶದಲ್ಲಿ ಅದಲ್ಲಾ.

ಹಣ : ದಕ್ಷಿಣ ದೇಶ ಅಂತ ಬ್ಯಾರೆ ಹೇಳ್ಬೇಕೇನು ? ಮಾತಿನ ಸ್ಪೀಡ್ ನೋಡಿದರಃ ಗೊತ್ತಾಗುವದಿಲ್ಲ ? ಅದಾವ ತೂರು ಪಸಂದು

ರಘು : ಕೊಯ್ತೂರು ಗೊತ್ತಿಲ್ವಾ, ಸೇಲತಕ ಸಮೀಪ.

ಹಣ : ಸೇಲ್ತಕ ! ಎಲ್ಲೀ ಹೆಸರುಗಳು ಹೇಳ್ತಾನೀ ಮಾರ್‍ಾಯ? ಹಿಂದುಸ್ತಾನದೊಳಗಾರ ಅವೋ ಇಲ್ಲೋ? ಇವ ಏನಾರ ವ್ಹಾರ್ ಪ್ರಿಜನ್ಸ್ರ್ ಎಂಕ್ಸೆಂಜ್ದ್ ದೊಳಗೇನಾರ ಪರಪಾಟಾಗಿ ಮಿಸ್‌ಸೆಂಟ್ ಆಗಿ ಬಂದಾನೋ ಹೆಂಗ? ಬರೋಬ್ಬರ್ ಹೇಳಬಾರದೆ, ಬರೇ ತೂರು ಅಂಬೋದೊಂದು ತಿಳಿತು.

ರಘು : ಕೊಯತ್ತೂರು, (ಸಾವಕಾಶವಾಗಿ) ಕ್ವ–ಯ–ತ್ತೂ–ರು.

ಹಣ : (ಒಮ್ಮೆಲೆ ಹಸನ್ಮುಖಿಯಾಗಿ) ಕೊಯಂಬತ್ತೂರಾ ? ಅಯ್ಯೋ ಮಾರ್‍ಾಯ, ಕೊಯಂಬತ್ತೂರು ಅಂತ ಅನಬಾರದಾಗಿತ್ತೇ? ಅದೇನು ಕೊಯ್ ಅಂತೀದಿ, ತೂರು ಅಂತೀದಿ? ಸರಿ, ಕೊಯಂಬತ್ತೂರು. ಅಂತು ತಿಳಿತು, ಹೆಸರೇನ್ರೆಪಾ?

ರಘು : ರಹೋತ್ತಮರಾ.

ಹಣ : ರಹೋತ್ತರಾ ! ಇದೇನು ಹೆಸರ್ರೆಪಾ ? ಛಲೋ ಹೇಳ್ರೆಲಾ ಅದೇನು ಹಂಗ್ಯಾಕ ಮಾತು ಗಂಟ್ಲದಾಗ ನುಂಗ್ಲಿಕ್ಕೆ ಹತ್ತಿರಿ?

ರಘು : (ಸಾವಕಾಶವಾಗಿ) ರಹೋತ್ತಮರಾ.

ಹಣ : ರಘೋತ್ತಮರಾವೇ ! (ನಿಟ್ಟುಸುರು ಬಿಟ್ಟು) ಸಾಕು ಬಿಡ್ರೆಪಾ, ಬದಿಕಿದೆ. ಕೊಯಂಬತ್ತೂರು ರಘೋತ್ತಮರಾವ. (ಬರೆದು) ತಂದೀ ಹೆಸರೂ ?

ರಘು : ಜಗ್ರಬಾಣಿರಾ.

ಹಣ : ಜಗ್ರಬಾಣಿರಾ ! ಅಂದ್ರೆ ?

ರಘು : ಜಗ್ರಬಾಣಿರಾ. ಜಗ್ರಬಾಣಿ ಅನ್ನೋದಿಲ್ಲವಾ ಆಂಡವಗೆ?

ಹಣ : ಮತ್ತೇನೊ ಮುರಾಡ ಹಾಕಿದ್ನಲ್ಲಪಾ ಇವ. ಇದೇನು ಹೆಸರು ತಿಳಿಯ್ದಂಗ ಹೇಳ್ರೆಲಾ.

ರಘು : ಜಗ್ರಬಾಣಿರಾ.

ಹಣ : ಚಕ್ರಪಾಣಿರಾವೆ? (ಬರೆದು) ಹೂ, ಏನು ಖಟ್ಲೆ ಅದs? ಅದರ ಮಾಹಿತಿ ಮಾಡಿಕೊಡ್ರೆಲಾ.

ರಘು : ಏನು ಮಾಡಿಕೊಡೋಣ ? ನನ್ನ ಮಾಡಿಕೊಡೋಣ ಅಂತ ನೀವು ಅಂಬೋಣ.

ರಘು : ಜಗ್ರಬಾಣಿರಾ. ಜಗ್ರಬಾಣಿ ಅನ್ನೋದಿಲ್ಲವಾ ಆಂಡವಗೆ?

ಹಣ : ಅಂದ್ರೆ ಏನ ಹಕೀಕತು? ನೀವು ಬಂದದ್ದು ಏನು ವಿಷಯ ಅಂದೆ.

ರಘು : ಫಂಡರಪುರಕ್ಕೆ ಹೋಯಿಟ್ಟಟು ಕಾಲೀಲೆ ಟ್ರೈನ್ ತಾನೆ ಬಂದೆ. ಅಲ್ಲೆ ಇಲ್ಲೆ ಹೋಯಿಟ್ಟಟು ಕಡಸೀಳೆ ಇಲ್ಲೆ ಬಂದಿಟೆ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ಮೂರು ದಿವಸ ಆತು ಕೂಳುಂಡು. ಅಲ್ಲಿ ಒಬ್ಬ ಮಾರಾಯ ದಕ್ಷಿಣಾದಿ ಬ್ರಾಹ್ಮಣ ಬಂದಿದ್ದ. ಅವಂದಾ ಒಂದು ಅನ್ನ, ಪೊಡಲಂಗಾಯ ಕೂಟು ಮಾಡಿ ಹಾಯಿಟಿಟ. ಇದು ಈಗ ಯಾಕೆ ಹೇಳೋಕೆ ಬಂತಂತಂದ್ರೆ ನನ್ನ ಹಣಯೆಲ್ಲ ಸಂಬಂಧಿಗಳ ಹೆಣಕ್ಕೆ ಹಾಯಿಟ್ಟಟು ಬಂದಿಟೆ. ಇರೋದ್ರೊಳಗೆ ಅವ ಶಾಮನೆ ಕೊಂಚ ತೇವಲೆ, ಅವ ಕೂಡ ಹಣ ಎಂದರೆ ಪ್ರಾಣ ಬಿಡೋವ. ಕಾಲಾಣೆ ಕೊತ್ತೋರಂಗ ಅಂತ ಕಣಕ ಬರಡಿಡ್ತಾನವ.

ಹಣ : ನೀವು ಇಷ್ಟೋತ್ತು ಹೇಳಿದ್ದು ನನಗ ಅಡ್ಡ ಗ್ವಾದಿ ನೋಡ್ರೆಪ. ಒಂದಕ್ಷರದ ಮಜಕೂರ ತಿಳಿದಿದ್ರೆ ನೀವಿಟ್ಟ ಆಣಿ. ನಾನು ಬರಕೋಬೇಕು. ಒಂದೊಂದೇ ವಾಕ್ಯ ಸಾವಕಾಶ ಹೇಳ್ರೆಲಾ.

ರಘು : ಫಂಡರಪುರಕ್ಕೆ ಹೋಯಿಟ್ಟಟು ಕಾಲೀಲೆ ಟ್ರೈನು ತಾನೆ ಬಂದೆ.

ಹಣ : ಏನು ಫಂಡರಪುರಕ್ಕೆ ಹೋಗ್ತೀರಾ, ಹೋಗಿ.

ಮಾಣಿ : (ಕೈಯಲ್ಲೆರಡು ಕಪ್ಪು ಸಾಸರಿನೊಂದಿಗೆ ಪ್ರವೇಶಿಸಿ) ಕಾಪಿ, ಕಾಪಿ ತಂದಾಯ್ತು ಮಾರಾಯ್ರೆ ಕಾಪಿ. ಮತ್ತೆ ಬಿಸಿ ಹೋಗಲಿಕ್ಕೆ ಸಾಕು.

ಹಣ : ಹೂ, ತೊಗೊಂಡು ಬಾರಲ. ಇಲ್ಲಿಡು ಮೇಜಿನ ಮ್ಯಾಲೆ. (ಮಾಣಿ ಇಟ್ಟು ನಿಲ್ಲುವನು) ಹೂ ನಡಿ, ಮತ್ಯಾಕ ನಿಂತಿ ಬಲಿಚಕವರ್ತಿ ಮುಂದ ವಾಮನ ನಿಂತ್ಹಂಗ? ಒಳ್ಳೆ ಮಾಣಿ ಬಂದಿವ, ಆಷಾಢಭೂತಿ ಅಂಥವ. ಹೂ ತೊಗೊಳ್ರೆಲ್ಲ.

(ರಘೂತ್ತಮರಾಯನು ತಕ್ಷಣ ತೆಗೆದುಕೊಂಡು ಎಲ್ಲವನ್ನೂ ಗಟಗಟ ಮೇಲಿನಿಂದ ಎತ್ತಿ ಕುಡಿದು ಕೆಳಗಿಡುವನು.)

ಎಲಾ ಇವನ, ಚಾಚಾ ಅನುಕೋತ ಕಾಫಿ ಕುಡುಸ್ತಾಳಲ್ಲ, ಈ ಮೈಸೂರು ಹುಡುಗಿ ಮನಿ ಸೇರಿ. ಏನೋ ಕ್ರಿಷ್ಟ್ಯಾ, ಕಾಫ್ಯಾರ ನೆಟಗದ?

ಮಾಣಿ : (ಎರಡನೇ ಬೆರಳನ್ನು ಮೇಲಕ್ಕೆ ತೋರಿಸುತ್ತ) ನೆಟ್ಟಗಿರೋದು ಎಂಥದು ಮಾರಾಯ್ರೆ, ಅದು ಏನು ತೆಂಗಿನ ಮರವಾ?

ಹಣ : ತಲೀ ಹರಟೆ ಮಗ (ಸ್ವಲ್ಪ ಕುಡಿದು) ಯಾಕ ಬಿಟ್ಟಾನಿವ ಹುಟ್ಟ ಬುದ್ಧೀನಾ? ಅವ ಗೌಳೀ ನೀರಿಗೆ ಹಾಲು ಬೆರಸಿ ಕೊಟ್ರೆ, ಇವ ಅದನ್ನ ಕುಡುದು, ಅದಕ್ಕ ನೀರು ಬೆರಸಿ ಕಾಫಿ ಮಾಡಿ, ಅದನ್ನ ಕುಡುದು, ಅದಕ್ಕ ನೀರು ಬೆರಿಸಿ ಇವ ತಂದಾನ. ಇದು ಕೂಡ ಆರಿ ಅಂಗಾರ ಆಗೆದಲ್ಲೊ. ಏ ಕ್ರಿಷ್ಟ್ಯಾ, ಅಲ್ಲೋ ಕಾಫಿ ಹೆಂಗಾರ ಇರ್ಲಿ ಗರಮ್ ಯಾಕಿಲ್ಲೊ ಗರಮು ? ಹಂಗ್ಯಾಕ ಮಿಕಿ ಮಿಕಿ ಮಾರಿ ನೋಡ್ತೀದಿ, ಗರಮ್ಯಾಕಿಲ್ಲ ಅಂದೆ.

ಮಾಣಿ : ಆ ಜನ ಯಾರು ಮಾರಾಯ್ರೆ ? ಗೌರಮ್ಮ ಎಂದು

ಹೇಳಿ ಇಲ್ಲಿ ಜನ ಉಂಟಾ?

ವೆ.ಲ : (ಪ್ರವೇಶಿಸಿ) ಯಾವ ಗೌರಮ್ಮ ನೀವನ್ನೋದು?

ರಘು : ಗೌರಮ್ಮ ಎಲ್ಲೀ ಅಂತ ಅವರ ಕೇಳೋಣ.

ವೆ.ಲ : ಅವಳ್ಯಾರು ಹೇಳಕೂಡ್ದೇ?

ಹಣ : ನನ ಖರ್ಮರೆಪಾ. ಗೌರಮ್ಮ ಅಂತ ಯಾವ ಅಂದ್ನೆ? ಕಾಫಿ ಗರಮ್ ಇಲ್ಲ ಅಂದೆ, ಗರಮ್ ಗರಮ್.

ವೆ.ಲ : ಏನು ಹಾಗ್ತಾನೆ ಅಂದ್ರೆ ?

ಹಣ : ಇನ್ನ ಹ್ಯಾಂಗ್ರೆಪಾ ಹೇಳೋದು ಇವರಿಗೆ ? ಚಹಾ ಭಾಳ ಹಂಗಿದ್ರೆ ದಸ್ತ್ಯಾಗ ವಾಟೀ ಹಿಡಕೊಂಡು ಕುಡಿತಾರಲ್ಲೇ.

ಮಾಣಿ : ದಸ್ತ್ಯಾ ! ವಾಟ್ಯಾ !! ಎಂಥದಯ್ಯ !!!

ಹಣ : ಸೈ ಸೈ. ದಸ್ತಿ ಅಂದ್ರ ಗೊತ್ತಿಲ್ಲನ? ದಸ್ತಿ ಅಂದ್ರೆ ಕಿಶಾದಾ ಗಿಡೋ ಅರಿವಿ.

ರಘು : ಹೌಂದು, ಕಿಸೆ ಅಂತ ನಿಮ್ದೇಳೋಣ ನಮಗರ್ಥ ಆಗದು.

ಹಣ : ಹಾಳಾಗಿ ಹೋಗಲಿಬಿಡ್ರಿ. ಇನ್ನ ನಿಮಗ ಕಿಸೆ ಅಂದ್ರ ಅರ್ಥ ಹೇಳಿ, ದಸ್ತಿ ಅಂದ್ರೆ ಅರ್ಥ ಹೇಳಿ, ಗರಮು ಅಂಬೋದರ ಅರ್ಥ ಮಾಡಿ ಕೋಡೋ ಗರಜು ಬಿದ್ದಿಲ್ಲ ನನಗೆ. ಅದೆಲ್ಲ ಅನ್ನೋದs ಬಿಟ್ಟು ಗಪ್ಚೊಪ್ ಥಂಣನ ಕಾಫೀನ ಕುಡಿದಿದ್ರೆ ಛಲೋ ಆಗ್ತಿತ್ತು.

ವೆ.ಲ : ಅಯ್ಯೊ, ಬಿಸಿ ಇಲ್ಲ ಅನ್ನೊದಕ್ಕೆ ಬಂದ ಸಾವೇ ಇದು?

ರಘು : ಸೋಡಾ ಇಲ್ಲ ಅನ್ನೋ ಅಭಿಪ್ರಾಯ.

ಹಣ : ಹೂ, ಅದಿರ್ಲಿ. ನಿಮ್ದೇನ್ರೆಪಾ ಕೆಲಸ? ಏನು ಮಾಡ್ತಾನ ಅಂದ್ರಿ ನಿಮ್ಮ ಭಾವ ಮೈದುನ?

ರಘು : ಯಾರು ನೀವಂಬೋಣ ಶ್ಯಾಮನೇ? ಅವ ಎಲೆಟರ ಆಫೀಸು ಕೆಲಸ.

ಹಣ : ಹೆಲೆಕ್ಟ್ರಿಕ್ ಹಾಫೀಜೇ, ತಡಿರಿ (ಬರೆಯುವನು) ಶ್ಯಾಮರಾವ, ಹೆಲೆಕ್ಟ್ರಿಕ್ ಹಾಫೀಜ. ಏನು ಕೆಲ್ಸರೆಪಾ ಅಲ್ಲೆ? ಅಂದ್ರೆ ಅವ ಏನು ಕಾರಕೂನ್ನೇ ಅಥವಾ ವ್ಹಯರ್‌ಮನ್ನೇ, ಏನಿದ್ದಾನವ?

ರಘು : ಆಫೀಸಿನಿಂದ ಹೆಣಬೀಳೋ ಹಾಂಗ ಕಾಗದಗಳು ತರೋಣ ಮನೆಯೊಳಗ್ಹೂಡ ಬಡೆಯೋಣ. ಅದೇನು ಕೆಲ್ಸನೋ ಆಂಡವನೇ ಬಲ್ಲ.

ಹಣ : ಸರೆ, ಹಂಗಾದ್ರೆ ಕಾರಕೂನ ಅಂಥಾಂಗಾತಲ್ಲ. ಏನ್ರಪಾ ನಿಧಾನ ಹೇಳ್ರಿ. ಏನು ಅವನ ಮ್ಯಾಲೆ ನಿಮ್ಮ ಕೇಸು? ಅದು ಇಲ್ಲೆಂಗ ಚಾಲೂ ಆಗೂದದ?

ರಘು : ಧಾವ ಕೇಸು?

ಹಣ : ಏನು ಹಂಗಂದ್ರ? ಧಾವ ಕೇಸೂ ಅಂದ್ರ ! ಅದರ ಬಗ್ಗೆ ನಿಮ್ಕೇಸೂ ಅಂದೆ.

ರಘು : ನನ್ನ ಕೇಸೂ ! ನನ್ನ ಕೇಸು ಏನೂ ಇಲ್ವೆ ?

ಹಣ : (ಕೋಪದಿಂದ) ಏನೂ ಕೇಸಿಲ್ಲೇ? ಮತ್ತೇನು ಬರೇ ತ್ರಾಸ ಕೊಡ್ಲಿಕ್ಕೆ ಬಂದದ್ದೇನು ಹಂಗಾರ?

ರಘು : ತ್ರಾಸು ನಾನ್ಹೆಂಗ ತರೋಣ? ಅದು ಅರ್ಜುನಾ ಸಾರಿ ಕಡಿ ಇರೋಣ.

ಹಣ : ಯಲಾ ಇವನ, ಮತ್ತೆದಕ್ಕ ಬಂದಿ ಅದನಾರ ಹೇಳಲಾ?

ರಘು: : ಮೂರು ದಿವಸಾತು ಕೂಳುಂಡು...

ಹಣ : (ಕೋಪಾವೇಶದಿಂದ) ಅದಕ ಏನಾರ ಅನ್ನದೇನು ಅಂತ ಬಂದೇನು?

ಮಾಣಿ : (ಮುಂದೆ ಬಂದು) ಫಾಡ್ಜ ಆತು. ನಾ ಹೇಳಿದ್ರೆ ಈ ಜನ ಕೇಳೋದು ಉಂಟಾ? ಅವ ಕಕ್ಷಿದಾರ ಅಲ್ಲ ಅಂತ ನಾನು ಅವನ ಮುಖ ನೋಡಿ ಹೇಳಿದ್ದು. ರುಂಬಾಲ ಬೇಡವಾ? ಅವನಿಗೆಂಥದು ಮಾರಾಯ್ರೆ ಪುಕ್ಕಟ ಕಾಫಿ ಕುಡದಾಯ್ತು.

ಹಣ : ಆತು ಬಿಡ್ರಿ, ಛಲೋನ ಆತು. ಏಕೀಕರಣ ಪರಿಷತ್ತಿಗೆ ಒಂದು ಕನ್ನಡದ ಹೊಸ ಮಾದರೀನರ ಒಯ್ದುಹುದು. ಇಲ್ಲೆ ಇರ್ರೆಲಾ ನಾಳೆ ಹೈದರಾಬಾದಿಗೆ ಹೋಗೂದದ, ನಿಮ್ಮನ್ನೂ ಅಲ್ಲಿಗೇ ಒಯ್ತೀನಿ.

[ಮೊದಲ ದೃಶ್ಯ ಮುಗಿಯಿತು]

*(ಮೂಲ : ರೇಡಿಯೋ ನಾಟಕಗಳು)*

* * *

# ಕನ್ನಡ ಸಂವರ್ಧನೆ

**–ಡಾ| ಡಿ.ಆರ್. ನಾಗರಾಜ್**

ಭಾಷೆಯೊಂದನ್ನು, ಭಾಷಿಕ ಜನಾಂಗವೊಂದನ್ನು ಬಲಿಷ್ಠವಾಗಿಸುವ ಕ್ರಮಗಳು ಹೇಗೆ ಎಂಬ ಪ್ರಶ್ನೆ ೨೦ನೇ ಶತಮಾನದ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಜಗತ್ತಿನ ಎಲ್ಲ ಭಾಗಗಳ ಭಾಷಿಕ ಕುಲಗಳು ಈ ಬಗೆಗೆ ತಲೆ ಕೆಡಿಸಿಕೊಂಡು ಒದ್ದಾಡುತ್ತಿವೆ. ಯೂರೋಪಿನಲ್ಲಿ ಕೂಡಾ ಸ್ವೀಡಿಷ್, ಡೇನಿಷ್ ಕುಲಗಳಿಗೆ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದುನಿಂತಿದೆ. ಇಂಗ್ಲಿಷ್, ಫ್ರೆಂಚ್, ಜರ್ಮನ್ ಮುಂತಾದವರ ನಡುವೆ ತಾವು ಸಾಂಸ್ಕೃತಿಕವಾಗಿ ಕುಗ್ಗಿ ಹೋಗುತ್ತಿದ್ದೇವೆ ಎಂಬ ಭಯ ಆ ಭಾಷಿಕ ಕುಲಗಳಿಗೆ, ಇಂಗ್ಲಿಷ್, ಹಿಂದಿಗಳ ಎದುರಿಗೆ ಕನ್ನಡಿಗರದೂ ಇದೇ ರೀತಿಯ ಭಯ.

ಭಾಷೆಯೊಂದು ಬಲಿಷ್ಠವಾಗುವುದು ಆ ಭಾಷಿಕ ಜನಾಂಗ ರಾಜಕೀಯವಾಗಿ ಬಲವಾದಾಗ ಎಂಬ ಉತ್ತರ ಸರಳವಾದದ್ದು, ಆದರೆ ತುಂಬ ಮುಖ್ಯವಾದದ್ದು, ರಾಜಕೀಯವಾಗಿ ಪ್ರಬಲವಾಗುವುದು ಎಂಬ ಆಸೆ ತಾರ್ಕಿಕವಾಗಿ ಕೊನೆಯಾಗುವುದು ಆ ಭಾಷಿಕಕುಲ ಪ್ರತ್ಯೇಕ ರಾಷ್ಟ್ರೀಯ ಪ್ರಭುತ್ವವಾದಾಗ. ಭಾಷಿಕ ಕುಲಗಳು ರಾಷ್ಟ್ರೀಯ ಪ್ರಭುತ್ವವಾಗಲು ಪ್ರಬಲ ಅಭ್ಯರ್ಥಿಗಳು, ರಾಷ್ಟ್ರೀಯ ಪ್ರಭುತ್ವವಾದಾಗ ಆ ಭಾಷಿಕ ಕುಲದ ಸಾಹಿತ್ಯಕ್ಕೆ, ಸಾಂಸ್ಕೃತಿಕ ಸಾಧನೆಗಳಿಗೆ ಒಂದು ಹೊಸ ರೀತಿಯ ಪ್ರಾಮುಖ್ಯತೆ ಬರುತ್ತದೆ. ಹಾಗೆ ನೋಡಿದರೆ, ಕಳೆದ ೧೫೦ ವರ್ಷಗಳಲ್ಲಿ ರಾಷ್ಟ್ರೀಯ ಕುಲಗಳು ಹುಟ್ಟಿದ್ದೇ ಸಾಹಿತ್ಯ ಪರಂಪರೆಗಳ ಅಧ್ಯಯನದಿಂದ. ಪ್ರತಿಯೊಂದು ದೊಡ್ಡ ಸಾಹಿತ್ಯ ಪರಂಪರೆಯ ಗರ್ಭದಲ್ಲೂ ಪ್ರತ್ಯೇಕ ರಾಷ್ಟ್ರವೊಂದರ ಭ್ರೂಣ ಇರುತ್ತದೆ, ಸಾಹಿತ್ಯ ಪರಂಪರೆಯೊಂದರ ಉಗಮ ಮತ್ತು ಬೆಳವಣಿಗೆಯನ್ನು ಸಂಬೋಧಿಸುವ ವಿದ್ವಾಂಸನಿಗೆ ಒಂದು ಬಗೆಯ ರಾಷ್ಟ್ರೀಯ

ರೋಮಾಂಚನ ಸಹಜವಾಗಿಯೇ ಉಂಟಾಗುತ್ತದೆ.

ಭಾಷಿಕ ಜನಾಂಗವೊಂದು ಬಲಿಷ್ಠವಾಗಬೇಕಾದರೆ ರಾಜಕೀಯ ಶಕ್ತಿ ಸಂವರ್ಧನೆ ಅನಿವಾರ್ಯವೇ ಎಂಬ ಪ್ರಶ್ನೆಗೆ ಉತ್ತರ ಕೊಡದೆ ಮುಂದೆ ಹೋಗುವುದು ತುಂಬ ಕಷ್ಟ. ಈ ಬಗೆಯ ಹೋಲಿಕೆಗೆ ಅನೇಕ ತೌಲನಿಕ ಮಾದರಿಗಳು ಸಿಗುತ್ತವೆ. ಜರ್ಮನಿಯ ಮಹತ್ವದ ದಾರ್ಶನಿಕ ನೀಷೆಯ ಕೆಲ ವಿಚಾರಗಳು ಇಲ್ಲಿ ನೆನಪಾಗುತ್ತಿವೆ. ಆತ ತನ್ನ 'ಟ್ವೈಲೈಟ್ ಆಫ್ ದಿ ಪಿಡಲ್ಸ್' ಎಂಬ ಕೃತಿಯಲ್ಲಿ ಬಗೆಗೆ ಚರ್ಚಿಸುತ್ತಾನೆ. 'ಜರ್ಮನ್ ಜನಕ್ಕೆ ಏನು ಕೊರತೆ ಇದೆ' ಎಂಬ ತನ್ನ ಟಿಪ್ಪಣಿಗಳಲ್ಲಿ ಆತ ಹೇಳುವ ವಿಚಾರಗಳು ಕುತೂಹಲಕಾರಿಯಾಗಿವೆ. ನೀಷೆಯ ಪ್ರಕಾರ ರಾಜಕೀಯ, ಅಧಿಕಾರ, ಆರ್ಥಿಕತೆ, ವಿಶ್ವವ್ಯಾಪಾರ, ಸೈನ್ಯ, ಪಾರ್ಲಿಮೆಂಟು ಇತ್ಯಾದಿಗಳ ದಿಕ್ಕಿನಲ್ಲಿ ಏಕಾಗ್ರತೆಯಿಂದ ಶಕ್ತಿ ಹಿಡಿಸಿದಷ್ಟು ಉಳಿದ ಕಡೆಗೆ ಅಷ್ಟರಮಟ್ಟಿಗೆ ಶಕ್ತಿಯ ಕೊರತೆ ಉಂಟಾಗುತ್ತದೆ. ಅಂದರೆ, ಸಾಂಸ್ಕೃತಿಕವಾಗಿ ಅಷ್ಟರಮಟ್ಟಿಗೆ ಒಂದು ಸಮಾಜ ಬಡವಾಗುತ್ತದೆ. ಪ್ರಭುತ್ವ ಮತ್ತು ಸಂಸ್ಕೃತಿಗಳೆರಡೂ ಒಟ್ಟಿಗೆ ಹೋಗಲಾರವು ಎನ್ನುವುದು ಅವನ ವಾದ. ಸರ್ಕಾರ ಮತ್ತು ಸಂಸ್ಕೃತಿಗಳ ಸಂಬಂಧವೂ ಹಾಗೆಯೇ. ಒಂದು ಇನ್ನೊಂದನ್ನು ಮುಕ್ಕಿ ಜೀವಿಸುತ್ತದೆ. ಪ್ರಭುತ್ವ ಬಲಿಷ್ಠವಾದರೆ ಸಂಸ್ಕೃತಿ ಸೊರಗುತ್ತದೆ. ಜರ್ಮನ್ ರಾಜಕೀಯವಾಗಿ ದೊಡ್ಡ ಶಕ್ತಿ ಆಗಿ ಬೆಳೆದ ಕಾಲದಲ್ಲೇ ಅದರ ಸಂಸ್ಕೃತಿ ಶಿಥಿಲವಾಯಿತು ಎನ್ನುವುದು ನೀಷೆಯ ವಾದ. ಭಾಷಿಕಕುಲವೊಂದು ರಾಜಕೀಯವಾಗಿ ಏಕಾಗ್ರತೆಯಿಂದ ಶಕ್ತಿಶಾಲಿಯಾಗಲು ಪ್ರಯತ್ನಿಸಿದ ಹಾಗೆಲ್ಲ ಅದರ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ ಎಂಬ ನೀಷೆಯ ವಿಚಾರ ಕುತೂಹಲಕಾರಿ. ಆದರೆ, ಪೂರ್ಣವಾಗಿ ಅದನ್ನು ಒಪ್ಪುವುದು ಕಷ್ಟ.

ಅದರಲ್ಲೂ ಸಮಕಾಲೀನ ಕರ್ನಾಟಕದ ಸನ್ನಿವೇಶದಲ್ಲಿ ಈ ಬಗೆಯ ವಿಚಾರಕ್ಕೆ ಮನ್ನಣೆ ಸಿಗುವ ವಾತಾವರಣವೂ ಇಲ್ಲ. ಕರ್ನಾಟಕದ ಬಲಸಂವರ್ಧನೆ ಎಂದರೆ ಕನ್ನಡಿಗರ ರಾಜಕೀಯಾಧಿಕಾರದ ಸಂವರ್ಧನೆ, ಆರ್ಥಿಕತೆಯ ಸಂವರ್ಧನೆ – ಹೀಗೇ ಪಟ್ಟಿ ಬೆಳೆಸುತ್ತ ಹೋಗಬಹುದು. ಆದರೆ, ನೀಷೆಯಷ್ಟು ಅತಿರೇಕದ ನಿಲುವಿಗೆ ನಾವು

ಹೋಗಬೇಕಿಲ್ಲವಾದರೂ ನಮ್ಮ ರಾಜಕೀಯ ಶಕ್ತಿ ಸಂವರ್ಧನೆಯ ಕೋಲಾಹಲದಲ್ಲಿ ಸಾಂಸ್ಕೃತಿಕ ಪ್ರತಿಭೆ ಮೊಂಡಾಗಿದೆ ಎಂಬ ಮಾತು ನಿಜ. ಆದರೆ, ಸಮಕಾಲೀನ ಜಾಗತಿಕ ರಾಜಕಾರಣದ ವ್ಯಂಗ್ಯ ಎಂದರೆ, ರಾಜಕೀಯವಾಗಿ ಕರ್ನಾಟಕ ಪ್ರಬಲವಾಗದಿದ್ದರೆ ನಮ್ಮ ಸಂಸ್ಕೃತಿ ಎದ್ದು ಕಾಣುವುದೂ ಇಲ್ಲ.

## ಮಂಡಿಸುವುದು ಹೇಗೆ?

ಈ ಟಿಪ್ಪಣಿಯಲ್ಲಿ ನನ್ನ ಮುಖ್ಯ ಗಮನ ಇರುವುದು ಕರ್ನಾಟಕವನ್ನು, ಕನ್ನಡ ಸಂಸ್ಕೃತಿಯನ್ನು ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಆಕರ್ಷಕವಾಗಿ ಹೊರಜಗತ್ತಿಗೆ ಮಂಡಿಸುವುದು ಹೇಗೆ ಎಂಬ ಬಗ್ಗೆ. ವಸಾಹತೋತ್ತರ ಸಾಂಸ್ಕೃತಿಕ ಸನ್ನಿವೇಶದಲ್ಲಿ ಈ ಬಗೆಯ ಶೈಕ್ಷಣಿಕ ಪ್ರಶ್ನೆಗೂ ಪ್ರಖರವಾದ ರಾಜಕೀಯ ಆಯಾಮ ಇರುತ್ತದೆ. ಹೊರ ಜಗತ್ತಿಗೆ ಆಕರ್ಷಕವಾಗುವಂತೆ ಕರ್ನಾಟಕವನ್ನು ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಮಂಡಿಸುವದರ ಯೋಜನೆಗೆ ಅನೇಕ ಬಗೆಯ ಅಪಾಯಗಳು ಕಾಡುತ್ತವೆ. ನವವಸಾಹತೀಕರಣದ ಎಲ್ಲ ಸಮಸ್ಯೆಗಳು ಈ ಶೈಕ್ಷಣಿಕ ಯೋಜನೆಗಳಲ್ಲೂ ತಲೆ ಹಾಕುತ್ತವೆ. ಈ ವೈರುಧ್ಯವನ್ನು ದಾಟಲು ಇರುವ ಒಂದು ಮಾರ್ಗ ಎಂದರೆ, ಕನ್ನಡದ ಬೌದ್ಧಿಕ ಪರಂಪರೆಗಳು ತಾವು ತೀವ್ರವಾಗಿ ಅಂತರ್ಮುಖಿಯಾಗಿ ಬೆಳೆಯುತ್ತ ಹೋಗುವುದು, ಕನ್ನಡಕುಲ ತೀವ್ರವಾಗಿ ಅಂತರ್ಮುಖಿಯಾದಷ್ಟು ಅದರ ಶಕ್ತಿ ಸಂವರ್ಧಿಸುತ್ತದೆ. ನವವಸಾಹತೀಕರಣದಿಂದ ಪಾರಾಗಲು ಇದೊಂದು ಸಮರ್ಥ ದಾರಿ.

ಸಂಸ್ಕೃತಿಯೊಂದು ಹೊರಗಿನವರಿಗೆ ಆಕರ್ಷಕವಾಗಲು ತನ್ನನ್ನು ತಾನು ವಾಣಿಜ್ಯೀಕರಿಸಿ ಕೊಳ್ಳುವುದು ಸುಲಭ. ಆದರೆ, ಅದು ರೋಗದ ಮಾರ್ಗ. ತನ್ನ ಕಲೆಗಳನ್ನೋ, ಜೀವನ ಕ್ರಮದ ಉತ್ಸವಗಳನ್ನೋ ವಾಣಿಜ್ಯೀಕರಿಸಿ ಅದನ್ನು ರಫ್ತು ಮಾಡಲು ಪ್ರಯತ್ನಿಸುವುದು ಅಗ್ಗದ ದಾರಿ. ಇಲ್ಲಿ ಮುಖ್ಯ ಸಮಸ್ಯೆ ಎಂದರೆ, ನಾಡಿನ ಆತ್ಮಗೌರವವನ್ನು ಉಳಿಸಿಕೊಳ್ಳುವುದು. ಕೇರಳ, ಕಾಶ್ಮೀರ, ಆದಿವಾಸಿ ಜನಾಂಗಗಳಲ್ಲಿ

ಈಗಾಗಲೇ ಈ ರೀತಿಯ ಸಾಂಸ್ಕೃತಿಕ ವಾಣಿಜ್ಯೀಕರಣದ ಅಪಾಯಗಳು ಎದ್ದು ಕಾಣುತ್ತಿವೆ. ಇದನ್ನು 'ಸಾಂಸ್ಕೃತಿಕ ಸರಕೀಕರಣದ ದಾರಿ' ಎಂದು ಕರೆಯಬಹುದು.

ಶೈಕ್ಷಣಿಕವಾಗಿ ಕೂಡಾ ಈ ರೀತಿಯ ಸರಕೀಕರಣ ತುಂಬ ಸುಲಭದ ದಾರಿ. ಇದನ್ನು ವಿವರಿಸುವುದಾದರೆ, ನಮ್ಮಲ್ಲಿ ಹೊರಗಿನವರಿಗೆ ವಿಕ್ಷಿಪ್ತವಾಗಿ, ವಿಕಟವಾಗಿ, ನಿಗೂಢವಾಗಿ, ರಂಜಕವಾಗಿ ಕಾಣುವ ಅನೇಕ ರೀತಿಯ ವಿದ್ಯಮಾನಗಳು, ಪ್ರಕ್ರಿಯಗಳು, ಪ್ರದೇಶಗಳು ಇವೆ. ಅವು ಶೈಕ್ಷಣಿಕ ಸಂಶೋಧನೆಗೆ ಕಚ್ಚಾ ಪದಾರ್ಥಗಳಾಗುತ್ತವೆ. ವಸಾಹತೀಕರಣದ ಮೂಲ ಲಕ್ಷಣ ಎಂದರೆ ನಮ್ಮಿಂದ ಕಚ್ಚಾ ಪದಾರ್ಥಗಳನ್ನು ತೆಗೆದುಕೊಂಡು, ಅವನ್ನೇ ಸಿದ್ಧಸರಕುಗಳನ್ನಾಗಿಸಿ, ಮತ್ತೆ ನಮಗೇ ಮಾರುವುದು. ಶೈಕ್ಷಣಿಕವಾಗಿ ಕೂಡಾ ಈ ವ್ಯಾಪಾರ ಕಳೆದ ನೂರು ವರ್ಷಗಳಿಂದ ನಡೆಯುತ್ತಿದೆ. ನಮ್ಮದು ಏನಿದ್ದರೂ ಮಾಹಿತಿ ಸಂಗ್ರಹದ ಕ್ಷೇತ್ರ, ಫೀಲ್ಡ್ ವರ್ಕ್‌ನ ಸ್ಥಳ. ಆದರೆ, ಸಿದ್ಧಾಂತಗಳು ಹೊರಗಿನವರದು. ಸಂಸ್ಕೃತಿಯೊಂದು ಚಾರಿತ್ರಿಕವಾಗಿ, ಸಮಕಾಲೀನವಾಗಿ ರೂಪಿಸಿಕೊಂಡಿರುವ ಆತ್ಮಜ್ಞಾನದ ಪರಂಪರೆಗಳಿಂದ ಮಾಹಿತಿಯನ್ನು ಬೇರ್ಪಡಿಸಿ ಮಾಡುವ ಸಂಶೋಧನೆ ಅದು. ಶೈಕ್ಷಣಿಕ ಸಂಶೋಧನೆಗೆ ಬರೆ ಕಚ್ಚಾ ಪದಾರ್ಥವಾಗುವ ಅವಮಾನಕಾರೀ ವ್ಯಾಪಾರವನ್ನು ಇಲ್ಲೇ ಒಲ್ಲೆ ಎಂದಾಗ ಮಾತ್ರ ಸಂಸ್ಕೃತಿಯೊಂದರ ಆತ್ಮಗೌರವ ವರ್ಧಿಸುತ್ತದೆ.

## ವಿಸಂಗತಿ

ಇದರರ್ಥ ಹೊರಜಗತ್ತಿನ ಜತೆಗೆ, ಹೊರಜಗತ್ತಿನ ಶೈಕ್ಷಣಿಕ, ಬೌದ್ಧಿಕ ಅಧಿಕಾರ ಕೇಂದ್ರಗಳ ಜತೆಗೆ ಸಂಬಂಧವೇ ಇರಕೂಡದು ಎಂದೇನಿಲ್ಲ. ಆಧುನಿಕ ಜಗತ್ತಿನ ಇನ್ನೊಂದು ವಿಸಂಗತಿ ಇದು. ಅಧಿಕಾರ ಕೇಂದ್ರಗಳ ಜತೆಗೆ ಅನುಸಂಧಾನ ಇರದಿದ್ದರೆ ನಮ್ಮ ದುರ್ಬಲ ಸ್ಥಿತಿಯಿಂದ ಪಾರಾಗುವುದು ಕೂಡಾ ಕಷ್ಟವೇ. ಪಶ್ಚಿಮದ ಅತ್ಯಂತ ಶಕ್ತಿಶಾಲೀ ಶೈಕ್ಷಣಿಕ, ಬೌದ್ಧಿಕ ಪರಂಪರೆ, ಪ್ರಕ್ರಿಯೆಗಳ ಜತೆಗೆ ಸೆಣಸಾಡುತ್ತಲೇ ಕನ್ನಡವು ತನ್ನ ಶಕ್ತಿ ಸಂವರ್ಧಿಸಿಕೊಳ್ಳಬೇಕಾಗಿದೆ. ಇದು ಅನುಕರಣದ

ಮಾದರಿಯಲ್ಲಿ ನಡೆದರೆ ಪ್ರಯೋಜನವಿಲ್ಲ. ಅನುಸಂಧಾನದ ಮಾರ್ಗದಲ್ಲಿ ಆಗಬೇಕಾಗಿದೆ. ಅನುಕರಣೆ ಮತ್ತು ಅನುಸಂಧಾನದ ಮಾರ್ಗಗಳ ನಡುವೆ ಇರುವ ವ್ಯತ್ಯಾಸದ ಬಗ್ಗೆ ಇಲ್ಲಿ ಹೆಚ್ಚು ಚರ್ಚಿಸುವ ಅಗತ್ಯವಿಲ್ಲ. ಕನ್ನಡ ಸಾಹಿತ್ಯ ಪರಂಪರೆ ಶತಮಾನಗಳಿಂದ ರೂಢಿಸಿಕೊಂಡು ಬಂದಿರುವ ವಿಧಾನ ಇದು. ಪಂಪ, ಕುಮಾರವ್ಯಾಸರು ವ್ಯಾಸರನ್ನು ಅನುಕರಿಸಲಿಲ್ಲ. ಪಂಪನ ಬಗ್ಗೆ ಕೆ.ವಿ. ಸುಬ್ಬಣ್ಣ ಬರೆಯುತ್ತಾ, ಪ್ರತಿಭಾತ್ಮಕ ಒಳನೋಟವೊಂದನ್ನು ನೀಡಿದರು: 'ಪಂಪನ ಕವಿತೆಯನ್ನು ಅನುಸಂಧಾನದ ಹೊಸ ಮಾರ್ಗ' ಎಂದರು. ಕುಮಾರವ್ಯಾಸ ಕೂಡಾ ಹಾಗೆಯೇ. ವಚನಕಾರರು ಕೂಡಾ ಹಾಗೆಯೇ. ಅವರು ಉಪನಿಷತ್ ಕ್ರಮಗಳನ್ನು ಅನುಸರಿಸಲಿಲ್ಲ. ಅವುಗಳ ಜತೆಯಲ್ಲಿ ತಮ್ಮ ವಿಶಿಷ್ಟ ಅನುಸಂಧಾನ ಮಾರ್ಗದಿಂದ ಸೆಣಸಿ ತಮ್ಮ ಸ್ವಂತಿಕೆ ಕಾಪಾಡಿಕೊಂಡರು.

ಸಮಕಾಲೀನ ಶೈಕ್ಷಣಿಕ ಹಾಗೂ ಬೌದ್ಧಿಕ ಕ್ಷೇತ್ರಗಳಲ್ಲಿ ಈಗ ಕನ್ನಡದ ಅನುಸಂಧಾನ ಮಾರ್ಗದ ಸ್ವರೂಪವೇನು ಎಂಬ ಪ್ರಶ್ನೆಗೆ ಒಂದೆರಡು ಸೂಚನಾರೂಪದ ಉತ್ತರಗಳನ್ನು ನೀಡಲು ಪ್ರಯತ್ನಿಸುತ್ತೇನೆ. ಪಶ್ಚಿಮದ ಅತ್ಯಂತ ಪ್ರಭಾವಶಾಲೀ ವೈಚಾರಿಕ ವಿಧಾನಗಳ ಜತೆಗೆ ದೇಶೀ ಚಿಂತನಾಕ್ರಮಗಳನ್ನು ಇಟ್ಟು ಮುಖಾಮುಖಿ ನಡೆಸಬೇಕಾಗಿದೆ. ಕನ್ನಡ ಸಂಸ್ಕೃತಿಯ ಆತ್ಮಜ್ಞಾನದ ಪರಂಪರೆಗಳನ್ನು ವಿಶಾಲ ಜಾಗತಿಕ ಸನ್ನಿವೇಶಗಳಲ್ಲಿದ್ದು ಅವುಗಳ ಸತ್ವವನ್ನು ವಿಸ್ತರಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಎರಡು ನಿರ್ದಿಷ್ಟ ಕ್ಷೇತ್ರಗಳು ನನಗೆ ಶೈಕ್ಷಣಿಕವಾಗಿ ಮುಖ್ಯ ಎನ್ನಿಸುತ್ತಿದೆ. ಒಂದು, ಕರ್ನಾಟಕದ ವಿಶಿಷ್ಟ ಪಠ್ಯಗಳು ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳು. ಎರಡು, ಕರ್ನಾಟಕದ ಸಮಕಾಲೀನ ಪ್ರಕ್ರಿಯೆಗಳು ಮತ್ತು ಜನರ ಪ್ರತಿಸ್ಪಂದನದ ಕ್ರಮಗಳು.

ಮೊದಲನೆಯ ವಿಶಿಷ್ಟ ಪಠ್ಯಗಳು ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳ ಪ್ರಶ್ನೆಯನ್ನೇ ಒಂದಿಷ್ಟು ವಿಸ್ತಾರವಾಗಿ ನೋಡಬಹುದು. ಪಶ್ಚಿಮದ ಸಮಕಾಲೀನ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಈಗ ಪ್ರಧಾನವಾಗಿರುವ ತಾತ್ತ್ವಿಕ ಸಮಸ್ಯೆ ಎಂದರೆ, ದೇಶೀ ಸಂಸ್ಕೃತಿಗಳು ತಮಗಿಂತ ದೊಡ್ಡದಾದ ಜಾಗತೀಕರಣದ ಶಕ್ತಿಗಳನ್ನು ಹೇಗೆ ಎದುರಿಸುತ್ತವೆ ಎಂಬುದು,

ಸರಳವಾಗಿ ಹೇಳುವುದಾದರೆ, ಆಧುನಿಕ ಪೂರ್ವ ಜಗತ್ತಿನ ಜಾಗತೀಕರಣದ ರೂಪಗಳ ಬಗ್ಗೆ ವಿಶೇಷ ಗಮನ ಬೆಳೆಯುತ್ತಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕೂಡಾ ಹೊಸ ರೀತಿಯ ತಾತ್ತ್ವಿಕ ಪ್ರಶ್ನೆಗಳು ಏಳುತ್ತಿವೆ. ಸಾಹಿತ್ಯದ ಕಲಾತ್ಮಕ ಸ್ವರೂಪಕ್ಕಿಂತ ಸಾಹಿತ್ಯ ಸಂಸ್ಕೃತಿಯ ನಿರ್ಮಿತಿಯ ಪ್ರಶ್ನೆಯೇ ಮುಖ್ಯವಾಗಿ ಸಂಶೋಧಿತವಾಗುತ್ತಿದೆ.

ಈ ನೆಲೆಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ನಿರ್ಮಿತಿಯ ಪ್ರಶ್ನೆ ತೌಲನಿಕವಾಗಿ ಜಾಗತಿಕ ಪ್ರಾಮುಖ್ಯತೆ ಪಡೆದಿದೆ. ಉದಾಹರಣೆಗೆ, ನಮ್ಮ 'ಕವಿರಾಜಮಾರ್ಗ' ಇಡೀ ಜಗತ್ತಿನ ಆದಿಸಾಹಿತ್ಯ ಮೀಮಾಂಸೆಯ ಗ್ರಂಥಗಳಲ್ಲಿ ಒಂದು. ಸಂಸ್ಕೃತ, ಪ್ರಾಕೃತ, ಪಾಳಿ, ಚೈನೀಸ್, ಗ್ರೀಕ್ ಲ್ಯಾಟಿನ್, ಪರ್ಶೋ–ಅರೇಬಿಕ್ ಮುಂತಾದ ಕ್ಲಾಸಿಕಲ್ ಭಾಷೆಗಳನ್ನು ಬಿಟ್ಟರೆ ಪ್ರಾಚೀನ ಮಾರ್ಗದಲ್ಲಿ ಈ ಮಟ್ಟದ ಪ್ರಬುದ್ಧ ಸಾಹಿತ್ಯಚಿಂತನೆ ಸಿಗುವುದೇ ಕನ್ನಡ ಮತ್ತು ತಮಿಳುಗಳಲ್ಲಿ. ಕವಿರಾಜಮಾರ್ಗಕಾರ ಸಂಸ್ಕೃತಿಯ ವಿಶ್ವಸ್ಥ ಮಾದರಿ ಜತೆಗೆ ಅನುಸಂಧಾನ ನಡೆಸಿ ಕನ್ನಡ ಕಾವ್ಯ ಪರಂಪರೆಗೊಂದು ಕನ್ನಡಿಯನ್ನು, ಕೈದೀವಿಗೆಯನ್ನು ಒದಗಿಸಿಕೊಟ್ಟ. ಈ ರೀತಿಯ ಸಾಹಿತ್ಯ ಪ್ರಕ್ರಿಯೆಗಳ ಅಧ್ಯಯನ ಈಗ ಎಂದಿಲ್ಲದ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ೧೮೯೮ರಲ್ಲಿ ಕವಿರಾಜಮಾರ್ಗದ ಆಧುನಿಕ ಮುದ್ರಣ ಬಂತು. ೧೮೯೮ ಈ ದೃಷ್ಟಿಯಿಂದ ಆಧುನಿಕ ಕನ್ನಡ ಸಂಸ್ಕೃತಿಯಲ್ಲಿ ತುಂಬ ಮುಖ್ಯ ವರ್ಷ. ಕವಿರಾಜಮಾರ್ಗ ಪ್ರಕಟಣೆಯ ಶತಮಾನೋತ್ಸವದ ವರ್ಷದಲ್ಲಿ ಕರ್ನಾಟಕ ದೇಶೀ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಜಾಗತೀಕರಣ ಪ್ರಕ್ರಿಯೆಗಳ ಬಗೆಗೆ ಮಹತ್ವದ ಚರ್ಚೆಗಳನ್ನು ಪ್ರಾರಂಭಿಸಲು ಸಾಧ್ಯ. ಈ ಮೂಲಕ ಜಾಗತಿಕ ತಾತ್ವಿಕ ಚರ್ಚೆಯೊಂದರಲ್ಲಿ ಕರ್ನಾಟಕ ತನ್ನ ವಿಶಿಷ್ಟ ನಿಲುವನ್ನು, ಅನುಭವವನ್ನು ಮಂಡಿಸಲು ಸಾಧ್ಯ.

ವಿಶಾಲ ಜಗತ್ತಿನ ಗಮನ ಸೆಳೆವಂಥ ಇನ್ನೊಂದು ಬಹುಮುಖ್ಯ ಸಾಂಸ್ಕೃತಿಕ ಪ್ರಕ್ರಿಯೆಯೂ ಕರ್ನಾಟಕದಲ್ಲಿದೆ. ಅದು ೧೨ನೆಯ ಶತಮಾನದ ವಚನ ಚಳುವಳಿ ಮತ್ತು ಅದು ನಂತರ ಕಂಡ ಸಾಂಸ್ಥಿಕ ಸ್ಥಿತ್ಯಂತರಗಳು. ೧೨ನೆಯ ಶತಮಾನದಲ್ಲಿ ಮುಕ್ತ ಆಂದೋಲನವಾಗಿ

ಶುರುವಾದ ಈ ಅಪೂರ್ವ ಚಳುವಳಿ ೧೦ನೇ ಶತಮಾನದ ಹೊತ್ತಿಗೆ ಒಂದು ಸುಭದ್ರವಾದ ಸಾಂಸ್ಥಿಕ ಧರ್ಮವಾಯಿತು. ಪ್ರತಿಭಟನಾತ್ಮಕ ಚಳುವಳಿಯಾಗಿ ಪ್ರಾರಂಭವಾದದ್ದು ೧೬ನೆ ಶತಮಾನದ ಹೊತ್ತಿಗೆ ಪಶ್ಯಾತ್ಮಕ ಕುಲವಾಯಿತು. ತೌಲನಿಕ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಈ ಪ್ರಕ್ರಿಯೆ ತುಂಬ ಮಹತ್ವದ್ದು.

ಉದಾಹರಣೆಗೆಂದು, ಕೇವಲ ಎರಡು ಸಂಗತಿಗಳನ್ನು ತೆಗೆದುಕೊಂಡಿದ್ದೇನೆ. ಇನ್ನು ಸಮಕಾಲೀನ ಅಭಿವೃದ್ಧಿ ಪ್ರಕ್ರಿಯೆಗಳು ಮತ್ತು ಅವಕ್ಕೆ ಜನರ ಪ್ರತಿಸ್ಪಂದನವೂ ಜಾಗತಿಕ ವಿದ್ವಾಂಸರನ್ನು ವಿಶೇಷವಾಗಿ ಆಕರ್ಷಿಸಬಲ್ಲ ವಸ್ತುಗಳು. ಕರ್ನಾಟಕ ಪರಿಸರ, ಪರಿಸರ ಚಳುವಳಿ, ಗ್ರಾಮೀಣ ಬದುಕು, ರೈತ ಚಳುವಳಿ, ಜಾತಿ ಪದ್ಧತಿ, ದಲಿತ ಚಳುವಳಿ ಹೀಗೆ ಕರ್ನಾಟಕ ಎದುರಿಸುತ್ತಿರುವ ಅನುಭವಗಳಿಗೆ ಒಟ್ಟಾರೆಯಾಗಿ ಮಹತ್ವದ ಜಾಗತಿಕ ಪ್ರಾಮುಖ್ಯತೆ ಇದೆ ಮತ್ತು ಇವೆಲ್ಲವನ್ನು ಕರ್ನಾಟಕದ ಧೀಮಂತರು ಆಂತರಿಕವಾಗಿ ಹೇಗೆ ಗ್ರಹಿಸಿದ್ದಾರೆ ಎಂಬುದರ ಹಿನ್ನೆಲೆಯಲ್ಲಿಯೇ ಮಂಡಿಸಬೇಕು.

ಹೊರಜಗತ್ತಿಗೆ ನಮ್ಮನ್ನು ನಾವು ತೆರೆದುಕೊಳ್ಳುವುದು ನಮ್ಮ ಸಾಂಸ್ಕೃತಿಕ ಆತ್ಮ ಗೌರವಕ್ಕೆ ಮಾರಕವಾಗಬಾರದು ಕನ್ನಡತನದ ವಿಶಿಷ್ಟತೆಯನ್ನು ಉಳಿಸಿಕೊಂಡೇ ವಿಶ್ವಾತ್ಮಕ ಶಕ್ತಿಗಳಿಗೆ ಮುಖಾಮುಖಿ ಯಾಗುವ ಒಂದೆರಡು ಪ್ರಾಥಮಿಕ ಮಾರ್ಗಗಳನ್ನಷ್ಟೇ ನಾನು ಇಲ್ಲಿ ಸೂಚಿಸಿದ್ದೇನೆ.

*(ಮೂಲ : ಸಂಸ್ಕೃತಿ ಕಥನ–ಸಂ.: ಶ್ರೀ ಅಗ್ರಹಾರ ಕೃಷ್ಣಮೂರ್ತಿ)*

* * *

# ಕನ್ನಡ ಸಂಸ್ಕೃತಿಯ ಹಿರಿಮೆ, ಗರಿಮೆ

**–ಡಾ॥ ಎಂ.ಚಿದಾನಂದಮೂರ್ತಿ**

ಭಾರತದ ಪ್ರಾಂತಗಳಲ್ಲಿ ಒಂದಾಗಿರುವ ಕರ್ನಾಟಕವು ಒಂಬತ್ತು ಲಕ್ಷ ತೊಂಬತ್ತೆರಡು ಸಾವಿರ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದ್ದು ಆರು ಕೋಟಿ ಹತ್ತು ಲಕ್ಷ ಜನಸಂಖ್ಯೆಯನ್ನು ಪಡೆದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೇರಿದಂತೆ ಮೂವತ್ತು ಜಿಲ್ಲೆಗಳ ಈ ರಾಜ್ಯವು ಸಮಕಾಲೀನದಲ್ಲಿ ಮತ್ತು ಇತಿಹಾಸದಲ್ಲಿ ಭಾರತೀಯ ಸಂಸ್ಕೃತಿಗೆ ಕೊಟ್ಟಿರುವ ಕೊಡುಗೆ ಬಹು ದೊಡ್ಡದು. ಕರ್ನಾಟಕಕ್ಕೆ ತನ್ನದೇ ಆದ ಒಂದು ಚರಿತ್ರೆ ಇದೆ, ಸಂಸ್ಕೃತಿ ಇದೆ. ವಾಸ್ತವವಾಗಿ ಇಂತಹ ಹಲವು ಪ್ರಾದೇಶಿಕ ಸಂಸ್ಕೃತಿಗಳ ಮೊತ್ತವೇ ಭಾರತೀಯ ಸಂಸ್ಕೃತಿ ಎನ್ನಿಸಿಕೊಳ್ಳುತ್ತದೆ. ಸಂಸ್ಕೃತಿ ಎನ್ನುವ ಪದಕ್ಕೆ ಉತ್ತಮ ನಡವಳಿಕೆ ನುಡಿಯಲ್ಲಿ ಸೌಜನ್ಯ ಸಭ್ಯತೆ ಇವೇ ಮೊದಲಾದ ಅರ್ಥಗಳಿದ್ದರೂ ಅದಕ್ಕೆ ಒಂದು ನಾಡಿನ ಜನತೆಯ ಒಟ್ಟಾರೆಯಾದ ಜೀವನ ವಿಧಾನ ಎಂಬ ಒಂದು ಗಮನಾರ್ಹ ಅರ್ಥವೂ ಉಂಟು. ಈ ಎರಡೂ ಅರ್ಥಗಳಲ್ಲಿ ಕರ್ನಾಟಕವು ಸಂಸ್ಕೃತಿಯ ಕ್ಷೇತ್ರದಲ್ಲಿ ಪಡೆದಿರುವ ಸಿದ್ಧಿ ದೊಡ್ಡದು. ಸಾಹಿತ್ಯ, ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ, ಸಂಗೀತ, ಆಡಳಿತ ಇವೇ ಮೊದಲಾದ ಕ್ಷೇತ್ರಗಳಲ್ಲಿ ಕರ್ನಾಟಕವು ಅಪಾರವಾದ ಸಾಧನೆಯನ್ನು ಮಾಡಿದೆ. ಸತ್ಯ, ಔದಾರ್ಯ, ದೇಶ ಪ್ರೇಮ, ಶೌರ್ಯ, ಕರುಣೆ, ಧರ್ಮ ಸಹಿಷ್ಣುತೆ, ಅಹಿಂಸೆ ಇವೇ ಮೊದಲಾದ ಗುಣಗಳು ಅಥವಾ 'ಮೌಲ್ಯ'ಗಳು ಕನ್ನಡಿಗರ ಬದುಕನ್ನು ತಿದ್ದಿ ರೂಪಿಸಿವೆ. ಭಾರತದ ಸಂಸ್ಕೃತಿ ಸಂಪನ್ನ ಪ್ರಾಂತ್ಯಗಳಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ.

## ಕರ್ನಾಟಕ: ಹೆಸರು ಮತ್ತು ಪ್ರಾಚೀನತೆ

'ಕರ್ನಾಟಕ' ಎಂಬುದು ಈ ನಾಡಿನ ಹೆಸರನ್ನೂ ಅದರ ತದ್ಭವವಾದ 'ಕನ್ನಡ' ಎಂಬುದು ಈ ನಾಡಿನ ಜನ ಆಡುವ

ಭಾಷೆಯನ್ನೂ ಸೂಚಿಸುತ್ತದೆ ಎಂಬುದನ್ನು ಬಹು ಜನ ಒಪ್ಪಿಕೊಂಡಿದ್ದಾರೆ. ಕೆಲವೊಮ್ಮೆ 'ಕರ್ನಾಟಕ ಭಾಷೆ', 'ಕನ್ನಡ ನಾಡು' ಎಂದರೂ ತಪ್ಪಾಗುವುದಿಲ್ಲ 'ಕರ್ನಾಟಕ' ಎಂದರೆ 'ಎತ್ತರದ ನಾಡು' ಎಂದು ಕೆಲವರು, ಇನ್ನು ಕೆಲವರು 'ಕರಿಯ ನಾಡು' (ಕಪ್ಪು ಮಣ್ಣಿನ ನಾಡು) ಎಂದು ಅರ್ಥ ಹೇಳುತ್ತಾರೆ. ಈ ಎರಡನೆಯ ಅರ್ಥ ಬಹುಜನರ ಒಪ್ಪಿಗೆಯನ್ನು ಪಡೆದಿದೆ. ಈ ಎರಡನೆಯ ಅರ್ಥ ಬರಲು ಉತ್ತರ ಮತ್ತು ಮಧ್ಯ ಕರ್ನಾಟಕಗಳಲ್ಲಿ ಕರಿಯ ಎರೆ ಮಣ್ಣಿನ ಫಲವತ್ತಾದ ಭೂಮಿ ಇರುವುದೇ ಕಾರಣ. ಒಮ್ಮೆ ನೀರನ್ನು ಹಾಕಿದರೆ ಬಹುಕಾಲ ಹಿಡಿದಿಟ್ಟುಕೊಳ್ಳುವ ಮಣ್ಣು ಆದಾಗಿರುವುದರಿಂದ ಅಲ್ಲಿಯ ಬೆಳೆಗಳಲ್ಲಿ ವೈವಿಧ್ಯವೂ ಇದೆ.

ಈ ನಾಡಿನ ಹೆಸರು ಕ್ರಿಸ್ತಪೂರ್ವದಷ್ಟು ಹಳೆಯದು. ವ್ಯಾಸರ ಸಂಸ್ಕೃತ ಮಹಾಭಾರತದಲ್ಲಿ 'ಕರ್ಣಾಟ' ಹೆಸರು ಬಂದಿದೆ. ಕ್ರಿಸ್ತಶಕ ಎರಡನೆಯ ಶತಮಾನದ 'ಶಿಲಪ್ಪದಿಗಾರಮ್' ಎಂಬ ತಮಿಳು ಕಾವ್ಯದಲ್ಲಿ ಕನ್ನಡಿಗರನ್ನು 'ಕರುನಾಡರ್' ಎಂದು ಕರದಿದೆ. ಸಂಸ್ಕೃತ ಕಾವ್ಯಗಳಲ್ಲಿ ಕರ್ನಾಟಕವನ್ನು ಒಮ್ಮೊಮ್ಮೆ ಕುಂತಲವೆಂದೂ ಕರೆದಿರುವುದುಂಟು. ಕರ್ನಾಟಕದ ದಕ್ಷಿಣದ ತುದಿಯನ್ನು 'ಪುನ್ನಾಡು' 'ಮಹಿಷಮಂಡಲ' (ಇದೇ ಈಗಿನ ಮೈಸೂರು) ಎಂದು ಕರೆಯುತ್ತಿದ್ದರು.

## ಇತಿಹಾಸಪೂರ್ವ ಯುಗ

ಕರ್ನಾಟಕದಲ್ಲಿ ಬಹು ಹಿಂದೆಯೇ ಜನವಸತಿಯು ಇದ್ದಿತೆಂಬುದಕ್ಕೆ ಇಲ್ಲಿ ನಡೆದಿರುವ ಹಲವು ಭೂಶೋಧಗಳು ಸಾಕ್ಷಿ ನೀಡುತ್ತವೆ. ಹಲವು ಸಾವಿರ ವರ್ಷಗಳ ಹಿಂದೆ ಗುಹೆಗಳಲ್ಲಿ ವಾಸವಾಗಿದ್ದು ಕಲ್ಲುಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ಬೇಟೆಯನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದ ಆದಿಮಾನವರು ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಮೈಸೂರು ಜಿಲ್ಲೆಯ ಹೆಮ್ಮಿಗೆ, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ಬಿಜಾಪುರ ಜಿಲ್ಲೆಯ ಖ್ಯಾಡ, ಗುಲ್ಬರ್ಗ ಜಿಲ್ಲೆಯ ಹುಣಸಗಿ ಇವೇ ಮೊದಲಾದೆಡೆಗಳಲ್ಲಿ ವಾಸಿಸುತ್ತಿದ್ದರು. ಉತ್ತರ ಕರ್ನಾಟಕದ ಕೃಷ್ಣ, ಘಟಪ್ರಭಾ, ಮಲಪ್ರಭಾ,

ಮಧ್ಯ ಕರ್ನಾಟಕದ ತುಂಗಭದ್ರೆ, ದಕ್ಷಿಣ ಕರ್ನಾಟಕದ ಕಾವೇರಿ ಈ ನದಿಗಳ ದಂಡೆಗಳು ಪ್ರಾಚೀನ ಮಾನವನ ಸಂಸ್ಕೃತಿಯ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದವು. ಅಷ್ಟೇ ಅಲ್ಲ, ಮುಂದೆಯೂ ಇತಿಹಾಸ ಕಾಲದಲ್ಲಿ ನದಿಯ ದಂಡೆಗಳಲ್ಲಿ ಹಲವಾರು ಸಾಂಸ್ಕೃತಿಕ ಕೇಂದ್ರಗಳು ವರ್ಧಿಸಿದುವು. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸನ್ನತಿ, ಬನವಾಸಿ, ಶ್ರೀರಂಗಪಟ್ಟಣ, ಹಂಪಿ, ಬೇಲೂರು, ತಲಕಾಡು ಇವೆಲ್ಲ ನದಿ ತೀರದ ಅಥವಾ ನದಿಗೆ ಬಹು ಸಮೀಪದ ಪಟ್ಟಣಗಳಾಗಿವೆ (ನದಿಗಳು ಎಲ್ಲ ಸಂಸ್ಕೃತಿಗಳ ಬೆಳವಣಿಗೆಯಲ್ಲೂ ಮಹತ್ತರ ಪಾತ್ರವನ್ನು ವಹಿಸಿವೆ). ಕ್ರಿಸ್ತಪೂರ್ವ ೨೫೦೦ರಲ್ಲಿ ಪ್ರವರ್ಧಮಾನವಾಗಿ ಅಂದಿನ ವಿಶ್ವದ ಗಮನಾರ್ಹ ಸಂಸ್ಕೃತಿಗಳ ಸಾಲಲ್ಲಿ ಒಂದಾಗಿರುವ ಮೊಹೆಂಜೊದಾರೋದ (ಇದು ಈಗಿನ ಪಾಕಿಸ್ತಾನದಲ್ಲಿದೆ) ಸಿಂಧೂ ಕಣಿವೆಯ ಸಂಸ್ಕೃತಿಯ ಜೊತೆ ಕರ್ನಾಟಕವು ವ್ಯಾಪಾರ ಸಂಪರ್ಕವನ್ನು ಪಡೆದಿತ್ತು. ಅಲ್ಲಿ ದೊರಕಿರುವ ಚಿನ್ನದ ಒಡವೆಗಳ ಲೋಹವು ಕರ್ನಾಟಕದ ಕೋಲಾರ ಚಿನ್ನದ ಗಣಿ ಪ್ರದೇಶದ್ದು. ಧಾರವಾಡ ಜಿಲ್ಲೆಯ ಹಳ್ಳೂರಿನಲ್ಲಿ ಕ್ರಿಸ್ತಪೂರ್ವ ಒಂಬತ್ತನೆಯ ಶತಮಾನದ ಕಬ್ಬಿಣವು ದೊರಕಿದೆ. ಭಾರತದಲ್ಲಿ ಕಬ್ಬಿಣದ ಬಳಕೆ ಆರಂಭವಾದುದು ಮೊದಲು ಕರ್ನಾಟಕದಲ್ಲಿ. ತಂತ್ರಜ್ಞಾನದ ಬೆಳವಣಿಗೆಯಲ್ಲಿ ಚಿನ್ನಕ್ಕಿಂತ ಕಬ್ಬಿಣದ ಶೋಧವು ಬಹು ಮುಖ್ಯವಾದುದೆಂಬುದನ್ನು ನೆನಪಿಡಬೇಕು. ಚಿತ್ರದುರ್ಗ, ಹಂಪಿ ಇವೇ ಮೊದಲಾದ ಜಾಗಗಳಲ್ಲಿ ಆದಿಮಾನವರು ಬರೆದ ಅತ್ಯಂತ ಸುಂದರವಾದ ಗುಹಾ ಚಿತ್ರಗಳು ಮತ್ತು ಬಂಡೆ ಚಿತ್ರಗಳು ದೊರಕಿವೆ. ರಾಮಾಯಣ ಕತೆಯಲ್ಲಿ ಬರುವ ವಾಲಿ, ಸುಗ್ರೀವ, ಹನುಮಂತರಿದ್ದ ಕಿಷ್ಕಿಂಧೆಯು ಈಗಿನ ಹಂಪಿಯೇ ಎಂಬ ಐತಿಹ್ಯವಿದೆ.

ಕ್ರಿಸ್ತಪೂರ್ವದಲ್ಲಿಯೇ ಕರ್ನಾಟಕವು ತನ್ನ ಸಂಸ್ಕೃತಿಯಿಂದಾಗಿ ಖ್ಯಾತಿಯನ್ನು ಪಡೆದಿದ್ದಿತು, ಕ್ರಿಸ್ತಶಕ ಎರಡನೆಯ ಶತಮಾನದ ಟಾಲೆಮಿ ಎಂಬ ಗ್ರೀಕ್ ಭೂಗೋಳಜ್ಞನು 'ಬದಿಯಮೈ' (ಬಾದಾಮಿ), 'ಮದೌಗೌಲ' (ಮುದುಗಲ್), 'ಬನವೊಸೆಯ್' (ಬಸವಾಸಿ), 'ಹಿಪ್ಪೊಕೂರ' (ಹೂವಿನ ಹಿಪ್ಪರಗಿ) ಈ ಜಾಗಗಳನ್ನು ಹೆಸರಿಸಿದ್ದಾನೆ.

ಅಲ್ಲದೆ ಅದೇ ಟಾಲೆಮಿಯು 'ಪುನ್ನಾಟ'ದ (ದಕ್ಷಿಣ ಕರ್ನಾಟಕದ ತುತ್ತ ತುದಿ) ಮತ್ತು 'ಮಲಿಪ್ಪಲ'ದ (ಮಲ್ಪೆ) ವೈಢೂರ್ಯಗಳನ್ನು ಕೊಂಡಾಡಿದ್ದಾನೆ.

## ಕನ್ನಡ ಭಾಷೆ, ಸಾಹಿತ್ಯಗಳ ಪ್ರಾಚೀನತೆ

ಕನ್ನಡವು ಭಾರತದ ಪ್ರಾಚೀನ ಭಾಷೆಗಳಲ್ಲಿ ಒಂದು. ಅದರ ಇತಿಹಾಸವು ಕ್ರಿಸ್ತಪೂರ್ವ ಐದು ಆರನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ 'ಮಟಚಿ' ಪದವು (ಮಿಡತೆ) ಕನ್ನಡ ಪದವೆಂದು ಹೇಳಲು ಸಾಧ್ಯವಿದೆ. ಚಿತ್ರದುರ್ಗ ಜಿಲ್ಲೆಯ ಕ್ರಿಸ್ತಪೂರ್ವ ಮೂರನೆಯ ಶತಮಾನದ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಅಚ್ಚಗನ್ನಡ ಪದವಿದೆ. ಈಜಿಪ್ಟಿನ ಆಕ್ಸಿರಿಂಖಸ್ ಎಂಬಲ್ಲಿ ದೊರೆತ ಪೆಪೈರಿ ಸುರುಳಿಗಳಲ್ಲಿ ಕ್ರಿಸ್ತಶಕ ಎರಡನೆಯ ಶತಮಾನದ ಕೆಲವು ಗ್ರೀಕ್ ಪ್ರಹಸನಗಳು ದೊರೆತಿವೆ. ಆ ಪ್ರಹಸನಗಳಲ್ಲಿ ಕೆಲವು ಪಾತ್ರಗಳು ಆಡುವ ಭಾಷೆ ಕನ್ನಡವೆಂದು ಕೆಲವರು ಹೇಳುತ್ತಾರೆ (ಅದು ತುಳು ಎಂದು ಹೇಳುವವರೂ ಇದ್ದಾರೆ). ನಮಗೆ ದೊರಕುವ ಮೊದಲ ಕನ್ನಡದ ದೊಡ್ಡ ಬರಹವೆಂದರೆ ಸುಮಾರು ಕ್ರಿ.ಶ. ೪೫೦ರ ಬೇಲೂರು ತಾಲ್ಲೂಕಿನ ಹಲ್ಮಿಡಿ ಶಿಲಾಶಾಸನ. ಇದು ಕನ್ನಡಿಗರ ಶೌರ್ಯ ಸಾಹಸಗಳನ್ನೂ ದಾನ ಗುಣವನ್ನೂ ಚಿತ್ರಿಸುತ್ತದೆ. ಕನ್ನಡ ದೊರೆಗಳಾದ ಕದಂಬರಿಗೂ ಅವರ ಸ್ಪರ್ಧಿಗಳಾಗಿದ್ದ ಕಂಚಿಯ ಪಲ್ಲವರಿಗೂ ಯುದ್ಧ ನಡೆದಾಗ ಕದಂಬರ ಪರವಾಗಿ ವಿಜಅರಸ ಎಂಬ ಶೂರನು ಹೋರಾಡಿ ಜಯವನ್ನು ಗಳಿಸಿಕೊಡುತ್ತಾನೆ. ಆಗ ಅವನ ಖಡ್ಗವನ್ನು ಎಲ್ಲರ ಎದುರಿಗೆ ತೊಳೆದು ಸನ್ಮಾನಿಸಿ ಅವನಿಗೆ ಹಲ್ಮಿಡಿ ಗ್ರಾಮವನ್ನು ಉಂಬಳಿಯಾಗಿ ಬಿಟ್ಟುಕೊಡುತ್ತಾರೆ (ಇಂತಹ ದಾನಗಳನ್ನು 'ಬಾಳ್ಗಳ್ಚು' ಎಂದು ಕರೆಯುತ್ತಿದ್ದರು. ಬಾಳ್–ಕತ್ತಿ. ಕಳ್ಚು–ತೊಳೆ). ಅವನು ತನಗೆ ಉಂಬಳಿಯಾಗಿ ಬಂದ ಹಲ್ಮಿಡಿ ಗ್ರಾಮದ ಕೆಲವು ಗದ್ದೆಗಳನ್ನು ವಿದ್ವಾಂಸರಾದ ಬ್ರಾಹ್ಮಣರಿಗೆ ಬಿಟ್ಟುಕೊಡುತ್ತಾನೆ. ಸತ್ತ್ವಶಾಲಿಯಾದ ಗದ್ಯದಲ್ಲಿ ಈ ಶಾಸನ ಅಂದಿನ ಸಂಸ್ಕೃತಿಯ ಒಂದು ಭಾಗವನ್ನು ಚಿತ್ರಿಸುತ್ತದೆ, ಈ ಶಾಸನದ ಭಾಷೆಯನ್ನು ಪೂರ್ವದ

ಹಳಗನ್ನಡವೆನ್ನುತ್ತಾರೆ. ಅದೇ ಮುಂದೆ ಬೆಳೆದು ಎಂಟು ಒಂಬತ್ತನೆಯ ಶತಮಾನದಲ್ಲಿ ಹಳಗನ್ನಡವಾಯಿತು, ನಡುಗನ್ನಡವೇ ಮುಂದೆ ಆಧುನಿಕ ಕಾಲದಲ್ಲಿ ಹೊಸಗನ್ನಡ ಅಥವಾ ಈಗಿನ ಕನ್ನಡವಾಯಿತು. ಕನ್ನಡವು ಭಾರತದ ಅತ್ಯಂತ ಮಧುರವೂ ಸಮರ್ಥವೂ ಆದ ಭಾಷೆಗಳಲ್ಲೊಂದು.

ಕನ್ನಡದಲ್ಲಿ ಕ್ರಿಸ್ತಪೂರ್ವದಿಂದಲೂ ಬಹು ಸುಂದರವಾದ ಜಾನಪದ ಸಾಹಿತ್ಯವಿದ್ದಿತು. ಕುಟ್ಟುವಾಗ, ಬೀಸುವಾಗ, ಕಳೆ ಕೀಳುವಾಗ, ತೊಟ್ಟಿಲು ತೂಗುವಾಗ, ಕೋಲು ಹಿಡಿದು ಕುಣಿಯುವಾಗ, ಹಬ್ಬಗಳಲ್ಲಿ ಕನ್ನಡಿಗರು ಹಾಡುಗಳನ್ನು ಹೇಳಿಕೊಂಡು ಸುಖಿಸುತ್ತಿದ್ದರು. ಮನಸ್ಸನ್ನು ತುಂಬಿ, ದುಃಖವನ್ನು ಮರೆಸುತ್ತ, ಉನ್ನತ ಆದರ್ಶಗಳನ್ನು ಅರಿವಿಗೆ ತಂದುಕೊಡುತ್ತಿದ್ದ ಆ ಕಾಲದ ಹಳ್ಳಿಯ ಹಾಡುಗಳು ಜನತೆಯ ನಾಲಗೆಯ ಮೇಲೆ ನಲಿದವು. ಅವನ್ನು ಯಾರೂ ಬರೆದಿಡಲಿಲ್ಲ ವಾದ್ದರಿಂದ ಅವು ನಮಗೆ ಇಂದು ದೊರಕುತ್ತಿಲ್ಲ. ಆದರೆ ತ್ರಿಪದಿಯ ಛಂದಸ್ಸಿನಲ್ಲಿ ರಚಿತವಾದ ಜಾನಪದ ಹಾಡುಗಳ ಏಳನೆಯ ಶತಮಾನಕ್ಕೆ ಸೇರಿದ ಒಂದು ಶಾಸನವು ಬಾದಾಮಿ ಪಕ್ಕದ ತಟ್ಟುಕೋಟೆ ಎಂಬ ಗ್ರಾಮದಲ್ಲಿ ದೊರಕಿದೆ. ಕಪ್ಪೆ ಅರಭಟ್ಟ ಎಂಬ ಒಬ್ಬ ವೀರನ ವರ್ಣನೆ ಅದು:

ಸಾಧುಗೆ ಸಾಧುಗೆ ಮಾಧುರ್ಯಂಗೆ ಮಾಧುರ್ಯನ್
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ ಪೆರನಲ್ಲ ॥

ಆ ವೀರ ಒಳ್ಳೆಯವರಿಗೆ ಒಳ್ಳೆಯವನು; ಕೆಟ್ಟವರಿಗೆ ತೀರಾ ಕೆಟ್ಟವನು. ಅವನನ್ನು ಕೆಣಕುವುದೂ ಒಂದೇ, ಕಟ್ಟಿದ ಸಿಂಹವನ್ನು ಬಿಚ್ಚಿ ಎದುರಿಸುವುದೂ ಒಂದೇ. ಇದು ಬಾದಮಿ ಚಾಲುಕ್ಯರ ಕಾಲಕ್ಕೆ ಸೇರಿದ ಬರಹ. ಅವರ ಕಾಲದಲ್ಲಿ (ಏಳನೆಯ ಶತಮಾನದಲ್ಲಿ) ಕನ್ನಡದ ಶಿಷ್ಟ ಸಾಹಿತ್ಯ ಅಥವಾ ಲಿಖಿತ ಸಾಹಿತ್ಯ ಆರಂಭವಾಯಿತು. ಕನ್ನಡದ ಮೊದಮೊದಲ ಕವಿಗಳ ಬರಹಗಳು ನಮಗೆ ಲಭ್ಯವಾಗಿಲ್ಲ. ಕನ್ನಡದ ಮೊದಲ ಲಭ್ಯ ಕೃತಿ ರಾಷ್ಟ್ರಕೂಟ ನೃಪತುಂಗ ಚಕ್ರವರ್ತಿಯ ಕಾಲದಲ್ಲಿ

ಹುಟ್ಟಿದ 'ಕವಿರಾಜಮಾರ್ಗ'. ಕವಿ ಎಂದರೆ ಯಾರು, ಕಾವ್ಯ ಎಂದರೆ ಯಾವುದು, ಕಾವ್ಯದ ಪ್ರಯೋಜನಗಳು ಯಾವುವು. ಕಾವ್ಯದ ಗುಣದೋಷಗಳನ್ನು ಗುರುತಿಸುವ ಬಗೆ ಹೇಗೆ ಇವೇ ಮೊದಲಾದ ಸಂಗತಿಗಳನ್ನು ತಿಳಿಸಿಕೊಡುವ ಆ ಕೃತಿಯು ಪ್ರಾಸಂಗಿಕವಾಗಿ ಕರ್ನಾಟಕವನ್ನೂ ಅದರ ವಿಸ್ತಾರವನ್ನೂ ಕನ್ನಡಿಗರ ಗುಣ ಸ್ವಭಾವಾದಿಗಳನ್ನೂ ಹೇಳುತ್ತದೆ.

ಕಾವೇರಿಯಿಂದಮಾ ಗೋ–
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯವಿಲೀನವಿಶದವಿಷಯವಿಶೇಷಂ

ಒಂಬತ್ತನೆಯ ಶತಮಾನದಲ್ಲಿ ಕರ್ನಾಟಕ ಅಥವಾ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ್ದಿತು. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ. ಪುಲಿಗೆರೆ (ಲಕ್ಷ್ಮೇಶ್ವರ), ಕಿಸುವೊಳಲ್ (ಪಟ್ಟದ ಕಲ್ಲು), ಕೊಪ್ಪಳ ಮತ್ತು ಒಕ್ಕುಂದ (ಇದು ಬೆಳಗಾವಿ ಜಿಲ್ಲೆಯಲ್ಲಿದೆ)– ಇವೇ ಆ ನಾಲ್ಕು ನಗರಗಳು.

ಆ ನಾಡಿನ ಜನತೆಯನ್ನು ಕಂಡರೆ ಕವಿಗೆ ಹೆಮ್ಮೆ. ಅವರು ವ್ಯರ್ಥವಾಗಿ ಮಾತನಾಡುವವರಲ್ಲವೆಂದೂ ಹದವರಿತು ಮಾತನ್ನು ಬಳಸುವ ಮಿತಭಾಷಿಗಳೆಂದೂ ಯೋಚಿಸುವ ಶಕ್ತಿಯುಳ್ಳವರೆಂದೂ ಚದುರರೆಂದೂ ಕವಿ ಹೊಗಳಿದ್ದಾನೆ. ಅವರಲ್ಲಿ ಅವಿದ್ಯಾವಂತರೂ ಕೂಡ ಉತ್ಕೃಷ್ಟ ಕಾವ್ಯವನ್ನು ಓದಿಸಿ ಕೇಳಿ ಸುಖಿಸುವ ಶಕ್ತಿಯನ್ನು ಪಡೆದ ಕಾವ್ಯಪ್ರೇಮಿಗಳೇ ಆಗಿದ್ದರು (ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್'). ಚಿಕ್ಕಮಕ್ಕಳೂ ಕೊನೆಗೆ ಮೂಕರೂ ಕೂಡ ಯಾರಾದರೂ ವಿವೇಕವನ್ನು ಬೋಧಿಸಿದರೆ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಪಡೆದಿದ್ದರು.

ಸುಭಟರ್ಕಳ್, ಕವಿಗಳ್, ಸು–
ಪ್ರಭುಗಳ್, ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್,
ಅಭಿಮಾನಿಗಳ್, ಅತ್ಯುಗ್ರರ್,
ಗಭೀರಚಿತ್ತರ್, ವಿವೇಕಿಗಳ್ ನಾಡವರ್ಗಳ್ ॥

ಕನ್ನಡಿಗರು ಸುಭಟರು, ಕಾವ್ಯಪ್ರೇಮಿಗಳು, ಆಳುವ ಶಕ್ತಿಯುಳ್ಳವರು, ಚೆಲುವರು, ಜನಬಳಕೆಯವರು, ಸದ್ಗುಣಿಗಳು, ಅಭಿಮಾನಿಗಳು, ರಣಭಯಂಕರರು, ಗಂಭೀರರು, ವಿವೇಕಿಗಳು–ಕರ್ನಾಟಕ ಸಂಸ್ಕೃತಿಯ ಎಲ್ಲ ಉತ್ತಮ ಮೌಲ್ಯಗಳನ್ನು ಕವಿರಾಜಮಾರ್ಗಕಾರ ಮೇಲಿನ ಪದ್ಯದಲ್ಲಿ ದಾಖಲಿಸಿದ್ದಾನೆ ಎನ್ನಿಸುತ್ತದೆ.

## ಮೂಲ ಕನ್ನಡ ನಾಡಿನ ವಿಸ್ತಾರ

ಒಂಬತ್ತನೇ ಶತಮಾನದ ಕವಿರಾಜ ಮಾರ್ಗದಲ್ಲಿ ಬರುವ ಕನ್ನಡನಾಡಿನ ಗಡಿಗಳ ವರ್ಣನೆ ಪ್ರಸಿದ್ಧವಾದುದು. ಅಲ್ಲಿ ಬರುವ ಕನ್ನಡ ನಾಡಿನ ಉತ್ತರ ಗಡಿ ಗೋದಾವರಿಯು ಮಹಾರಾಷ್ಟ್ರದ ಉತ್ತರದ ಕೊನೆ ಜಿಲ್ಲೆಯಾದ ನಾಸಿಕ್ ಜಿಲ್ಲೆಯ ನಾಸಿಕ್ ನಗರದ ಪಕ್ಕದಲ್ಲಿ ಹರಿಯುವ ಗೋದಾವರಿ ನದಿಯೆಂಬಲ್ಲಿ ಅನುಮಾನವಿಲ್ಲ. ಇಂದಿಗೂ ಆ ಜಿಲ್ಲೆಯಲ್ಲಿನ ಮರಾಠಿ ಜನರು ನಾಯಿಗಳಿಗೆ 'ಕರಿಯ' ಎಂಬ ಹೆಸರನ್ನಿಡುವರಲ್ಲದೆ 'ಅಣ್ಣ' ಇತ್ಯಾದಿ ಪದಗಳನ್ನು ಬಳಸುತ್ತಾರೆ. ಗೋಧೂರ್, ಕೋಠೂರ್ ಇತ್ಯಾದಿ ಕನ್ನಡ ಸ್ಥಳ ನಾಮಗಳು ಅಲ್ಲಿ ಉಂಟು. ಅಷ್ಟೇ ಅಲ್ಲ, ಆ ಜಿಲ್ಲೆಯ ಹಟ್ಕಾರ್ ಕಾನಡಿ ಎಂಬ ಹೆಸರಿನ ಜನಾಂಗವು (ಕಾನಡಿ=ಕನ್ನಡಿ; ಹಟ್ಕಾರ್=ಹಟ್ಟಿಕಾರ) ಮಾತನಾಡುವ ಕನ್ನಡವು ಹಳಗನ್ನಡಕ್ಕೆ ಸಮೀಪವಾಗಿದೆ. ಮಹಾರಾಷ್ಟ್ರದ ಎಲ್ಲ ಜಿಲ್ಲೆಗಳಲ್ಲಿಯೂ ಇಂತಹ ನೂರಾರು, ಸಾವಿರಾರೂ ಉದಾಹರಣೆಗಳಿವೆ. ನಾಗಪುರ ಜಿಲ್ಲೆಯಲ್ಲಿ ಗೋಲರ್ ಅಥವಾ ಹೋಲ್ಕರ್ (ಗೊಲ್ಲರು, ಹೊಲೆಯರು) ಎನ್ನುವ ವರ್ಗದ ಜನರು ಕನ್ನಡ ಮಾತನಾಡುತ್ತಾರೆ.

ಮುಂಬೈ ಉದಾಹರಣೆಯನ್ನೇ ನೋಡಿ, ಅಲ್ಲಿನ ಮೂಲ ನಿವಾಸಿಗಳಾದ "ಕೋಳಿ" ಜನರು ಹಿಂದೆ ದ್ರಾವಿಡ ವರ್ಗದವರಾಗಿದ್ದು

ಅವರಾಡುವ ಮರಾಠಿ ಮತ್ತು ಕೊಂಕಣಿ ಭಾಷೆಗಳಲ್ಲಿ ಕನ್ನಡ ಪದಗಳಿವೆ. ಅವರು ಹಿಂದೆ ಕನ್ನಡ ಮಾತನಾಡುತ್ತಿದ್ದರು. ಮುಂಬೈ ದ್ವೀಪಗಳನ್ನು ಆಳುತ್ತಿದ್ದ ಪೋರ್ಚುಗೀಸ್ ದೊರೆಯು ಅವುಗಳನ್ನು ತನ್ನ ಅಳಿಯ ಇಂಗ್ಲೆಂಡಿನ ರಾಜಕುಮಾರನಿಗೆ ಬಳವಳಿಯಾಗಿ ನೀಡಿದಾಗ ಇಂಗ್ಲೆಂಡ್ ಸರ್ಕಾರ ಕ್ರಿ.ಶ. ೧೬೭೦ರಲ್ಲಿ ಆ ದ್ವೀಪಗಳಿಗೆ ರಚಿಸಿದ ಇಂಗ್ಲಿಷ್ ಭಾಷೆಯ ಕಾನೂನುಗಳನ್ನು ಪೋಚುಗೀಸ್ ಮತ್ತು ಕನ್ನಡ ಭಾಷೆಗಳಿಗೆ ಅನುವಾದಿಸಿತು; ಹಿಂದಿನ ಅಧಿಕಾರಿಗಳಿಗಾಗಿ ಪೋರ್ಚುಗೀಸ್ ಭಾಷೆಯಲ್ಲಿ, ಸ್ಥಳೀಯ ಜನರಿಗಾಗಿ ಕನ್ನಡದಲ್ಲಿ ಎಂಬುದು ಸ್ಪಷ್ಟ ಕ್ರಿ.ಶ. ೧೮೧೮ರಲ್ಲಿ ಮುಂಬೈ ಗವರ್ನರ್ ಎಲ್ಫಿನ್‌ಸ್ಟನ್ನನು ಮುಂಬೈಗೆ ಬಂದಾಗ ಅವನಿಗೆ ಅರ್ಪಿಸಿದ ಮನವಿ ಪತ್ರವು ಮರಾಠಿಯಲ್ಲಿರಲಿಲ್ಲ. ಕನ್ನಡದಲ್ಲಿತ್ತು. ಎಂದರೆ ಅಲ್ಲಿನ ಜನ ಕನ್ನಡಿಗರಾಗಿದ್ದರು. ಮರಾಠಿ ಭಾಷೆಯಲ್ಲಿ ಶೇಕಡ ಇಪ್ಪತ್ತರಷ್ಟು ಪದಗಳು ಕನ್ನಡ, ಮಹಾರಾಷ್ಟ್ರದ ಚರಿತ್ರೆಯೆಂದರೆ ಕರ್ನಾಟಕದ ಚರಿತ್ರೆಯೇ, ಕದಂಬರು, ಬಾದಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೇವಗಿರಿ ಯಾದವರು ಎಲ್ಲರೂ ಕನ್ನಡಿಗರೇ. ಯಾವುದನ್ನು ಇಂದು ಮಹಾರಾಷ್ಟ್ರ ಎನ್ನುತ್ತೇವೆಯೋ ಅದು ಗೋವೆ ಸೇರಿದಂತೆ ಮೊದಲು ಕನ್ನಡ ನಾಡೇ ಆಗಿದ್ದಿತು. ಹೊರಗಿನಿಂದ ಬಂದ ಮರಾಠಿಯು ಕನ್ನಡವನ್ನು ಅರಗಿಸಿಕೊಂಡು ಅದನ್ನು ಅಲ್ಲಿಂದ ಓಡಿಸಿತು.

ಆಂಧ್ರದ ಕರ್ನೂಲು, ಅನಂತಪುರ, ತಮಿಳುನಾಡಿನ ಸೇಲಂ, ಧರ್ಮಪುರಿ, ನೀಲಗಿರಿ, ಕೇರಳದ ಇಂದಿನ ಕಾಸರಗೋಡು ಇವು ಹಿಂದೊಮ್ಮೆ ಕನ್ನಡ ಪ್ರದೇಶವೇ ಆಗಿದ್ದುವು.

ಬೆಳಗಾವಿ ಮೂಲ ಕನ್ನಡ ನಾಡಿನ ಕೇಂದ್ರದಲ್ಲಿದ್ದು ಕರ್ನಾಟಕದ ರಾಜಧಾನಿಯಾಗಬೇಕಿದ್ದುದು ಇಂದಿನ ಕರ್ನಾಟಕದ ಗಡಿಯಲ್ಲಿದ್ದು ಅದನ್ನು ಉಳಿಸಿಕೊಳ್ಳಲು ಹೋರಾಡಬೇಕಾಗಿರುವುದು ಎಂತಹ ದುರಂತ!

*(ಆಯ್ದ ಭಾಗ)*

* * *

ಓದು ಪತ್ಯ

## ಕನ್ನಡವೆಂದರೆ ಬರಿ ನುಡಿಯಲ್ಲ

–ಪ್ರೊ| ಕೆ.ಎಸ್.ನಿಸಾರ್ ಅಹಮದ್

ಕನ್ನಡವೆಂದರೆ ಬರಿ ನುಡಿಯಲ್ಲ,
ಹಿರಿದಿದೆ ಅದರರ್ಥ;
ಜಲವೆಂದರೆ ಕೇವಲ ನೀರಲ್ಲ,
ಅದು ಪಾವನ ತೀರ್ಥ.

ಕನ್ನಡವೆಂದರೆ ಬರಿ ನಾಡಲ್ಲ;
ಭೂಪಟ, ಗೆರೆ, ಚುಕ್ಕೆ;
ಮರವೆಂದರೆ ಬರಿ ಕಟ್ಟಿಗೆಯೆ?
ಶ್ರೀಗಂಧದ ಚಕ್ಕೆ.

ಕನ್ನಡ ಬರಿ ಕರ್ನಾಟಕವಲ್ಲ
ಅಸೀಮ, ಅದು ಅದಿಗಂತ;
ದೇವರು ಕೇವಲ ವಿಗ್ರಹವಲ್ಲ,
ಅಂತರ್ಭಾವ ಅನಂತ.

ಕನ್ನಡವೆಂದರೆ ಜನಜಂಗುಳಿಯಲ್ಲ
ಜೀವನ ಶೈಲಿ, ವಿಧಾನ;
ವಾಯುವೆಂದರೆ ಬರಿ ಹವೆಯೇ ಅಲ್ಲ;
ಉಸಿರದು ಪಂಚಪ್ರಾಣ.
ಕನ್ನಡವಲ್ಲ ತಿಂಗಳು ನಡೆಸುವ
ಗುಲ್ಲಿನ ಕಾಮನಬಿಲ್ಲು;

ರವಿ ಶಶಿ ತಾರೆಯ ನಿತ್ಯೋತ್ಸವವದು,
ಸರಸತಿ ವೀಣೆಯ ಸೊಲ್ಲು.

*

**St. Francis College**
**Course Plan**
**Dept: Kannada**

**Curse: BBA (Reg)**

**Semester: 4th**

| **Module - I** 14Hrs | **No.ofHours** |
|---|---|
| 1.ವೈಶಂಪಾಯನ ಗಿಳಿ: ನಾಗವರ್ಮ | 3 |
| 2.1 ದಾಳ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ | 3 |
| 3.ಕರಕುಶಲ ಕಲೆಗಳ ಮೇಲೆ ತಂತ್ರಜ್ಞಾನದ ಪ್ರಭಾವ : ಡಾ.ಕರೀಗೌಡ ಬೀಚನಹಳ್ಳಿ | 4 |
| 4 .ಅಂತರ್ಜಾಲ ಮಾಯಾಬಜಾರ್: ಟಿ. ಜಿ.ಶ್ರೀನಿಧಿ | 4 |
| **Module - II** **14Hrs** | |
| 5.ಕೀರ್ತನೆಗಳು : ವಿವಿಧ ಕೀರ್ತನಕಾರರು | 3 |
| 2.2 ದಾಳ : ಪ್ರೊ. ಎಸ್. ಜಿ.ಸಿದ್ಧರಾಮಯ್ಯ | 3 |
| 6.ಬದಲಾಗುತ್ತಿರುವ ಬಾನುಲಿ :ಡಾ. ಡಿ. ಎಸ್. ನಾಗಭೂಷಣ | 4 |
| 7.ಜಾಹೀರಾತುಗಳು: ಭಾಷಿಕ ಸಂವಹನದ ಭ್ರಷ್ಟತೆ: ಡಾ. ಎಚ್. ಎಸ್. ಶ್ರೀಮತಿ | 4 |
| | |
| **Module - III** **13Hrs** | |
| 8.ಮುತ್ತಿನ ಚೆಂಡಿನ ಪ್ರಸಂಗ : ನಂಜುಂಡ ಕವಿ | 3 |
| 9.ಡಿಜಿಟಲ್ ಯುಗದಲ್ಲಿ ಕನ್ನಡ ಜಗತ್ತು: ಹೊಸ ಸವಾಲುಗಳು : ಡಾ. ವಿ.ಚಂದ್ರಶೇಖರ ನಂಗಲಿ | 4 |
| 10.ಸಂವಹನ : ಅರ್ಥವ್ಯಾಪ್ತಿ : ಡಾ. ಡಿ.ವಿ. ಪರಮಶಿವಮೂರ್ತಿ | 3 |
| 2.3 ದಾಳ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ | 3 |
| | |
| **Module - IV** **09 Hrs** | |
| 11.ಪರಮಸಾರದ ಹೃದಯನಾರು : ಕನಕದಾಸ | 3 |
| 2.4 ದಾಳ : ಪ್ರೊ. ಎಸ್. ಜಿ .ಸಿದ್ಧರಾಮಯ್ಯ | 3 |
| 12. ಪರೀಕ್ಷಾಮಾರ್ಗದರ್ಶನ | 1 |
| 13. ಹಿಂದಿನಪ್ರಶ್ನೆಪತ್ರಿಕೆಗಳು | 2 |
| | |
| **Total Numbers of Hours** | **50** |

**Subject Teacher** **HOD** **Principal**